• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಸವ ಜಯಂತಿ ಶುಭಾಶಯ

ಈದ್ ಉಲ್ ಫಿತ್ರ್ ಶುಭಾಶಯ

ಸಿನಿಮಾ ಪುರವಣಿ
ಸಿನಿಮಾ ಪ್ರೇಕ್ಷಕ ಮನರಂಜನೆ ಪಡೆಯುವುದರ ಜೊತೆಗೆ ಒಂದಷ್ಟು ವಿಷಯಗಳನ್ನು ತಿಳಿದುಕೊಂಡು ಹೋಗಬೇಕು ಎನ್ನುತ್ತಾರೆ ನಟ ಶರಣ್

ಚರ್ಚೆಗೆ ಗುರಿಯಾದ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, ಶಾಸಕ ಸಿ.ಟಿ. ರವಿ ಹೇಳಿಕೆ

‘ನ್ಯಾಯ’ದ ಚಾಟಿಗೆ ಎದಿರೇಟು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನ ದುರಿತ ಕಾಲದಲ್ಲಿ ಆಳುವವರ ನಿರ್ಲಕ್ಷ್ಯದಿಂದಾಗಿ ಜನಸಾಮಾನ್ಯರು ಎದುರಿಸುತ್ತಿರುವ ಸಂಕಟಗಳಿಗೆ ಧ್ವನಿಯಾಗಿ ಸರ್ಕಾರಕ್ಕೆ ಚಾಟಿ ಬೀಸಿದ ನ್ಯಾಯಾಂಗದ ನಡೆಯನ್ನು ವಿಮರ್ಶೆಗೆ ಒಡ್ಡಿದ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, ಶಾಸಕರೂ ಆಗಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿಕೆ ಸಾರ್ವಜನಿಕವಾಗಿ ಚರ್ಚೆಗೆ ಗುರಿಯಾಗಿದೆ.

ಕರ್ನಾಟಕಕ್ಕೆ ಅಪೇಕ್ಷಿತ ಪ್ರಮಾಣದಲ್ಲಿ ಆಮ್ಲಜನಕ ಪೂರೈಸದೇ ಇರುವ ಬಗ್ಗೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದ ಹೈಕೋರ್ಟ್, ‘ಪ್ರಾಣವಾಯು’ ಪೂರೈಕೆಯನ್ನು ಖಾತ್ರಿಪಡಿಸುವಂತೆ ಕಟ್ಟಪ್ಪಣೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಅಲ್ಲಿಯೂ ಕೂಡ ಕೇಂದ್ರ ಸರ್ಕಾರ ಮುಖಭಂಗ ಅನುಭವಿಸಿತ್ತು.

ಕೋವಿಡ್ ರೋಗಿಗಳಿಗೆ ಹಾಸಿಗೆ ಸೇರಿದಂತೆ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ ಕೊರತೆಯ ಬಗ್ಗೆ ಪರಾಮರ್ಶೆ ನಡೆಸಿ ಸರ್ಕಾರಕ್ಕೆ ನಿರ್ದೇಶನ ನೀಡಿದ್ದ ಹೈಕೋರ್ಟ್, ಚಾಮರಾಜನಗರ ದುರಂತದ ತನಿಖೆಗೆ ಪ್ರತ್ಯೇಕ ಸಮಿತಿ ರಚನೆಯಂತಹ ದಿಟ್ಟ ನಿರ್ಧಾರ ಕೈಗೊಂಡಿತ್ತು. ಅಷ್ಟಲ್ಲದೇ ಲಸಿಕೆ ಅಭಿಯಾನದ ವಿಷಯದಲ್ಲಿ ಸರ್ಕಾರದ ಅಸಡ್ಡೆಗೆ ಕೆಂಡ ಕಾರಿತ್ತು. ಗುರುವಾರ ಈ ಬಗ್ಗೆ ವಿಚಾರಣೆ ನಡೆಸಿದಾಗಲೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಧೋರಣೆಯ ಬಗ್ಗೆ ಅಸಹನೆ ವ್ಯಕ್ತಪಡಿಸಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳು ಸರ್ಕಾರದ ಧೋರಣೆಯ ಬಗ್ಗೆ ಮಾಡಿದ ವಿಮರ್ಶೆ ಕುರಿತು ಪ್ರತಿಕ್ರಿಯಿಸಿದ ಸಚಿವ ಹಾಗೂ ಶಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದು ಸಾರ್ವಜನಿಕ ವಲಯದಲ್ಲಿ ಚರ್ಚೆಗೂ ಕಾರಣವಾಗಿದೆ.

ಲಸಿಕೆ ಸಿಗದಿದ್ದರೆ ನಾವು ನೇಣು ಹಾಕಿಕೊಳ್ಳಬೇಕಾ?: ಡಿವಿಎಸ್

‘ನಾಳೆಯೇ ಲಸಿಕೆ ಕೊಡಿ ಎಂದು ಹೈಕೋರ್ಟ್ ಹೇಳಿದರೆ ಹೇಗೆ ಸಾಧ್ಯ? ಕಂಪನಿಗಳು ಲಸಿಕೆ ತಯಾರಿಸದಿದ್ದರೆ ನಾವು ನೇಣು ಹಾಕಿಕೊಳ್ಳಲು ಆಗುತ್ತದೆಯೇ’ ಎಂದು ಡಿ.ವಿ. ಸದಾನಂದಗೌಡ ಪ್ರಶ್ನಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಲಸಿಕೆ ತಯಾರಿಕೆಗೆ ಕೆಲವು ರಾಷ್ಟ್ರಗಳಿಂದ ಕಚ್ಚಾ ಸಾಮಗ್ರಿ ಬರುವುದು ತಡವಾಗಿದ್ದರಿಂದ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ. ಹೀಗಾಗಿ ತಡವಾಗಿದೆ' ಎಂದು ಹೇಳಿದರು.

ನಾವು (ಕೇಂದ್ರ ಸರ್ಕಾರ) ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇವೆ. ಸಾಂಕ್ರಾಮಿಕ ರೋಗವನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಿಲ್ಲ. ಆರಂಭದಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ಸಂದರ್ಭದಲ್ಲಿ ವಿರೋಧ ಪಕ್ಷಗಳ ಅಪಪ್ರಚಾರದಿಂದ ಜನರು ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರಲಿಲ್ಲ. ಶೇ 52 ರಷ್ಟು ಮಂದಿ ಮಾತ್ರ ಲಸಿಕೆ ತೆಗೆದುಕೊಂಡರು. ಇದರಿಂದ 18 ವರ್ಷ ಮೇಲ್ಪಟ್ಟವರಿಗೆ ಕೊಡಲು ತೀರ್ಮಾನಿಸಲಾಯಿತು ಎಂದು ವಿವರಿಸಿದರು.

ಎರಡನೇ ಅಲೆ ಜೋರಾಗುತ್ತಿದ್ದಂತೆ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಹಾಕಿಸಿಕೊಳ್ಳಲು ಬಂದರು. ಇದರಿಂದ ಲಸಿಕೆ ಕೊರತೆ ಆಯಿತು. ಈಗ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕಲು ಹಿನ್ನಡೆ ಆಗಿದೆ. ಕೆಲವೇ ದಿನಗಳಲ್ಲಿ ಉತ್ಪಾದನೆ ಪ್ರಮಾಣ ಹೆಚ್ಚಾಗಲಿದೆ ಎಂದು ಸದಾನಂದಗೌಡ ಹೇಳಿದರು.

ನ್ಯಾಯಾಧೀಶರೇನು ಸರ್ವಜ್ಞರೇ: ಸಿ.ಟಿ. ರವಿ

ಬೆಂಗಳೂರು: ನ್ಯಾಯಾಧೀಶರೇನು ಸರ್ವಜ್ಞರಲ್ಲ ಎಂದು ಸಿ.ಟಿ. ರವಿ ಹೇಳಿದರು.

ಎರಡೇ ದಿನಗಳಲ್ಲಿ ಲಸಿಕೆ ನೀಡಬೇಕು ಎಂದು ಹೈಕೋರ್ಟ್ ತಾಕೀತು ಮಾಡಿರುವ ಕಾರಣ ಸುದ್ದಿಗಾರರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

‘ಕೇಂದ್ರವಿರಲಿ, ರಾಜ್ಯವಿರಲಿ ತಜ್ಞರ ಸಮಿತಿ ನೀಡುವ ವರದಿಯನ್ನು ಆಧರಿಸಿಯೇ ಕೆಲಸ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೂ ಈ ವಿಚಾರವನ್ನು ಹೇಳಿದೆ. ಕೇಂದ್ರದ ವಾದವನ್ನು ಸುಪ್ರೀಂಕೋರ್ಟ್ ಕೂಡಾ ಒಪ್ಪಿದೆ’ ಎಂದು ಅವರು ಪ್ರತಿಪಾದಿಸಿದರು. ‘ಕೋವಿಡ್ ಮೊದಲ ಅಲೆಗಿಂತ ಎರಡನೇ ಅಲೆ ಹೆಚ್ಚು ಪ್ರಬಲವಾಗಿದೆ. ವೈರಾಣು ಸೋಂಕು ದಿನೇ ದಿನೇ ಹೆಚ್ಚುತ್ತಿದೆ. ದಿಢೀರನೇ ಬಂದ ಕಾರಣ ಇದನ್ನು ಎದುರಿಸಲು ನಮ್ಮ ಸಿದ್ಧತೆ ಸಾಕಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಆದರೆ, ಸಾಂಕ್ರಾಮಿಕ ಮತ್ತು ಸಾವನ್ನು ಮುಂದಿಟ್ಟುಕೊಂಡು ಕೆಲವರು ವಿಕೃತ ಆನಂದ ಪಡೆಯುತ್ತಿರುವುದು ದುರಂತ’ ಎಂದರು.

‘ಶತಮಾನದ ಬಳಿಕ ಬಹುದೊಡ್ಡ ಸಾಂಕ್ರಾಮಿಕ ರೋಗ ವಿಶ್ವವನ್ನು ಬಾಧಿಸುತ್ತಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ಇಷ್ಟು ದೊಡ್ಡ ಸಾಂಕ್ರಾಮಿಕ ಎದುರಿಸುತ್ತಿರುವ ಮೊದಲ ಪ್ರಧಾನಿ ನರೇಂದ್ರ ಮೋದಿ. ಎಲ್ಲದಕ್ಕೂ ಅವರನ್ನು ಹೊಣೆಗಾರರನ್ನಾಗಿ ಮಾಡಿ, ಕೀಳುಮಟ್ಟದಲ್ಲಿ ಟೀಕಿಸುವುದು ಖಂಡನೀಯ’ ಎಂದು ಹೇಳಿದರು.

ಪ್ರತಿಕ್ರಿಯೆಗಳು 8

ಅಗತ್ಯದಷ್ಟು ಕೋವಿಡ್ ಲಸಿಕೆ ಕೇಂದ್ರ ಸರ್ಕಾರದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಗುರುವಾರ ಯುವತಿಯೊಬ್ಬರು ಕೋವಿಡ್ ಲಸಿಕೆ ಹಾಕಿಸಿಕೊಂಡರು —ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದಲ್ಲಿ ಎರಡನೇ ಡೋಸ್ ಲಸಿಕೆ ನೀಡಲು ಇರುವ ಕೊರತೆ ನಿವಾರಿಸಲಾಗುವುದು ಎಂದು ಹೈಕೋರ್ಟ್‌ಗೆ ಕೇಂದ್ರ ಸರ್ಕಾರ ಭರವಸೆ ನೀಡಿದೆ.

ರಾಜ್ಯದ ಪಾಲಿನ ಲಸಿಕೆ ಹಂಚಿಕೆಗೆ ತೆಗೆದುಕೊಂಡ ನಿರ್ಧಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ನಿರ್ದೇಶನ ನೀಡಿತು.

ಎರಡನೇ ಡೋಸ್ ಪಡೆಯಲು ಅವಧಿ ಮೀರುತ್ತಿರುವ ಜನರ ಸಂಖ್ಯೆಗೂ ದಾಸ್ತಾನಿರುವ ಲಸಿಕೆಯ ಪ್ರಮಾಣಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಈ ಅಂತರವನ್ನು ಹೇಗೆ ನಿವಾರಿಸಲಾಗುತ್ತದೆ ಎಂದು ವಿಚಾರಣೆ ವೇಳೆ ಪೀಠ ಪ್ರಶ್ನಿಸಿತು. ಎರಡನೇ ಡೋಸ್ ಬಾಕಿ ಇರುವವರಿಗೆ ಮೊದಲ ಆದ್ಯತೆ ನೀಡಬೇಕು. ಅವರಿಗೆ ಶೇ 70ರಷ್ಟು ಮತ್ತು ಮೊದಲ ಡೋಸ್ ಪಡೆಯುವವರಿಗೆ ಶೇ 30ರಷ್ಟು ಆದ್ಯತೆ ನೀಡುವಂತೆ ಪೀಠ ತಿಳಿಸಿತು.

ಎರಡನೇ ಡೋಸ್‌ಗೆ ಕಾದಿರುವವರನ್ನು ಬಿಟ್ಟು ಮೊದಲನೇ ಡೋಸ್‌ಗೆ ನೋಂದಾಯಿಸಿಕೊಂಡವರಿಗೆ ಲಸಿಕೆ ನೀಡಿದರೆ ಈಗಾಗಲೇ ಮೊದಲ ಡೋಸ್ ಪಡೆದವರಿಗೆ ಅವಧಿ ಮೀರುತ್ತದೆ. ಆಗ ಅವರ ಮೊದಲ ಡೋಸ್ ನಿಷ್ಪ್ರಯೋಜಕವಾಗುತ್ತದೆ. ರಾಷ್ಟ್ರಕ್ಕೂ ಇದರಿಂದ ನಷ್ಟವಾಗಲಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ (ಎಎಸ್‌ಜಿ) ಐಶ್ವರ್ಯ ಭಟಿ ಅವರು, ಲಸಿಕೆ ಹಂಚಿಕೆ ಸಂಬಂಧ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳ ಜತೆ ನಡೆಸಿರುವ ಮೂರು ಸಮಾಲೋಚನೆಗಳ ವಿವರ ಸಲ್ಲಿಸಿದರು. ‘ಮೇ ತಿಂಗಳ ಕೊನೆಯ ಎರಡು ವಾರದಲ್ಲಿ ಲಸಿಕೆ ಹಂಚಲು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ವಿವರಿಸಿದರು.

‘ಕೇಂದ್ರ ಸರ್ಕಾರ ನೀಡಿದ ಭರವಸೆ ಮೇರೆಗೆ ರಾಜ್ಯಕ್ಕೆ ಲಸಿಕೆ ಬಿಡುಗಡೆ ಮಾಡಲು ಕಡ್ಡಾಯ ನಿರ್ದೇಶನ ನೀಡುವುದನ್ನು ಸದ್ಯಕ್ಕೆ ತಡೆಯಲಾಗುತ್ತಿದೆ. ಎರಡನೇ ಡೋಸ್ ಪಡೆಯಲು ಅವಧಿ ಮೀರುತ್ತಿರುವ ಜನರ ಕುರಿತ ಜಿಲ್ಲಾವಾರು ಅಂಕಿ-ಅಂಶವನ್ನು ತಕ್ಷಣವೇ ಒದಗಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

ಯುಪಿಎಸ್‌ಸಿ ಪರೀಕ್ಷೆ ಅ.10ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗವು (ಯುಪಿಎಸ್‌ಸಿ) ಜೂನ್ 27ರಂದು ನಡೆಸಲು ಉದ್ದೇಶಿಸಿದ್ದ ನಾಗರಿಕ ಸೇವೆಗಳ ಪ್ರಾಥಮಿಕ (ಪ್ರಿಲಿಮನರಿ) ಪರೀಕ್ಷೆಗಳನ್ನು ಕೋವಿಡ್ ಕಾರಣಕ್ಕೆ ಮುಂದೂಡಿದ್ದು, ಅದು ಅಕ್ಟೋಬರ್ 10ರಂದು ನಡೆಯಲಿದೆ.

‘ಸದ್ಯದ ಕೋವಿಡ್ ಪರಿಸ್ಥಿತಿಗಳಿಂದಾಗಿ ಜೂನ್ 27ರಂದು ನಡೆಯಬೇಕಿದ್ದ ಪ್ರಾಥಮಿಕ ಹಂತದ ಪರೀಕ್ಷೆಗಳನ್ನು ಮುಂದೂಡಲಾಗಿದೆ’ ಎಂದು ಆಯೋಗವು ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ.

ಭಾರತೀಯ ಆಡಳಿತಾತ್ಮಕ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಮತ್ತು ಇತರ ಇಲಾಖೆಗಳ ಅಧಿಕಾರಿಗಳ ನೇಮಕಾತಿಗಾಗಿ ಮೂರು ಹಂತಗಳಲ್ಲಿ (ಪ್ರಾಥಮಿಕ, ಪ್ರಧಾನ ಪರೀಕ್ಷೆ, ಸಂದರ್ಶನ) ಆಯೋಗವು ಪರೀಕ್ಷೆಗಳನ್ನು ನಡೆಸುತ್ತದೆ.

ಚಾಮರಾಜನಗರ ದುರಂತ: ಹೈಕೋರ್ಟ್‌ಗೆ ತ್ರಿಸದಸ್ಯ ಸಮಿತಿ ವರದಿ

ದಾಖಲೆ ನಾಶ: ಸಮಿತಿ ಸಂಶಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಾಮರಾಜನಗರ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ 24 ಮಂದಿ ಮೃತಪಟ್ಟ ದುರಂತಕ್ಕೆ ಸಂಬಂಧಿಸಿದ ಕೆಲ ದಾಖಲೆಗಳನ್ನು ತಿರುಚಲಾಗಿದೆ’ ಎಂದು ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ತ್ರಿಸದಸ್ಯ ಸಮಿತಿ ಸಂಶಯ ವ್ಯಕ್ತಪಡಿಸಿದೆ. ದುರಂತಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ವಶಕ್ಕೆ ಪಡೆದು ಸಂರಕ್ಷಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ದ್ರವೀಕೃತ ವೈದ್ಯಕೀಯ ಆಮ್ಲಜನಕ (ಎಲ್‌ಎಂಒ) ನಿರ್ವಹಣೆಯ ರಿಜಿಸ್ಟರ್ ಪುಸ್ತಕ ಗಮನಿಸಿದರೆ ದಾಖಲೆ ತಿರುಚಿರುವುದು ಗಮನಕ್ಕೆ ಬರುತ್ತಿದೆ. 6 ಕಿಲೋ ಲೀಟರ್ ಸಾಮರ್ಥ್ಯದ ಎಲ್‌ಎಂಒ ಟ್ಯಾಂಕ್ ಅನ್ನು ಕೆಲ ದಿನಗಳ ಹಿಂದೆ ಆಸ್ಪತ್ರೆ ಆವರಣದಲ್ಲಿ ಅಳವಡಿಸಲಾಗಿದೆ. ಆದರೂ, ಈ ಟ್ಯಾಂಕ್‌ಗೆ ಮೊದಲ ಬಾರಿಗೆ ಏಪ್ರಿಲ್ 29ರಂದು ಎಲ್‌ಎಂಒ ತುಂಬಿಸಲಾಗಿದೆ. ಬಳಿಕ ಮೇ 1ರಂದು ಎರಡನೇ ಬಾರಿಗೆ ತುಂಬಿಸಲಾಗಿದೆ. ಆದರೆ, 30 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಅದು ಖಾಲಿಯಾಗಿದೆ ಎಂದು ದಾಖಲಿಸಲಾಗಿದೆ.

ಶಿಫಾರಸುಗಳು

- ಆಮ್ಲಜನಕ ಹಂಚಿಕೆ ಮತ್ತು ವಿತರಣೆ ವ್ಯವಸ್ಥೆ ಮೇಲುಸ್ತುವಾರಿ ವಹಿಸಲು ಜಿಲ್ಲಾಧಿಕಾರಿಗಿಂತ ಉನ್ನತ ಅಧಿಕಾರಿಯನ್ನು ನೇಮಿಸಬೇಕು
- ಎಲ್ಲಾ ಆಸ್ಪತ್ರೆಗಳಲ್ಲಿ ಕನಿಷ್ಠ 24 ಗಂಟೆಗಳಿಗೆ ಸಾಕಾಗುವಷ್ಟು ಆಮ್ಲಜನಕ ಸಂಗ್ರಹ ಇರುವಂತೆ ನೋಡಿಕೊಳ್ಳಬೇಕು
- ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸಿದರೆ ಅಂತಹ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಬೇಕು
- ಆಮ್ಲಜನಕ ನಿರ್ವಹಣೆ ಕುರಿತು ದಾಖಲು ಮಾಡುವ ವಿಧಾನ ರಾಜ್ಯದಾದ್ಯಂತ ಏಕರೂಪದಲ್ಲಿ ಇರಬೇಕು. ಎಷ್ಟು ಆಮ್ಲಜನಕ ಲಭ್ಯವಿದೆ ಎಂಬುದರ ಮಾಹಿತಿಯನ್ನು ಎಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಫಲಕದಲ್ಲಿ ಪ್ರದರ್ಶಿಸಬೇಕು
- ಸಂಭವನೀಯ ಮೂರನೇ ಅಲೆ ಗಮನದಲ್ಲಿಟ್ಟುಕೊಂಡು ಎಲ್ಲಾ ಆಸ್ಪತ್ರೆಗಳಲ್ಲಿ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಬೇಕು
- ಆಮ್ಲಜನಕ ಬಳಕೆ ಬಗ್ಗೆ ಕೈಪಿಡಿಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ತಜ್ಞರಿಂದ ಸಿದ್ಧಪಡಿಸಬೇಕು
- ಆಮ್ಲಜನಕ ಸಿಲಿಂಡರ್ ಸಾಗಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಸಬೇಕು

ಪರಿಹಾರ ಕೊಡಿ

ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ ಮುಂದಿನ ವಿಚಾರಣೆಯೊಳಗೆ ನಿರ್ಧಾರ ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

ಸರ್ಕಾರದ ನಿರ್ಲಕ್ಷ್ಯದಿಂದ ಸಂಭವಿಸಿದ ಸಾವುಗಳಿಗೆ ಪರಿಹಾರ ನೀಡಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ನೆನಪಿಸಿದ ಪೀಠ, ‘ಸಂವಿಧಾನದ ಪರಿಚ್ಛೇದ 21ರ ಅಡಿಯಲ್ಲಿನ ಜೀವಿಸುವ ಮೂಲಭೂತ ಹಕ್ಕಿನ ಉಲ್ಲಂಘನೆ ಆಗಿರುವ ಕಾರಣ ಪರಿಹಾರ ನೀಡಬೇಕು’ ಎಂದು ಹೇಳಿತು.

9 ನೇ ಪುಟ ನೋಡಿ

ಕೋವಿಶೀಲ್ಡ್ ಲಸಿಕೆ: 12–16 ವಾರಗಳ ಅಂತರಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಶೀಲ್ಡ್ ಲಸಿಕೆಯ ಡೋಸ್‌ಗಳ ನಡುವಿನ ಕಾಲಾವಧಿಯನ್ನು 12 ರಿಂದ 16 ವಾರಗಳ ವರೆಗೆ ಹೆಚ್ಚಿಸಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ಘೋಷಿಸಿದೆ.

ಪ್ರಸ್ತುತ ಲಸಿಕೆಯ ಮೊದಲ ಮತ್ತು ಎರಡನೇ ಡೋಸ್‌ನ ನಡುವಿನ ಕಾಲಾವಧಿ 6 ರಿಂದ 8 ವಾರ ಇದೆ. ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳನ್ನು ನೀಡುವುದಕ್ಕೆ ಸಂಬಂಧಿಸಿದ ಕಾಲಾವಧಿಯನ್ನು ಮೂರು ತಿಂಗಳಲ್ಲಿ ಎರಡನೇ ಬಾರಿ ಹೆಚ್ಚಿಸಿದಂತಾಗಿದೆ.

ಡಾ.ಎನ್.ಕೆ.ಅರೋರಾ ನೇತೃತ್ವದ ‘ಕೋವಿಡ್ ವರ್ಕಿಂಗ್ ಗ್ರೂಪ್’ ಈ ಸಂಬಂಧ ಶಿಫಾರಸು ಮಾಡಿದೆ. ಬ್ರಿಟನ್‌ನಲ್ಲಿ ಕೋವಿಶೀಲ್ಡ್ ಲಸಿಕೆ ನೀಡಿದ ನಂತರ ನಡೆಸಿದ ಅಧ್ಯಯನದ ಆಧಾರದಲ್ಲಿ ತಂಡವು ಈ ಶಿಫಾರಸು ಮಾಡಿದೆ ಎಂದು ಸಚಿವಾಲಯ ತಿಳಿಸಿದೆ.

‘6 ತಿಂಗಳ ವರೆಗೂ ಮುಂದೂಡಿ’

ಕೋವಿಡ್–19 ದೃಢಪಟ್ಟವರು ಮುಂದಿನ ಆರು ತಿಂಗಳ ವರೆಗೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದನ್ನು ಮುಂದೂಡುವಂತೆ ಲಸಿಕೆ ವಿತರಣೆಗೆ ಸಂಬಂಧಿಸಿದ ರಾಷ್ಟ್ರೀಯ ತಾಂತ್ರಿಕ ಸಲಹಾ ತಂಡವು (ಎನ್‌ಟಿಎಜಿಐ) ಶಿಫಾರಸು ಮಾಡಿರುವುದಾಗಿ ಪಿಟಿಐ ವರದಿ ಮಾಡಿದೆ.

ಗರ್ಭಿಣಿಯರಿಗೆ ಕೋವಿಡ್–19 ಲಸಿಕೆ ಆಯ್ಕೆಗೆ ಅವಕಾಶ ಕಲ್ಪಿಸಬಹುದಾಗಿದೆ. ಗರ್ಭವತಿ ಮಗುವಿಗೆ ಜನ್ಮ ನೀಡಿದ ಬಳಿಕ ಯಾವುದೇ ಸಮಯದಲ್ಲಿ ಲಸಿಕೆ ಹಾಕಿಸಿಕೊಳ್ಳಬಹುದಾಗಿದೆ ಎಂದು ಸಮಿತಿಯು ಶಿಫಾರಸಿನಲ್ಲಿ ತಿಳಿಸಿದೆ.

ಪ್ರತಿಕ್ರಿಯೆಗಳು 4

ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೂನ್ 21ರಿಂದ ನಡೆಯಬೇಕಾಗಿದ್ದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ತಿಳಿಸಿದ್ದಾರೆ.

‘ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿವೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ವಿವಿಧ ಶಾಲಾ ಸಂಘಟನೆಗಳ ಆತಂಕವನ್ನು ಗಮನದಲ್ಲಿರಿಸಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ’ ಎಂದೂ ಹೇಳಿದ್ದಾರೆ.

‘ಕೋವಿಡ್ ಎರಡನೇ ಅಲೆ ಸಂಪೂರ್ಣ ನಿಯಂತ್ರಣಕ್ಕೆ ಬಂದ ಬಳಿಕ, ಸಾಕಷ್ಟು ದಿನ ಮುಂಚಿತವಾಗಿ ಪರೀಕ್ಷೆಯ ದಿನಾಂಕ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ವಿಚಲಿತರಾಗದೆ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಿಸಿಕೊಳ್ಳಬೇಕು. ಪರೀಕ್ಷೆಯ ಕುರಿತಂತೆ ಯಾವುದೇ ಕಾರಣಕ್ಕೂ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ’ ಎಂದೂ ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

20,88,488 ▲	ಒಟ್ಟು ಸೋಂಕಿತರು (20,53,191 ನಿನ್ನೆಯ ವಿವರ)
5,93,078 ▲	ಸಕ್ರಿಯ ಪ್ರಕರಣಗಳು
14,74,678 ▲	ಗುಣಮುಖರಾದವರು
20,712 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	35,297	▼
ಗುಣಮುಖ	34,057	▼
ಸಾವು	344	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಆಳ–ಅಗಲ
ಇಸ್ರೇಲ್–ಪ್ಯಾಲೆಸ್ಟೀನ್ ಮತ್ತೆ ಹೆಚ್ಚಿದ ಕಿಚ್ಚು

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಅಧಿಕ ತಾಪಮಾನದಲ್ಲಿ ಸಂಗ್ರಹಿಸಬಹುದಾದ ಲಸಿಕೆ

ಲಸಿಕೆ ಅಭಿವೃದ್ಧಿ ಪಡಿಸಿದ ಐಐಎಸ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಕೊರೊನಾ ವೈರಾಣುವನ್ನು ತಟಸ್ಥಗೊಳಿಸಬಲ್ಲ ಮತ್ತು 30 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲೂ ಸಂಗ್ರಹಿಸಿಡಬಹುದಾದ ಲಸಿಕೆಯನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಸಂಸ್ಥೆಯ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಹೇಳಿದ್ದಾರೆ.

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದ್ದು, ಈ ಲಸಿಕೆಯನ್ನು ಮಾನವ ದೇಹದ ಮೇಲೆ ಪ್ರಯೋಗ ಮಾಡಬೇಕಾಗಿದೆ ಎಂದು ಹೇಳಿದರು.

30 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನದಲ್ಲಿ ಸಂಗ್ರಹಿಸಬಹುದಾದ ಗುಣ ಹೊಂದಿರುವ ಈ ಲಸಿಕೆಯು ಭವಿಷ್ಯದಲ್ಲಿ ಕೋವಿಡ್ ವಿರುದ್ಧದ ಹೋರಾಟದಲ್ಲಿ ಮೈಲಿಗಲ್ಲಾಗಲಿದೆ. ಈ ಲಸಿಕೆಯನ್ನು ದೇಶದಲ್ಲಿ ಅತಿ ವೇಗವಾಗಿ ಮತ್ತು ಸುಲಭವಾಗಿ ವಿತರಿಸಲು ಸಾಧ್ಯವಾಗುತ್ತದೆ ಎಂದರು.

ಆಮ್ಲಜನಕ ಸಾಂದ್ರಕ: ‘10 ಎಲ್ ಪಿಎಂ ಸಾಮರ್ಥ್ಯದ ಆಮ್ಲಜನಕ ಸಾಂದ್ರಕವನ್ನು ಸಂಸ್ಥೆಯು ಅಭಿವೃದ್ಧಿಪಡಿಸಿದ್ದು, ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಕ್ಲಿನಿಕಲ್ ಪರೀಕ್ಷೆ ನಡೆಸಲಾಗಿದೆ. ಚೀನಾದ ಆಮ್ಲಜನಕ ಸಾಂದ್ರಕಗಳು ಶೇ 40-50 ರಷ್ಟು ಆಮ್ಲಜನಕ ನೀಡುತ್ತವೆ. ನಾವು ಅಭಿವೃದ್ಧಿಪಡಿಸಿರುವ ಸಾಂದ್ರಕಗಳು ಶೇ 90 ರಷ್ಟು ಆಮ್ಲಜನಕ ನೀಡುವ ಸಾಮರ್ಥ್ಯ ಹೊಂದಿವೆ’ ಎಂದು ವಿವರಿಸಿದರು.

‘ಹೆಚ್ಚು ದಕ್ಷತೆಯಿಂದ ಕೂಡಿರುವ ಈ ಸಾಂದ್ರಕಗಳನ್ನು ಕ್ಲಿನಿಕಲ್ ಪರೀಕ್ಷೆಗೆ ಹಾಗೂ ತುರ್ತು ಬಳಕೆಗೆ ಸೆಂಟ್ರಲ್ ಡ್ರಗ್ಸ್ ಸ್ಟಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್ (ಸಿಡಿಎಸ್‌ಸಿಒ) ನಿಂದ ಅನುಮೋದನೆ ದೊರೆಯಲು ಸಹಕರಿಸಬೇಕು ಎಂದು ರಂಗರಾಜನ್ ಸಚಿವರಿಗೆ ಮನವಿ ಮಾಡಿದರು.

ಈ ಬಗ್ಗೆ ಭರವಸೆ ನೀಡಿದ ಸಚಿವ ಡಾ.ಕೆ. ಸುಧಾಕರ್, ಈ ಕೂಡಲೇ ಈ ಆವಿಷ್ಕಾರದ ಕುರಿತು ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿಯವರೊಡನೆ ಚರ್ಚಿಸಲಾಗುವುದು ಹಾಗೂ ಸಂಬಂಧಪಟ್ಟ ಕೇಂದ್ರ ಸಚಿವರಿಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಕೈಗಾರಿಕಾ ಘಟಕ ಹಾಗೂ ಆಸ್ಪತ್ರೆಗಳಲ್ಲಿ ಆಮ್ಲಜನಕ ತುಂಬಿಸುವಾಗ ವ್ಯರ್ಥವಾಗುವುದನ್ನು ಕಡಿಮೆ ಮಾಡುವುದು ಮತ್ತು ಲಭ್ಯವಿರುವ ಆಮ್ಲಜನಕವನ್ನು ಬೇಡಿಕೆಗೆ ತಕ್ಕಷ್ಟೇ ಸಮರ್ಪಕವಾಗಿ ಬಳಸುವ ಕುರಿತು ಸೂಕ್ತ ತಾಂತ್ರಿಕ ಸಲಹೆ ನೀಡಬೇಕು ಎಂದು ಸಚಿವ ಸುಧಾಕರ್ ಕೋರಿದರು.

ಈ ಸಮಸ್ಯೆ ಪರಿಹರಿಸಲು ಎಲ್ಲ ಬಗೆಯ ತಾಂತ್ರಿಕ ಸಹಕಾರ ಹಾಗೂ ಎಂಜಿನಿಯರಿಂಗ್ ನೆರವು ನೀಡಲಾಗುವುದು ಎಂದು ರಂಗರಾಜನ್ ಭರವಸೆ ನೀಡಿದರು.

ಕಿತ್ತೂರು ವೈದ್ಯರ ಮಾದರಿ ಕಾರ್ಯ

ಕೋವಿಡೇತರ ರೋಗಿಗಳಿಗೆ ಉಚಿತ ಚಿಕಿತ್ಸೆ

• ಪ್ರದೀಪ ಮೇಲಿನಮನಿ

ಒಳ್ಳೆ ಸುದ್ದಿ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಸೋಮವಾರಪೇಟೆಯ ಸರ್ಕಾರಿ ಕ್ಷೇತ್ರ ಮಾದರಿ ಶಾಲೆಯಲ್ಲಿ 14 ಮಂದಿ ವೈದ್ಯರು ಕೋವಿಡೇತರ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ. ನಿತ್ಯ ಪಾಳಿಯಲ್ಲಿ ಇಬ್ಬರು ವೈದ್ಯರು ನಾಲ್ಕೂವರೆ ತಾಸು ತಪಾಸಣೆ ಮಾಡಿ ಮಾತ್ರೆಗಳನ್ನು ಕೊಡುತ್ತಿದ್ದಾರೆ. ಈ ಸೇವೆಯು ಮೆಚ್ಚುಗೆಗೆ ಪಾತ್ರವಾಗಿದೆ.

‘ರೋಗಿಗಳು ಚಿಕಿತ್ಸಾ ಕೇಂದ್ರಕ್ಕೆ ಬಂದರೆ ಮೊದಲು ಅವರ ದೇಹದ ಉಷ್ಣಾಂಶ, ಆಮ್ಲಜನಕದ ಪ್ರಮಾಣ ಹಾಗೂ ಎದೆಯೊಳಗಿನ ಕಫದ ಪರೀಕ್ಷೆ ನಡೆಸಲಾಗುತ್ತದೆ. ಥರ್ಮಲ್ ಸ್ಕ್ಯಾನರ್, ಆಕ್ಸಿಮೀಟರ್ ಮತ್ತು ಸ್ಟೆತಾಸ್ಕೋಪ್ ಬಳಸಿ ಈ ಮೂರು ಪರೀಕ್ಷೆ ಮಾಡಲಾಗುತ್ತದೆ’ ಎಂದು ಡಾ.ವೆಂಕಟೇಶ ಉಣಕಲ್ಲಕರ ‘ಪ್ರಜಾವಾಣಿ’ಗೆ ತಿಳಿಸಿದರು.

ಚನ್ನಮ್ಮನ ಕಿತ್ತೂರಿನ ಸರ್ಕಾರಿ ಶಾಲೆಯಲ್ಲಿ ತೆರೆಯಲಾಗಿರುವ ಕೇಂದ್ರಕ್ಕೆ ಬಂದಿರುವ ಮಹಿಳೆಯನ್ನು ವೈದ್ಯರು ಪರೀಕ್ಷಿಸಿದರು

‘ಸಹಜ ಸ್ಥಿತಿಯಲ್ಲಿದ್ದರೆ ಉಚಿತ ಔಷಧಿ ಕಿಟ್ ನೀಡಿ ಕಳುಹಿಸಲಾಗುತ್ತದೆ. ದೇಹಸ್ಥಿತಿಯಲ್ಲಿ ಏರುಪೇರು ಕಂಡುಬಂದವರನ್ನು ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಹೆಚ್ಚಿನ ಪರೀಕ್ಷೆಗಾಗಿ ಕಳುಹಿಸಿಕೊಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

‘ನೆಗಡಿ, ಜ್ವರ ಬಂದರೂ ದವಾಖಾನೆಗೆ ಹೋಗಲು ಹೆದರಿಕೆ ಆಗ್ತಾ ಇದೆ. ಏಕೆಂದರೆ, ಅವರು ಕೊರೊನಾ ಎನ್ನುತ್ತಾರೋ ಎಂಬ ಆತಂಕ. ಆದರೆ, ನಮ್ಮಂಥವರಿಗೆ ಉಚಿತ ಚಿಕಿತ್ಸೆ ಮತ್ತು ಔಷಧ ನೀಡಿ ಆತ್ಮಸ್ಥೈರ್ಯ ತುಂಬುವ ಕಾರ್ಯವನ್ನು ರಾಣಿ ಚನ್ನಮ್ಮ ಗ್ರಾಮೀಣ ವೈದ್ಯರ ಸಂಘದ ಸದಸ್ಯರು ಮಾಡುತ್ತಿದ್ದಾರೆ’ ಎನ್ನುತ್ತಾರೆ ಈರವ್ವ ಗುಳದಕೊಪ್ಪ.

9 ನೇ ಪುಟ ನೋಡಿ

3ನೇ ಅಲೆ: ದೇವಿಪ್ರಸಾದ್ ಶೆಟ್ಟಿ ನೇತೃತ್ವದ ಕಾರ್ಯಪಡೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್‌ನ ಸಂಭಾವ್ಯ ಮೂರನೇ ಅಲೆ ಎದುರಿಸಲು ಸಿದ್ಧತೆಗಾಗಿ ಹೃದ್ರೋಗ ತಜ್ಞ ಡಾ.ದೇವಿ ಪ್ರಸಾದ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ದೇವಿ ಪ್ರಸಾದ್ ಶೆಟ್ಟಿ

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಸಮಿತಿಗೆ ಸದಸ್ಯರನ್ನು ಶೀಘ್ರದಲ್ಲಿ ನೇಮಿಸಲಾಗುವುದು. ರಾಜ್ಯದಲ್ಲಿ ಲಸಿಕೆ ಕಾರ್ಯತಂತ್ರದ ಸಲಹೆಗಾರರಾಗಿ ವೆಲ್ಲೂರಿನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜಿನ ಮೈಕ್ರೋಬಯಾಲಜಿ ಪ್ರಾಧ್ಯಾಪಕ ಗಗನ್‌ದೀಪ್ ಕಾಂಗ್ ಅವರನ್ನು ನೇಮಿಸಲಾಗುವುದು’ ಎಂದರು. ‘ಕಾಂಗ್ ಅವರು ಲಸಿಕೆಗಳ ಸಂಶೋಧನೆ ಮತ್ತು ಅವುಗಳ ಬಳಕೆ ಕುರಿತಂತೆ ವಿಶ್ವ ಆರೋಗ್ಯ ಸಂಸ್ಥೆ ರಚಿಸಿರುವ ಸಲಹಾ ಸಮಿತಿಗಳ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ’ ಎಂದರು.

SBI

ದಯವಿಟ್ಟು ನಿಮ್ಮ ಹುಟ್ಟಿದ ದಿನಾಂಕ, ಡೆಬಿಟ್ ಕಾರ್ಡ್ ನಂಬರ್, ಇಂಟರ್ನೆಟ್ ಬ್ಯಾಂಕಿಂಗ್ ಯೂಸರ್ ಐಡಿ/ ಪಾಸ್ವರ್ಡ್, ಡೆಬಿಟ್ ಕಾರ್ಡ್ ಪಿನ್, ಸಿವಿವಿ, ಒಟಿಪಿ ಇತ್ಯಾದಿಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

ಎಸ್ ಬಿ ಐ, ಆರ್ ಬಿ ಐ, ಸರ್ಕಾರ, ಕಚೇರಿ, ಪೋಲಿಸ್, ಕೆವೈಸಿ ಅಧಿಕಾರಿಗಳು ಕರೆ ಮಾಡುತ್ತಿರುವಂತೆ ನಟಿಸುವ ಮೋಸಗಾರರ ಬಗ್ಗೆ ಎಚ್ಚರದಿಂದಿರಿ.

ಅಪರಿಚಿತ ಮೂಲದಿಂದ ಬರುವ ಟೆಲಿಫೋನ್ ಕರೆಗಳು / ಈಮೇಲ್‌ಗಳ ಆಧಾರಿತ ಯಾವುದೇ ಮೊಬೈಲ್ ಆ್ಯಪ್‌ಗಳನ್ನು ಡೌನ್ಲೋಡ್ ಮಾಡದಿರಿ.

ಅಪರಿಚಿತ ಮೂಲದಿಂದ ಬಂದಿರುವ ಈಮೇಲ್ ಅಟ್ಯಾಚ್ಮೆಂಟ್ಗಳ ಮೇಲೆ ಕ್ಲಿಕ್ ಮಾಡುವುದನ್ನು ತಪ್ಪಿಸಿ.

ಈಮೇಲ್, ಎಸ್ ಎಂ ಎಸ್, ಮತ್ತು ಇತರ ಸಾಮಾಜಿಕ ಮಾಧ್ಯಮಗಳಲ್ಲಿ ಬಂದಿರುವ ಆಕರ್ಷಕ ಅನಪೇಕ್ಷಿತ ಕೊಡುಗೆಗಳಿಗೆ ಉತ್ತರಿಸಬೇಡಿ.

ನಿಮ್ಮ ಸುರಕ್ಷತೆಯು ನಿಮ್ಮ ಕೈಗಳಲ್ಲಿದೆ.
ಸುರಕ್ಷಿತವಾಗಿರಿ, ಸುಭದ್ರವಾಗಿರಿ.

ಕೋವಿಡ್ –19: ಲಸಿಕೆ ಅಭಾವ • ಸರ್ಕಾರದಿಂದಲೇ ಅವಾಂತರ ಸೃಷ್ಟಿ : ಜನರ ಆಕ್ರೋಶ

ಲಸಿಕೆ ಪಡೆಯಲು ಎಲ್ಲೆಲ್ಲೂ ಸರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ಕೊರತೆ ಹೆಚ್ಚುತ್ತಿರುವ ಬೆನ್ನಲ್ಲೇ ನಗರದಲ್ಲಿ ಲಸಿಕೆ ಪಡೆಯಲು ಆಸ್ಪತ್ರೆಗಳಿಗೆ ಜನರು ಮುಗಿಬೀಳುವುದು ಹೆಚ್ಚುತ್ತಿದೆ. ಎಲ್ಲ ಲಸಿಕಾ ಕೇಂದ್ರಗಳ ಎದುರು ಜನರ ಸಾಲು ಗುರುವಾರವೂ ಕಂಡು ಬಂತು.

ಕೆ.ಸಿ. ಜನರಲ್ ಆಸ್ಪತ್ರೆ ಎದುರು ಬೆಳಿಗ್ಗೆಯಿಂದಲೂ ಜನರು ಸಾಲುಗಟ್ಟಿ ನಿಂತಿದ್ದರು. 18 ವರ್ಷ ಮೇಲ್ಪಟ್ಟವರು ಗುರುತಿನ ಚೀಟಿ ಹಿಡಿದು ಲಸಿಕೆ ಪಡೆಯಲು ಮುಂದಾಗಿದ್ದರು. ಹಿರಿಯ ನಾಗರಿಕರಿಗೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಮೈಕ್‌ನಲ್ಲಿ ಘೋಷಣೆ ಮಾಡಿ ಹಿರಿಯ ನಾಗರಿಕರನ್ನು ಒಳಕ್ಕೆ ಕರೆದು ಆಸ್ಪತ್ರೆ ಸಿಬ್ಬಂದಿ ಲಸಿಕೆ ವ್ಯವಸ್ಥೆ ಮಾಡಿದರು. ಉಳಿದವರು ಸರತಿ ಸಾಲಿನಲ್ಲಿ ಗಂಟೆಗಟ್ಟಲೆ ನಿಂತು ಲಸಿಕೆ ಪಡೆದರು.

'ಕೋವಿಡ್‌ನಿಂದ ಪ್ರಾಣ ಉಳಿಸಿಕೊಳ್ಳಲು ಲಸಿಕೆ ಪಡೆಯುವುದು ಮುಖ್ಯ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಲಸಿಕೆ ನೀಡಲು ಸರಿಯಾದ ತಯಾರಿ ಮಾಡಿಕೊಂಡಿಲ್ಲ. ಲಸಿಕೆ ಪಡೆಯಲು ಬಂದು ಈ ನೂಕುನುಗ್ಗಲಿನಲ್ಲಿ ಸೋಂಕು ಅಂಟಿಸಿಕೊಂಡು ಹೋಗುವ ಅಪಾಯ ಇದೆ. ಸೋಂಕು ತಗುಲಿದರೆ ಚಿಕಿತ್ಸೆ ದೊರಕುವುದು ಖಾತ್ರಿ ಇಲ್ಲ. ಇಂತಹ ಸ್ಥಿತಿಯಲ್ಲಿ ಜನ ಏನು ಮಾಡಬೇಕು' ಎಂದು ವಿದ್ಯಾಪೀಠ ವೃತ್ತದ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಪಡೆಯಲು ಸಾಲಿನಲ್ಲಿ ನಿಂತಿದ್ದ ರಮೇಶ್ ಆಕ್ರೋಶ ವ್ಯಕ್ತಪಡಿಸಿದರು.

'ರಾಜಕಾರಣಿಗಳು ಮೊದಲ ಕಂತಿನಲ್ಲೇ ಲಸಿಕೆ ಹಾಕಿಸಿಕೊಂಡಿದ್ದಾರೆ. ಅವರಿಗೆ ಮತ ಹಾಕಿದವರಿಗೆ ಲಸಿಕೆ ವ್ಯವಸ್ಥೆ ಮಾಡದೆ ಬೀದಿಯಲ್ಲಿ ನಿಲ್ಲಿಸಿದ್ದಾರೆ. ಇದ್ಯಾವ ನ್ಯಾಯ' ಎಂದು ಅವರು ಪ್ರಶ್ನಿಸಿದರು.

ಮಲ್ಲತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಲಸಿಕೆಗಾಗಿ ಗುರುವಾರವೂ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಜಮಾಯಿಸಿದ್ದರು.

ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ವಿದ್ಯಾಪೀಠ ವೃತ್ತದ ಆರೋಗ್ಯ ಕೇಂದ್ರದ ಮುಂದೆ ಸಾಲಿನಲ್ಲಿ ನಿಂತಿರುವ ಜನ

7 ಕಿ.ಮೀ. ನಡೆದರೂ ಲಸಿಕೆ ಸಿಗಲಿಲ್ಲ

ಕೋವಿಡ್ ಲಸಿಕೆ ಪಡೆಯಲು 7 ಕಿಲೋ ಮೀಟರ್ ನಡೆದರೂ ಲಸಿಕೆ ಇಲ್ಲದೆ ವ್ಯಕ್ತಿಯೊಬ್ಬರು ವಾಪಸ್ ಹೋಗಬೇಕಾಯಿತು.

ಲಾಕ್‌ಡೌನ್ ಇರುವ ಕಾರಣ ಬೈಕ್‌ನಲ್ಲಿ ಹೋದರೆ ಪೊಲೀಸರು ಅಡ್ಡಗಟ್ಟುವ ಸಾಧ್ಯತೆ ಇರುವ ಕಾರಣ ನಡೆದುಕೊಂಡೇ ಯಲಹಂಕದ ಲಸಿಕಾ ಕೇಂದ್ರಕ್ಕೆ ಬಂದಿದ್ದರು. ಆದರೆ, ಕೋವ್ಯಾಕ್ಸಿನ್ ಲಸಿಕೆ ಇಲ್ಲ ಎಂದು ಹೇಳಿದ ಕಾರಣ ಅವರು ವಾಪಸ್ ಹೋಗಬೇಕಾಯಿತು.

'ಲಸಿಕೆ ಅಭಾವ ಸೃಷ್ಟಿಸಿಕೊಂಡು ಸರ್ಕಾರ ಈ ರೀತಿಯ ಅವಾಂತರ ಸೃಷ್ಟಿಸುತ್ತಿದೆ. ಎರಡನೇ ಅಲೆಯಲ್ಲಿ ಸಾಕಷ್ಟು ಮಂದಿ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಮೂರನೇ ಅಲೆ ವೇಳೆಗೆ ಎಲ್ಲರಿಗೂ ಲಸಿಕೆ ಲಭ್ಯವಾಗದಿದ್ದರೆ ಮತ್ತಷ್ಟು ಜನರು ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ' ಎಂದು ಲಸಿಕಾ ಕೇಂದ್ರದ ಮುಂದಿದ್ದ ಜನರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

'ಅಕ್ಕಿ ಪೂರೈಕೆಯಲ್ಲಿ ಎಡವಿದ ಕತ್ತಿ'

ಬೆಂಗಳೂರು: 'ಆಹಾರ ಸಚಿವ ಉಮೇಶ ಕತ್ತಿ ಅವರು ಕೊರೊನಾ ಸಂಕಷ್ಟದ ಸಮಯದಲ್ಲಿ ಸಮರ್ಪಕವಾಗಿ ಅಕ್ಕಿ ಪೂರೈಕೆ ಮಾಡುವುದರಲ್ಲಿ ಎಡವಿದ್ದಾರೆ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಅಧಿಕಾರಿಗಳಿಂದ ಪ್ರೇರೇಪಿತರಾಗಿ ಇಲ್ಲ ಸಲ್ಲದ ಹೇಳಿಕೆಗಳನ್ನು ನೀಡಿ ಸರ್ಕಾರಕ್ಕೆ ಮುಜುಗರ ಉಂಟು ಮಾಡುತ್ತಿದ್ದಾರೆ ಎಂದು ಅವರು ಹರಿಹಾಯ್ದಿದ್ದಾರೆ.

'ಈ ಹಿಂದೆ ಇದ್ದಂತೆ ಪಡಿತರ ಚೀಟಿ ಹೊಂದಿರುವವರಿಗೆ ತಲಾ 5 ಕೆ.ಜಿ ಅಕ್ಕಿ ಪೂರೈಸುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದೇವೆ. ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಜನರು ಸಾವು– ಬದುಕಿನ ನಡುವೆ ಹೋರಾಡುವಾಗ ನಾವು ರಾಜಕಾರಣ ಮಾಡಬಾರದು' ಎಂದರು.

ಉಮೇಶ ಕತ್ತಿಯವರು ಉಡಾಫೆ ಉತ್ತರ ಮತ್ತು ವ್ಯಂಗ್ಯವಾದ ಹೇಳಿಕೆಗಳ ಮೂಲಕ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ರೇಣುಕಾಚಾರ್ಯ ಹೇಳಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ತಮ್ಮ ಅವಧಿ ಪೂರ್ಣಗೊಳಿಸಲಿದ್ದಾರೆ. ಚುನಾವಣೆಯಲ್ಲಿ ಸೋತವರೊಬ್ಬರು ದೆಹಲಿಗೆ ಹೋಗಿ ಲಾಬಿ ಮಾಡಿದಾಕ್ಷಣ ಮುಖ್ಯಮಂತ್ರಿಯನ್ನು ಬದಲಾವಣೆ ಮಾಡುವುದಿಲ್ಲ ಎಂದೂ ತಿಳಿಸಿದ್ದಾರೆ.

ಒಬಿಸಿ ಮೀಸಲಾತಿ: ಮರುಪರಿಶೀಲನೆ ಅರ್ಜಿ ಸಲ್ಲಿಸಿದ ಕೇಂದ್ರ ಸರ್ಕಾರ

ನವದೆಹಲಿ: ಉದ್ಯೋಗ ಮತ್ತು ಶಿಕ್ಷಣದಲ್ಲಿನ ಮೀಸಲಾತಿಗೆ ಇತರ ಹಿಂದುಳಿದ ವರ್ಗದವರನ್ನು (ಒಬಿಸಿ) ಗುರುತಿಸುವ ಅಧಿಕಾರ ರಾಜ್ಯಗಳಿಗೆ ಇಲ್ಲ ಎಂದು ಇದೇ ತಿಂಗಳ 5ರಂದು ನೀಡಿರುವ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಮರಾಠಾ ಸಮುದಾಯದವರಿಗೆ ನೀಡಿದ್ದ ಮೀಸಲಾತಿಯನ್ನು ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ನ್ಯಾಯಪೀಠ ರದ್ದುಪಡಿಸಿತ್ತು. ಅಲ್ಲದೆ ಹಿಂದುಳಿದ ವರ್ಗಗಳನ್ನು ಗುರುತಿಸುವ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಪೀಠ ಭಿನ್ನ ತೀರ್ಪು ನೀಡಿತ್ತು. ಮೂವರು ನ್ಯಾಯಮೂರ್ತಿಗಳು ರಾಜ್ಯಗಳಿಗೆ ಈ ಅಧಿಕಾರ ಇಲ್ಲ ಎಂದು ಹೇಳಿದ್ದರೆ, ಇಬ್ಬರು ನ್ಯಾಯಮೂರ್ತಿಗಳು ರಾಜ್ಯಗಳಿಗೆ ಈ ಅಧಿಕಾರ ಇದೆ ಎಂದು ಹೇಳಿದ್ದರು.

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಸಾಂವಿಧಾನಿಕ ಹಕ್ಕುಗಳನ್ನು ನೀಡುವ ಮೂಲಕ ಅದಕ್ಕೆ ಹಿಂದುಳಿದ ವರ್ಗಗಳನ್ನು ಗುರುತಿಸುವ ಜವಾಬ್ದಾರಿಯನ್ನು ನೀಡಬೇಕು ಎಂದು ಹೇಳಲಾಗಿತ್ತು.

ನೇಪಾಳ: ಪ್ರಧಾನಿಯಾಗಿ ಒಲಿ ಮರು ನೇಮಕ

ಕಠ್ಮಂಡು(ಪಿಟಿಐ): ಹೊಸ ಸರ್ಕಾರ ರಚನೆಗೆ ಬಹುಮತವನ್ನು ಸಾಬೀತುಪಡಿಸಲು ಪ್ರತಿಪಕ್ಷಗಳು ವಿಫಲವಾದ ಕಾರಣ ಕೆ.ಪಿ.ಶರ್ಮಾ ಒಲಿ ಅವರನ್ನೇ ನೇಪಾಳದ ಪ್ರಧಾನ ಮಂತ್ರಿಯನ್ನಾಗಿ ಗುರುವಾರ ಮರು ನೇಮಕ ಮಾಡಲಾಗಿದೆ.

ಇಂದು ಶೀತಲ್ ನಿವಾಸದಲ್ಲಿ ನಡೆಯುವ ಸಮಾರಂಭದಲ್ಲಿ ರಾಷ್ಟ್ರಪತಿ ವಿದ್ಯಾದೇವಿ ಭಂಡಾರಿ ಅವರು ಒಲಿ ಅವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.

ಕೆ.ಪಿ.ಶರ್ಮಾ ಒಲಿ

ಕೆ.ಪಿ.ಶರ್ಮಾ ಒಲಿ ನೇತೃತ್ವದ ಸರ್ಕಾರ ಕಳೆದ ಸೋಮವಾರ ವಿಶ್ವಾಸಮತ ಕಳೆದುಕೊಂಡು ಪದಚ್ಯುತಗೊಂಡಿತ್ತು.

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ
ಸಂಸತ್ ಕಾಯ್ದೆ ಮೂಲಕ ಸಂಸ್ಥಾಪಿತ
(ಹಿಂದಿನ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ಸ್ವಾಯುತ್ತ ವಿಶ್ವವಿದ್ಯಾಲಯ)
ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ
56–57, ಇನ್‌ಸ್ಟಿಟ್ಯೂಷನಲ್ ಏರಿಯಾ, ಜನಕಪುರಿ, ನವದೆಹಲಿ – 110058

ಪ್ರಕಟಣೆ

ಶಿಕ್ಷಾ ಶಾಸ್ತ್ರಿ (ಬಿ.ಎಡ್.), ಶಿಕ್ಷಾ ಆಚಾರ್ಯ (ಎಂ.ಎಡ್.) ಮತ್ತು ವಿದ್ಯಾವಾರಿಧಿ (ಪಿಹೆಚ್.ಡಿ) ಪ್ರವೇಶ ಪರೀಕ್ಷೆ – 2021

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ ಇವರು ತಮ್ಮ ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಶಿಕ್ಷಾ ಶಾಸ್ತ್ರಿ (ಬಿ.ಎಡ್.), ಶಿಕ್ಷಾ ಆಚಾರ್ಯ (ಎಂ.ಎಡ್.) ಮತ್ತು ವಿದ್ಯಾವಾರಿಧಿ (ಪಿಹೆಚ್.ಡಿ) ಕೋರ್ಸ್‌ಗಳಿಗೆ ಸನ್ 2021ನೇ ಸಾಲಿನ ಪ್ರವೇಶಾತಿಗೆ ಪ್ರವೇಶ ಪರೀಕ್ಷೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. 15ನೇ ಮೇ, 2021 ರಿಂದ 05ನೇ ಜುಲೈ, 2021 ರೊಳಗೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿವರವಾದ ಮಾಹಿತಿಗಾಗಿ ದಯವಿಟ್ಟು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಪರಿಶೀಲಿಸಿರಿ – www.sanskrit.nic.in.

ಸಹಿ/–
ಪರೀಕ್ಷೆಗಳ ನಿಯಂತ್ರಕರು

DAVP 21212/11/0001/2122

ಪಡಿತರಕ್ಕಾಗಿ ಮೈಲುದ್ದದ ಸಾಲು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಕಾರಣ ಪಡಿತರ ಪಡೆಯಲು ರಾಜ್ಯದಾದ್ಯಂತ ನ್ಯಾಯಬೆಲೆ ಅಂಗಡಿಗಳ ಮುಂಭಾಗದಲ್ಲಿ ಫಲಾನುಭವಿಗಳು ಸರದಿಯಲ್ಲಿ ಗಂಟೆಗಟ್ಟಲೆ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿದೆ. ನಗರದ ಹಲವೆಡೆ ಗುರುವಾರ ಬೆಳ್ಳಂಬೆಳಿಗ್ಗೆ ನ್ಯಾಯಬೆಲೆ ಅಂಗಡಿಗಳ ಮುಂಭಾಗದಲ್ಲಿ ರಸ್ತೆಯುದ್ದಕ್ಕೂ ಮೈಲುದ್ದದ ಸಾಲು ಕಂಡುಬಂತು.

ಬೆಳಿಗ್ಗೆ 6 ಗಂಟೆಯಿಂದ 10 ಗಂಟೆವರೆಗೆ ಮಾತ್ರ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗುತ್ತಿದ್ದು, ಈ ಅವಧಿಯಲ್ಲಿ ಆಹಾರ ಧಾನ್ಯ ತೆಗೆದುಕೊಂಡು ಹೋಗಲು ಅವಕಾಶ ನೀಡಲಾಗಿದೆ. ಹೀಗಾಗಿ, ಈ ಅವಧಿಯ ಒಳಗೆ ರೇಷನ್ ಪಡೆದು ಮರಳಿ ಮನೆ ಸೇರುವ ಧಾವಂತದಲ್ಲಿ ಜನರಿದ್ದರು.

ಸರದಿಯಲ್ಲಿ ನಿಂತ ಫಲಾನುಭವಿಗಳ ಮಧ್ಯೆ ಅಂತರ ಕಾಪಾಡಿಕೊಳ್ಳಲು ನ್ಯಾಯಬೆಲೆ ಅಂಗಡಿಗಳ ಮುಂಭಾಗದಲ್ಲಿ ಗುರುತು ಹಾಕಲಾಗಿದೆ. ಆದರೆ, ಕೆಲವು ಕಡೆ ಜನರು ಅಂತರ ಮರೆತು, ಗುಂಪುಗೂಡಿ ಕಾಯುತ್ತಿದ್ದ ದೃಶ್ಯ ಕಂಡುಬಂತು.

'ಪಡಿತರ ಪಡೆಯಲು ನಿಗದಿಪಡಿಸಿದ ಕಾಲಾವಕಾಶ ಕಡಿಮೆ ಇರುವುದರಿಂದ ಮೊದಲ ಬಾರಿಗೆ ಸರದಿ ಸಾಲಿನಲ್ಲಿ ನಿಂತು ಆಹಾರಧಾನ್ಯ ಪಡೆಯುತ್ತಿದ್ದೇನೆ. ಸೋಂಕು ಹರಡುವ ಭೀತಿಯ ಕಾರಣಕ್ಕೆ ಮಾಸ್ಕ್ ಧರಿಸಿ, ಅಂತರ ಕಾಪಾಡಿಕೊಳ್ಳಬೇಕಾಗಿದೆ' ಎಂದು ಶ್ರೀನಗರದ ನ್ಯಾಯಬೆಲೆ ಅಂಗಡಿಯೊಂದರ ಮುಂದೆ ಸರದಿಯಲ್ಲಿ ನಿಂತಿದ್ದ ಫಲಾನುಭವಿ ನಾಗರಾಜು ತಿಳಿಸಿದರು.

ರಾಜ್ಯದ ಪಡಿತರದ ಜೊತೆಗೆ ಕೇಂದ್ರ ಸರ್ಕಾರ ಪ್ರತಿ ಬಿಪಿಎಲ್ (ಆದ್ಯತಾ) ಮತ್ತು ಅಂತ್ಯೋದಯ ಅನ್ನ ಯೋಜನೆಯ (ಎಎವೈ) ಪಡಿತರ ಚೀಟಿದಾರರಿಗೆ ಮೇ ಮತ್ತು ಜೂನ್ ತಿಂಗಳಲ್ಲಿ ಹೆಚ್ಚುವರಿಯಾಗಿ ತಲಾ 5 ಕಿಲೋ ಅಕ್ಕಿ ವಿತರಿಸಲಾಗುತ್ತಿದೆ. ಕೊರೊನಾ ಕಾರಣದಿಂದ ಬಯೋಮೆಟ್ರಿಕ್ ಪಡೆಯುವ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದ್ದು, ಆಧಾರ್ ಜೊತೆ ಸಂಪರ್ಕ ಕಲ್ಪಿಸಿದ ಮೊಬೈಲ್ ಸಂಖ್ಯೆಗೆ ಬಂದ ಒಟಿಪಿ ಸಂಖ್ಯೆ ಪಡೆದು ಪಡಿತರ ವಿತರಿಸಲಾಗುತ್ತಿದೆ.

ವೃದ್ಧರು, ಅನಾರೋಗ್ಯಪೀಡಿತರು ಮತ್ತು ಅಂಗವಿಕಲರಿಗೆ ವಿನಾಯಿತಿ ಸೌಲಭ್ಯದಡಿ ಪಡಿತರ ವಿತರಿಸಲಾಗುತ್ತಿದ್ದು, ಪಡಿತರ ಚೀಟಿದಾರರ ಪರಿಶೀಲನಾ ಪಟ್ಟಿಯ ಆಧಾರದಲ್ಲಿಯೂ ನೇರವಾಗಿ ಆಹಾರಧಾನ್ಯ ವಿತರಿಸಲಾಗುತ್ತಿದೆ. ಅಲ್ಲದೆ, ನಗರದಲ್ಲಿ ರಾಜ್ಯ ಮತ್ತು ಹೊರರಾಜ್ಯದ ಪಡಿತರ ಚೀಟಿದಾರರಿದ್ದು, ಅವರಿಗೆ ಪೋರ್ಟೆಬಿಲಿಟಿ ಸೌಲಭ್ಯದ ಮೂಲಕ ಪಡಿತರ ವಿತರಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆಹಾರ ಇಲಾಖೆ ಆಯುಕ್ತರು ತಿಳಿಸಿದರು.

'ರಾಜ್ಯದಲ್ಲಿ ಇದೇ 11ರವರೆಗೆ 17.77ಲಕ್ಷಕ್ಕೂ ಹೆಚ್ಚು ಪಡಿತರ ಚೀಟಿದಾರರು ಪಡಿತರ ಪಡೆದುಕೊಂಡಿದ್ದಾರೆ. ಪಡಿತರ ಚೀಟಿದಾರರಿಗೆ ಅನಾನುಕೂಲವಾದರೆ ನಿಯಂತ್ರಣ ಕೊಠಡಿ ಸಂಖ್ಯೆ 1967, 1800-425-9339 ಮತ್ತು 14445 ದೂರು ದಾಖಲಿಸಬಹುದು. ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಥವಾ ತಹಶೀಲ್ದಾರ್‌ಗೂ ದೂರು ಸಲ್ಲಿಸಬಹುದು' ಎಂದೂ ಅವರು ತಿಳಿಸಿದ್ದಾರೆ.

ಲಗ್ಗೆರೆಯಲ್ಲಿರುವ ನ್ಯಾಯಬೆಲೆ ಅಂಗಡಿಯ ಮುಂದೆ ಪಡಿತರ ಚೀಟಿದಾರರು ಸಾಲು ನಿಂತಿರುವ ದೃಶ್ಯ ಗುರುವಾರ ಕಂಡುಬಂತು
ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

'ದುರ್ಬಳಕೆ ತಪ್ಪಿಸಲು ಕ್ರಮ'

'ಎಲ್ಲರಿಗೂ ಪರಿಶೀಲನಾ ಪಟ್ಟಿ (ಚೆಕ್‌ಲಿಸ್ಟ್) ಅಥವಾ ಯಾವುದಾದರೂ ಮೊಬೈಲ್‌ಗೆ ಒಟಿಪಿ ನೀಡುವ ಮೂಲಕ ಪಡಿತರ ವಿತರಿಸಲು ಅವಕಾಶ ನೀಡಬೇಕೆಂದು ರಾಜ್ಯ ಪಡಿತರ ವಿತರಕರ ಸಂಘ ಮನವಿ ಮಾಡಿತ್ತು. ಆದರೆ, ಯಾವುದಾದರೂ ಮೊಬೈಲ್‌ಗೆ ಒಟಿಪಿ ಸೌಲಭ್ಯ ನೀಡಿ ಪಡಿತರ ವಿತರಿಸಲು ಅವಕಾಶ ನೀಡಿದರೆ ದುರ್ಬಳಕೆಗೆ ಅವಕಾಶ ಆಗುವ ಸಾಧ್ಯತೆ ಇದೆ. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಈ ಅವಕಾಶ ನೀಡಿದ ಪರಿಣಾಮ, ಕೆಲವು ನ್ಯಾಯಬೆಲೆ ಅಂಗಡಿಗಳ ಮಾಲೀಕರು ಒಂದೇ ಮೊಬೈಲ್ ನಂಬರ್ ಬಳಸಿ ಅನೇಕ ಪಡಿತರ ಚೀಟಿಗಳಿಗೆ ಆಹಾರಧಾನ್ಯ ವಿತರಿಸಿರುವ ಪ್ರಕರಣಗಳು ನಡೆದಿವೆ. ಹೀಗಾಗಿ, ಈ ಬಾರಿ ಅದಕ್ಕೆ ಅವಕಾಶ ನೀಡಿಲ್ಲ' ಎಂದೂ ಆಹಾರ ಇಲಾಖೆಯ ಆಯುಕ್ತರು ಸ್ಪಷ್ಟಪಡಿಸಿದ್ದಾರೆ.

ನಗರದ ಶ್ರೀನಗರದಲ್ಲಿ ವ್ಯಕ್ತಿಯೊಬ್ಬರು ಮಳೆಯಲ್ಲಿ ಕೊಡೆ ಇಡಿದು ಸಾಗಿದರು
–ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ನಗರದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಮೋಡ ಕವಿದ ವಾತಾವರಣ ಕಂಡುಬಂದು, ಸಂಜೆ ವೇಳೆ ಹಲವೆಡೆ ಮಳೆ ಸುರಿಯಿತು.

ಬುಧವಾರವೂ ನಗರದ ಹಲವೆಡೆ ಜೋರು ಮಳೆಯಾಗಿತ್ತು. ಗುರುವಾರ ಬೆಳಿಗ್ಗೆಯಿಂದಲೇ ನಗರದಲ್ಲಿ ಮೋಡ ಕವಿದ ವಾತಾವರಣವಿತ್ತು.

ಹೆಣ್ಣೂರು, ಕೆ. ನಾರಾಯಣಪುರ, ಥಣಿಸಂದ್ರ, ಮಹಾಲಕ್ಷ್ಮಿ ಲೇಔಟ್, ಬನಶಂಕರಿ, ಪೀಣ್ಯ, ದಾಸರಹಳ್ಳಿ, ಜಾಲಹಳ್ಳಿ ಹಾಗೂ ಹಲವೆಡೆ ಮಳೆ ಆಯಿತು. ಸಿಡಿಲು–ಗುಡುಗು ಸಹ ಇತ್ತು.

'ಚಂಡಮಾರು ಪರಿಣಾಮದಿಂದಾಗಿ ರಾಜ್ಯದ ಹಲವೆಡೆ ಮತ್ತಷ್ಟು ದಿನ ಮಳೆಯಾಗುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ, 'ನಗರದಲ್ಲಿ ಬುಧವಾರ ಜೋರು ಮಳೆ ಇತ್ತು. ಗುರುವಾರ ಮಳೆ ಪ್ರಮಾಣ ಕಡಿಮೆ ಇತ್ತು. ಹೀಗಾಗಿ, ಯಾವುದೇ ದೂರುಗಳು ಬಂದಿಲ್ಲ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Sites

Vishweshwariah Layout

WANTED/ AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

DH ಪ್ರಜಾವಾಣಿ
BOOK YOUR REMEMBRANCE & OBITUARIES ADVERTISEMENTS IN DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277
Ravichandra : 9901641752
Vishal : 9845114560
Tanveer : 9886213331
E-mail: dhclassifieds@deccanherald.co.in

JOB OPPORTUNITIES

Part-Time Jobs

JOB OPPORTUNITY: Lost job our MNC provide business opportunity work from home, earn Rs. 30-35k Call 7019215243

Engg/ Production Technical

..........WANTED..........
World Largest & Most Successful EMS-MNC Co, Whitefield Road, ...Bangalore.......... ....FRESHER'S.......... ....ITI/ Diploma.......... ....Any Trade........... 10th, PUC, Degree. Attractive-Salary, Food, Transport, Incentive, Allowance ESI,PF, Available. 9901351208, 6361193258, 9513894552, info@shabari.co.in

General

GOLDEN OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

'ದೇಹ ಮತ್ತು ಮನಸ್ಸನ್ನು ಪರೀಕ್ಷೆಗೊಡ್ಡುವ ಕೋವಿಡ್'

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ

ಬೆಂಗಳೂರು: 'ಎರಡು ವಾರಗಳ ಅತಂತ್ರ, ಅಸಹಾಯಕ, ಅವಲಂಬನೆಯ ಬದುಕಿನಿಂದ ಹೊರಬಂದಾಗ ಜಗತ್ತು ಹೊಸದಾಗಿ ಕಾಣುವ ಪರಿ ನಿಜಕ್ಕೂ ಅನನ್ಯ. ಕೋವಿಡ್ ಕಾಯಿಲೆಯು ದೇಹಕ್ಕಿಂತ ಮನಸ್ಸನ್ನು ಹೆಚ್ಚು ಕಾಡುತ್ತದೆ. ಹಾಗಾಗಿ, ಇದು ಮನುಷ್ಯನನ್ನು ಮಾನಸಿಕವಾಗಿ ಗಟ್ಟಿಗೊಳಿಸುವ ಪ್ರಕ್ರಿಯೆಯೂ ಹೌದು.'

'ಕಳೆದ ಏ.17ರಂದು ಮಗಳು ನಿಹಾರಿಕಾ ಮತ್ತು ಅಳಿಯ ಶ್ರೇಯಸ್‌ಗೆ ಜ್ವರ-ನೆಗಡಿ ಕಾಣಿಸಿಕೊಂಡಿತು. ಅವರಿಬ್ಬರ ಜತೆಗೆ ನಾನು ಮತ್ತು ಮಗ ಅನಿಕೇತನ್ ಕೂಡ ಯಲಚೇನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡೆವು. ಮೂರು ದಿನಗಳ ಬಳಿಕ ಸೋಂಕಿತರಾಗಿರುವ ಬಗ್ಗೆ ವರದಿ ಬಂದಿತು. ಆ ಕ್ಷಣ ನನ್ನ ಧೈರ್ಯ, ಸ್ಥಿತಪ್ರಜ್ಞೆ ಮರೆಯಾಗಿ ತಲ್ಲಣಿಸಿದ್ದು ನಿಜ. ಹತ್ತು ನಿಮಿಷ ಯಾರಿಗೂ ವಿಷಯ ಬಿಟ್ಟುಕೊಡದೆ ಒಬ್ಬನೇ ಮೌನವಾಗಿ ಮುಂದಿನ ಕ್ರಮಗಳ ಬಗ್ಗೆ ಯೋಜಿಸಿದೆ. ಮಡದಿ ಲತಾರಾಣಿಯ ಪರೀಕ್ಷೆ ಮಾಡಿಸಿರಲಿಲ್ಲ.'

'ಎಲ್ಲರೂ ಆಸ್ಪತ್ರೆ ಅಥವಾ ಕೋವಿಡ್ ಆರೈಕೆ ಕೇಂದ್ರ ಸೇರಬೇಕು ಅಂದುಕೊಂಡೆ. ಆದರೆ, ಮನೆಯಲ್ಲೇ ಪ್ರತ್ಯೇಕವಾಗಿ ಚಿಕಿತ್ಸೆ ಪಡೆಯಲು ಸೌಲಭ್ಯವಿತ್ತು. ಹೀಗಾಗಿ, ಆಸ್ಪತ್ರೆಗೆ ಹೋದರೆ ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಹಾಸಿಗೆಯ ಸಮಸ್ಯೆಯಾಗಲಿದೆ ಎಂದ ಯೋಚಿಸಿ, ನಾನು, ಮಗಳು ಮತ್ತು ಮಗ ಮನೆ ಆರೈಕೆಗೆ ಒಳಗಾದೆವು. ಮರುದಿನ ಪತ್ನಿಯ ಕೋವಿಡ್ ಪರೀಕ್ಷೆ ನಡೆಯಿತು. ಸೋಂಕು ತಗುಲಿಲ್ಲ ಎನ್ನುವುದು ದೃಢಪಟ್ಟಿತು. ಐದು ದಿನ ಕಳೆದರೂ ಅಳಿಯನ ವರದಿ ಬರಲಿಲ್ಲ. ಕೊನೆಗೆ ನಮ್ಮ ವಲಯದ ಉಸ್ತುವಾರಿ ಸಚಿವರಾದ ಸುರೇಶ್ ಕುಮಾರ್ ಅವರ ನೆರವಿನಿಂದ ಅಳಿಯನ ಪಾಸಿಟಿವ್ ವರದಿ ಕೈಸೇರಿತು.'

'ಮನೆ ಆರೈಕೆ ವೇಳೆ ಮನಸ್ಸನ್ನು ಏಕಾಗ್ರವಾಗಿರಿಸುವುದು ಕಷ್ಟವಾಯಿತು. ಸುತ್ತಲಿನ ಸರಣಿ ಸಾವುಗಳು ತಲ್ಲಣಗೊಳಿಸುತ್ತಿದ್ದವು. ಈ ನಡುವೆ ವೃತ್ತಿಯ ಕರ್ತವ್ಯ ನಿರ್ವಹಿಸುವ ಅನಿವಾರ್ಯತೆ ಮತ್ತಷ್ಟು ಒತ್ತಡಕ್ಕೆ ಒಳಪಡಿಸಿತು. ಜ್ವರ ಮತ್ತು ಆಮ್ಲಜನಕ ಮಾಪಕಗಳ ಬಗ್ಗೆಯೇ ಅಪನಂಬಿಕೆ ಉಂಟಾಗುತ್ತಿತ್ತು. ಬದುಕಿನ ಕವಲು ಹಾದಿಗಳಲ್ಲಿ ಸಂಪರ್ಕ ಕಡಿದುಹೋಗಿದ್ದ ಎಷ್ಟೋ ಹಳೆಯ ಸಂಗಾತಿಗಳು ಹಾರೈಸುವ ನೆಪದಲ್ಲಿ ಮತ್ತೆ ಹತ್ತಿರ ಬಂದರು. ನನಗೆ ವೈಯಕ್ತಿಕವಾಗಿ ಕೋವಿಡ್ ರೋಗದ ಬಹುದೊಡ್ಡ ಕೊಡುಗೆ ಇದು.'

'ಯುದ್ಧ ಗೆದ್ದ ವಿಜಯೋತ್ಸಾಹದ ಬದಲು ಸೋಂಕು ನಿವಾರಿಸಿಕೊಂಡ ದೃಢತೆ ಮತ್ತು ಸ್ವವಿಶ್ವಾಸ ಇಮ್ಮಡಿಸಿಕೊಂಡ ವಿನಮ್ರತೆ ಉಳಿದಿದೆ'.

ಚಂದ್ರಕಾಂತ ವಡ್ಡು, ಹಿರಿಯ ಪತ್ರಕರ್ತ

ಅಪಘಾತ: ವ್ಯಕ್ತಿ ಸಾವು

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಂಡೆಯೊಂದಕ್ಕೆ ಟ್ರಕ್ ಗುದ್ದಿದ್ದು, ಅದರಲ್ಲಿ ಪ್ರಯಾಣಿಸುತ್ತಿದ್ದ ಚೇತನ್ (20) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನೈಸ್ ರಸ್ತೆಯಲ್ಲಿ ಪಿಳ್ಳಗಾನಹಳ್ಳಿ ಸೇತುವೆ ಬಳಿ ಗುರುವಾರ ನಸುಕಿನಲ್ಲಿ ಈ ಅವಘಡ ಸಂಭವಿಸಿದೆ.

ನಿಧನ ವಾರ್ತೆ

ಜೇಮ್ಸ್ ಅಲೆಕ್ಸಾಂಡರ್

ಬೆಂಗಳೂರು: ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ರಸಾಯನತಜ್ಞರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದ ಜೇಮ್ಸ್ ಅಲೆಕ್ಸಾಂಡರ್ (72) ಬುಧವಾರ (ಮೇ 12) ನಿಧನರಾದರು.

ಕೆಲವು ದಿನಗಳಿಂದ ಚೆನ್ನೈನ ಗ್ಲೆನ್ ಈಗಲ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಮೂವರು ಮಕ್ಕಳು ಇದ್ದಾರೆ. 'ಮೈಸೂರು ರಸ್ತೆಯಲ್ಲಿರುವ ಕ್ರೈಸ್ತರ ಸಮಾಧಿ ಭೂಮಿಯಲ್ಲಿ ಗುರುವಾರ ಬೆಳಿಗ್ಗೆ ಅಂತಿಮ ಸಂಸ್ಕಾರ ನಡೆಸಲಾಯಿತು' ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಶಿವಾನಂದನಾಥ ಸ್ವಾಮೀಜಿ

ಸಾಲಿಗ್ರಾಮ (ಮೈಸೂರು): ಆದಿಚುಂಚನಗಿರಿಯ ಚುಂಚನಕಟ್ಟೆ ಶಾಖಾ ಮಠದ ಶಿವಾನಂದನಾಥ ಸ್ವಾಮೀಜಿ (61) ಗುರುವಾರ ನಸುಕಿನಲ್ಲಿ ವಿಧಿವಶರಾದರು. ಕೋವಿಡ್ ದೃಢಪಟ್ಟಿದ್ದು, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಆದಿಚುಂಚನಗಿರಿಯ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಮಾರ್ಗದರ್ಶನದಲ್ಲಿ ಗುರುವಾರ ಮಧ್ಯಾಹ್ನ ಆದಿಚುಂಚನಗಿರಿ ಕ್ಷೇತ್ರದಲ್ಲೇ ಅಂತ್ಯಸಂಸ್ಕಾರ ನಡೆಯಿತು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಧನಸಹಾಯ ವಿತರಿಸಿದರು. ಸಚಿವ ಎಸ್‌.ಟಿ.ಸೋಮಶೇಖರ್ ಇದ್ದರು.

ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ನೆರವು

ಬೆಂಗಳೂರು: 'ಸಚಿವ ಎಸ್. ಟಿ. ಸೋಮಶೇಖರ್ ಮಾದರಿ ಕಾರ್ಯ ಮಾಡುತ್ತಿದ್ದಾರೆ. ಕೊರೊನಾ ಸಂಕಷ್ಟದ ಈ ಕಾಲದಲ್ಲಿ ತಮ್ಮ ಕ್ಷೇತ್ರದ ಜನತೆಗೆ ವೈಯಕ್ತಿಕ ಧನಸಹಾಯ ಸೇರಿದಂತೆ ಇನ್ನಿತರ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆ' ಎಂದು ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಹೇರೋಹಳ್ಳಿ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಎಸ್. ಟಿ. ಸೋಮಶೇಖರ್ ಅವರಿಂದ ವೈಯಕ್ತಿಕವಾಗಿ ₹1 ಲಕ್ಷ ಧನಸಹಾಯ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಎಸ್. ಟಿ. ಸೋಮಶೇಖರ್ ಮಾತನಾಡಿ, 'ಕ್ಷೇತ್ರದ ಜನತೆಯ ಹಿತ ಕಾಯಲು 1 ಸಾವಿರ ಕೊರೊನಾ ವಾರಿಯರ್ಸ್‌ಗಳನ್ನು ನೇಮಕ ಮಾಡಲಾಗಿದ್ದು, ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ' ಎಂದರು.

ರಾಜರಾಜೇಶ್ವರಿನಗರದ ಜ್ಞಾನಭಾರತಿಯ ಕೋವಿಡ್ ಆರೈಕೆ ಕೇಂದ್ರದಲ್ಲಿ 341 ಬೆಡ್ ವ್ಯವಸ್ಥೆ ಇದೆ. ಇದರಲ್ಲಿ 101 ಆಮ್ಲಜನಕ ಬೆಡ್ ವ್ಯವಸ್ಥೆ ಮಾಡಲಾಗಿದೆ. ಆರೆಸ್ಸೆಸ್ ಜನಸೇವಾದವರು ಜನಸೇವಾ ಕೇಂದ್ರದಲ್ಲಿ ನೂರು ಬೆಡ್ ವ್ಯವಸ್ಥೆ ಮಾಡಿದ್ದಾರೆ. ಹೇರೋಹಳ್ಳಿ ಹಾಗೂ ಕೆಂಗೇರಿಯಲ್ಲಿ ಎರಡು ಆರೈಕೆ ಕೇಂದ್ರಗಳನ್ನು ಆರಂಭಿಸಲಾಗುತ್ತಿದ್ದು, ಇನ್ನೆರಡು ದಿನಗಳಲ್ಲಿ ಬಳಕೆಗೆ ಲಭ್ಯವಾಗಲಿವೆ' ಎಂದರು.

ಬಿಬಿಎಂಪಿಗೆ ಮತ್ತೆ 66 ಸಾವಿರ ಕೋವಿಶೀಲ್ಡ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆಯ ಎರಡನೇ ಡೋಸ್ ಪಡೆಯುವವರಿಗೆ ನೀಡುವ ಸಲುವಾಗಿ ಸರ್ಕಾರ 66 ಸಾವಿರ ಕೋವಿಶೀಲ್ಡ್ ಲಸಿಕೆಯನ್ನು ಗುರುವಾರ ಪೂರೈಸಿದೆ. ಹಾಗಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಶುಕ್ರವಾರವೂ ಲಸಿಕೆ ಕಾರ್ಯಕ್ರಮ ಮುಂದುವರಿಯಲಿದೆ.

'ಈ ಲಸಿಕೆಯನ್ನು ಈಗಾಗಲೇ ಮೊದಲ ಡೋಸ್ ಪಡೆದವರಿಗೆ ಮಾತ್ರ ನೀಡುತ್ತೇವೆ. 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವುದನ್ನು ಸದ್ಯಕ್ಕೆ ಸ್ಥಗಿತಗೊಳಿಸಿದ್ದೇವೆ. 45 ವರ್ಷ ಮೇಲ್ಪಟ್ಟವರಿಗೂ ಸದ್ಯಕ್ಕೆ ಲಸಿಕೆಯ ಮೊದಲ ಡೋಸ್ ನೋಡುತ್ತಿಲ್ಲ. ಪೂರೈಕೆಯಾಗಿರುವ ಲಸಿಕೆಯನ್ನು ಎರಡನೇ ಡೋಸ್ ಪಡೆಯುವವರಿಗೆ ನೀಡುವುದಕ್ಕೆ ಮಾತ್ರ ಬಳಸಬೇಕು ಎಂದು ಸರ್ಕಾರ ಸೂಚನೆ ನೀಡಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆಯಲು ಮಾಡಿಸಿರುವ ನೋಂದಣಿಗಳನ್ನು ರದ್ದುಪಡಿಸಲಾಗಿದೆ. ಹಾಗಾಗಿ ಯಾರೂ ಮೊದಲ ಡೋಸ್ ಪಡೆಯುವ ಸಲುವಾಗಿ ಶುಕ್ರವಾರ ಲಸಿಕಾ ಕೇಂದ್ರಗಳಿಗೆ ಬರಬೇಡಿ' ಎಂದು ಅವರು ವಿನಂತಿಸಿದರು.

ಕೋವ್ಯಾಕ್ಸೀನ್ ಕೊರತೆ: ಕೋವ್ಯಾಕ್ಸೀನ್ ಕೊರತೆ ಮುಂದುವರಿದಿದ್ದು, ಇದರ ಮೊದಲ ಡೋಸ್ ಪಡೆದವರಿಗೆ ಎರಡೇ ಡೋಸ್ ನೀಡುವುದು ಸವಾಲಾಗಿ ಪರಿಣಮಿಸಿದೆ. 'ಸ್ವಲ್ಪ ಪ್ರಮಾಣದಲ್ಲಿ ಕೋವ್ಯಾಕ್ಸೀನ್ ಪೂರೈಕೆ ಆಗಿದೆ. ಆದರೆ, ಬೇಡಿಕೆ ಪೂರೈಸಲು ಇದು ಏನೇನೂ ಸಾಲದು' ಎಂದರು.

ಚಿತಾಗಾರ: ಸಮಯ ಕಾಯ್ದಿರಿಸಲು ಆನ್‌ಲೈನ್ ವ್ಯವಸ್ಥೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಹಾಗೂ ಇತರೆ ಕಾರಣಗಳಿಂದ ಕೊನೆಯುಸಿರೆಳೆದವರ ಅಂತ್ಯಕ್ರಿಯೆಗೆ ಪ್ರಸ್ತುತ ಅನುಸರಿಸುತ್ತಿರುವ ಪದ್ಧತಿ ಕೈಬಿಡಬೇಕು. ಅಂತ್ಯಕ್ರಿಯೆ ಸಮಯ ಕಾಯ್ದಿರಿಸಲು ಆನ್‌ಲೈನ್ ಹಂಚಿಕೆ ವ್ಯವಸ್ಥೆ ಜಾರಿಗೆ ತರಬೇಕು ಎಂದು ಸರ್ಕಾರ ಆದೇಶ ಮಾಡಿದೆ.

ಕೋವಿಡ್‌ನಿಂದ ಸತ್ತವರ ದೇಹಗಳನ್ನು ಸ್ಮಶಾನಗಳಿಗೆ ಸಾಗಿಸುವ ವಾಹನಗಳಿಗಾಗಲಿ, ಅಂತಹವರ ಅಂತ್ಯಕ್ರಿಯೆಗಾಗಲೀ ಯಾವುದೇ ಶುಲ್ಕ ಪಡೆಯುವಂತಿಲ್ಲ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಭವಿಸುವ ಸಾವುಗಳನ್ನು ದಾಖಲಿಸಲು ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಸಹಾಯವಾಣಿ (8495998495) ಆರಂಭಿಸಲಾಗಿದೆ. ಅಂತ್ಯಕ್ರಿಯೆಗಾಗಿ ದಿನ ಮತ್ತು ಸಮಯ ಗೊತ್ತುಪಡಿಸಲು ಸಾರ್ವಜನಿಕರು ಈ ಸಹಾಯವಾಣಿಗೆ ಕರೆ ಮಾಡಬಹುದು. ಸಹಾಯವಾಣಿ ಸಿಬ್ಬಂದಿಗೆ ನೀಡಿದ ಮಾಹಿತಿಯನ್ನು ತಂತ್ರಾಂಶದಲ್ಲಿ ದಾಖಲಿಸಿ ಅದಕ್ಕೆ ಅನುಗುಣವಾಗಿ ಕೋರಿಕೆದಾರರಿಗೆ ಟೋಕನ್ ಸಂಖ್ಯೆ ಮತ್ತು ಯಾವ ಸ್ಮಶಾನ/ ಚಿತಾಗಾರದಲ್ಲಿ ಅಂತ್ಯಕ್ರಿಯೆಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಈ ಕುರಿತ ಮಾಹಿತಿಯನ್ನು ಕರೆ ಮಾಡಿದ ವ್ಯಕ್ತಿಯ ಮೊಬೈಲ್‌ಗೆ ರವಾನಿಸಲಾಗುತ್ತದೆ.

ಈ ವ್ಯವಸ್ಥೆಯನ್ನು ಅತ್ಯಂತ ವೈಜ್ಞಾನಿಕ ಹಾಗೂ ಪಾರದರ್ಶಕವಾಗಿ ರೂಪಿಸಬೇಕು. ಶವಸಂಸ್ಕಾರದ ಕುರಿತ ಗೊಂದಲ ಹಾಗೂ ವಿಳಂಬಗಳಿಗೆ ಆಸ್ಪದ ಇರಬಾರದು. ಶವ ಸಾಗಿಸುವ ವಾಹನಗಳು ಚಿತಾಗಾರದ ಬಳಿ ಸಾಲುಗಟ್ಟಿ ದೀರ್ಘಕಾಲ ಕಾಯುವುದನ್ನು ತಪ್ಪಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷ ಮುನ್ನವೇ ಮೃತ ವ್ಯಕ್ತಿಯ ಬಂಧುಗಳು ಮೃತದೇಹದೊಂದಿಗೆ ಗೊತ್ತುಪಡಿಸಿದ ಚಿತಾಗಾರವನ್ನು ತಲುಪಬೇಕು ಎಂದು ಸೂಚಿಸಲಾಗಿದೆ.

ಕಂದಾಯ ಸಚಿವ ಆರ್. ಅಶೋಕ ಅವರು ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರ ಜೊತೆ ಬುಧವಾರ ನಡೆಸಿದ ಸಭೆಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗಾಗಿ ಎದುರಾಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಲಾಗಿತ್ತು.

ಬಿಬಿಎಂಪಿ: ಕೊರೊನಾದಿಂದ 9,126 ಮಂದಿ ಕೊನೆಯುಸಿರು • ಮೇ ತಿಂಗಳಲ್ಲಿ ಶೇ 30ರಷ್ಟು ಸಾವು • ಐಸಿಯು ಕೊರತೆಯಿಂದ ಅಧಿಕ ಮರಣ

ಕೋವಿಡ್: ಹದಿಮೂರೇ ದಿನಗಳಲ್ಲಿ 2,754 ಸಾವು

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಕೊರೊನಾ ಸಾವಿನ ಸರಮಾಲೆ ಬೆಳೆಯುತ್ತಲೇ ಇದೆ. ಈ ಸೋಂಕಿಗೆ ನಗರದಲ್ಲಿ ಇದುವರೆಗೆ 9,126 ಮಂದಿ ಕೊನೆಯುಸಿರೆಳೆದಿದ್ದಾರೆ. ಇದರಲ್ಲಿ 2021ರ ಮೇ ತಿಂಗಳಲ್ಲಿ ಹದಿಮೂರೇ ದಿನಗಳಲ್ಲಿ ಸತ್ತವರ ಸಂಖ್ಯೆ 2,754. ಕೋವಿಡ್ ಸಾವುಗಳಲ್ಲಿ ಈ ತಿಂಗಳಲ್ಲಿ ಇದುವರೆಗೆ ಸತ್ತವರ ಪಾಲು ಶೇ 30ರಷ್ಟಿದೆ.

ಮೇ 7ರವರೆಗೂ ಸಾವಿನ ಸಂಖ್ಯೆ 200ರ ಗಡಿ ದಾಟಿದ್ದು ಕಡಿಮೆ. ಆದರೆ, ಕಳೆದ ಒಂದೇ ವಾರದಲ್ಲಿ 1,981 ಮಂದಿ ಈ ರೋಗದಿಂದಾಗಿ ಅಸುನೀಗಿದ್ದಾರೆ. ಇವೆಲ್ಲವೂ ಸೋಂಕು ದೃಢಪಟ್ಟು ಬಿಬಿಎಂಪಿಯಲ್ಲಿ ನೋಂದಣಿಯಾಗಿರುವ ಸಾವುಗಳು. ಇತ್ತೀಚೆಗೆ ಕ್ಷಿಪ್ರ ಆ್ಯಂಟಿಜೆನ್ ಪರೀಕ್ಷೆ ಹಾಗೂ ಆರ್‌ಟಿ–ಪಿಸಿಆರ್ ಪರೀಕ್ಷೆಗಳೆರಡರಲ್ಲೂ ಕೊರೊನಾ ದೃಢಪಡದೆಯೂ ಈ ಸೋಂಕು ಹೊಂದಿರುವವರ ಸಂಖ್ಯೆ ಸಾಕಷ್ಟಿದೆ. ಅನೇಕ ಪ್ರಕರಣಗಳು ವ್ಯಕ್ತಿಯ ಸಿ.ಟಿ. ಸ್ಕ್ಯಾನ್ ವೇಳೆ ಪತ್ತೆಯಾಗುತ್ತಿವೆ. ಕೋವಿಡ್ ಹೊಂದಿದ್ದರೂ ಪರೀಕ್ಷೆಯಲ್ಲಿ ಸೋಂಕು ದೃಢಪಡದೆ ಸತ್ತವರ ಸಂಖ್ಯೆ ಈ ಅಂಕಿ ಅಂಶಗಳಲ್ಲಿ ಸೇರಿಲ್ಲ.

ಮೇ 7ರ ಬಳಿಕ ನಿತ್ಯವೂ 250ಕ್ಕೂ ಅಧಿಕ ಮಂದಿ ಈ ಕಾಯಿಲೆಯಿಂದಾಗಿ ಸಾವಿಗೀಡಾಗುತ್ತಿದ್ದಾರೆ. ಏಪ್ರಿಲ್ ಅಂತ್ಯದವರೆಗೆ ಕೋವಿಡ್ ದೃಢಪಟ್ಟವರಲ್ಲಿ ಸಾವಿನ ದರ ಶೇ 0.56ರಷ್ಟಿತ್ತು. ಅದೀಗ ದುಪ್ಪಟ್ಟಾಗಿದೆ. ಮೇ ತಿಂಗಳಲ್ಲಿ ಸಾವಿನ ದರ ಶೇ 1.08ರಷ್ಟು (ಮೇ 13ರ ಮಾಹಿತಿ) ಇದೆ.

ಐಸಿಯು ಕೊರತೆ ಕಾರಣ: 'ಮೇ ನಲ್ಲಿ ಸಾವಿನ ಸಂಖ್ಯೆ ಹೆಚ್ಚಳಕ್ಕೆ ಐಸಿಯು ಹಾಸಿಗೆಗಳ ಕೊರತೆಯೂ ಪ್ರಮುಖ ಕಾರಣಗಳಲ್ಲೊಂದು. ಒಟ್ಟು ಸಾವುಗಳಲ್ಲಿ ಐಸಿಯು ಹಾಸಿಗೆ ಸಿಗದೇ ಸತ್ತವರ ಪ್ರಮಾಣ ಶೇ 40ರಷ್ಟಿರಬಹುದು' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಏಪ್ರಿಲ್ ಮಧ್ಯದವರೆಗೂ ತೀವ್ರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡವರಿಗೆ ಹೇಗಾದರೂ ಐಸಿಯು/ವೆಂಟಿಲೇಟರ್ ಸೌಕರ್ಯದ ಹಾಸಿಗೆ ಹೊಂದಿಸಲು ಸಾಧ್ಯವಾಗುತ್ತಿತ್ತು. ಏಪ್ರಿಲ್ ಕೊನೆಯಲ್ಲಿ ಯಾವ ಆಸ್ಪತ್ರೆಯಲ್ಲೂ ಐಸಿಯು/ವೆಂಟಿಲೇಟರ್ ಹಾಸಿಗೆ ಲಭಿಸದ ಪರಿಸ್ಥಿತಿ ನಿರ್ಮಾಣವಾಗಿತ್ತು. ತುರ್ತು ಸಂದರ್ಭದಲ್ಲಿ ಆಮ್ಲಜನಕ ಹಾಗೂ ತೀವ್ರ ನಿಗಾ ವ್ಯವಸ್ಥೆ ಸಿಗದೇ ಹೋದಾಗ ಸಹಜವಾಗಿಯೇ ಸಾವಿನ ಸಂಖ್ಯೆಯೂ ಹೆಚ್ಚುತ್ತದೆ' ಎಂದು ಅವರು ವಿವರಿಸಿದರು.

'ಈಗಲೂ ಐಸಿಯು ಕೊರತೆ ತೀವ್ರವಾಗಿದೆ. ಐಸಿಯು ಹಾಸಿಗೆಗಳ ಸಂಖ್ಯೆಯನ್ನು ತ್ವರಿತಗತಿಯಲ್ಲಿ ಹೆಚ್ಚಿಸದೇ ಹೋದರೆ ಇನ್ನಷ್ಟು ಮಂದಿ ಸಾಯಬೇಕಾಗುತ್ತದೆ. ಸ್ಟೆಪ್‌ಡೌನ್ ಆಸ್ಪತ್ರೆಗಳ ನಿರ್ಮಾಣ, ಕೋವಿಡ್ ಕೇರ್ ಸೆಂಟರ್‌ಗಳ ನಿರ್ಮಾಣಕ್ಕಿಂತಲೂ ತುರ್ತು ಸಂದರ್ಭದಲ್ಲಿ ಜೀವ ಉಳಿಸುವ ವ್ಯವಸ್ಥೆಯತ್ತ ಗಮನಹರಿಸುವುದು ಮುಖ್ಯ. ಸರ್ಕಾರ ಬೇರೆಲ್ಲದಕ್ಕಿಂತ ಐಸಿಯು ಹೆಚ್ಚಳಕ್ಕೆ ಆದ್ಯತೆ ನೀಡಬೇಕು' ಎಂದರು.

ಸಿಗದ ತುರ್ತು ಸ್ಪಂದನೆ: ಆರೋಗ್ಯ ಸ್ಥಿತಿ ತೀವ್ರವಾಗಿ ಹದಗೆಟ್ಟ ರೋಗಿಗಳಿಗೆ ಐಸಿಯು ಹಾಸಿಗೆ ಕೊಡಿಸಲು ಬಿಬಿಎಂಪಿ ಅಧಿಕಾರಿಗಳು ಇತ್ತೀಚಿನವರೆಗೂ ನೆರವಾಗುತ್ತಿದ್ದರು. ಹಾಸಿಗೆ ಕಾಯ್ದಿರಿಸುವಿಕೆಯಲ್ಲಿ ಹಸ್ತಕ್ಷೇಪ ನಡೆಯುತ್ತಿದೆ ಎಂಬ ಆರೋಪ ಸದ್ದು ಮಾಡಿದ ಬಳಿಕ ಅಧಿಕಾರಿಗಳು ರೋಗಿಗಳಿಗೆ ಐಸಿಯು ಹಾಸಿಗೆ ಕೊಡಿಸಲು ಹಿಂದೇಟು ಹಾಕುತ್ತಿದ್ದಾರೆ. ತುರ್ತು ನೆರವಿಗಾಗಿ ಯಾರಾದರೂ ಸಂಪರ್ಕಿಸಿದರೂ, 'ಏನಿದ್ದರೂ ಸಹಾಯವಾಣಿಗೆ ಕರೆ ಮಾಡಿ ಹಾಸಿಗೆ ಪಡೆದುಕೊಳ್ಳಿ' ಎಂದು ಸಲಹೆ ನೀಡಿ ಕರೆ ಕಡಿತಗೊಳಿಸುತ್ತಿದ್ದಾರೆ. ಬಹುತೇಕ ಆಸ್ಪತ್ರೆಗಳಲ್ಲಿ ಐಸಿಯುವಿನ ಎಲ್ಲ ಹಾಸಿಗೆಗಳೂ ಭರ್ತಿ ಆಗಿವೆ. ಹಾಗಾಗಿ, ಸಹಾಯವಾಣಿಗೆ (1912) ಕರೆ ಮಾಡಿದರೂ ಸ್ಪಂದನೆ ಸಿಗುತ್ತಿಲ್ಲ.

'ಮನೆಯಲ್ಲೇ ಚಿಕಿತ್ಸೆ– ಎಚ್ಚರವಿರಲಿ'

'ಎರಡನೇ ಅಲೆಯ ಸಂದರ್ಭದಲ್ಲಿ ಕೋವಿಡ್ ದೃಢಪಟ್ಟ ಶೇ 90ಕ್ಕೂ ಅಧಿಕ ಮಂದಿ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದು ಆರೈಕೆಗೊಳಗಾಗುತ್ತಿದ್ದಾರೆ. ಇಂತಹವರು ರಕ್ತದಲ್ಲಿ ಆಮ್ಲಜನಕದ ಪ್ರಮಾಣವನ್ನು ಅಳೆಯುವ 'ಪಲ್ಸ್ ಆಕ್ಸಿಮೀಟರ್' ಜೊತೆಯಲ್ಲಿಟ್ಟುಕೊಳ್ಳುವುದು ಹಾಗೂ ಆಗಾಗ ವೈದ್ಯರ ಸಲಹೆ ಪಡೆಯುವುದು ಬಲು ಮುಖ್ಯ. ಆದರೆ, ಅನೇಕರು ತಮಗೇನೂ ಆಗದು ಎಂಬ ಭ್ರಮೆಯಲ್ಲಿ ಇಂತಹ ಮುನ್ನೆಚ್ಚರಿಕೆಗಳನ್ನು ವಹಿಸುವುದಿಲ್ಲ. ರೂಪಾಂತರಗೊಂಡ ತಳಿಯ ಕೊರೊನಾ ವೈರಸ್ ಸೋಂಕು ತಗುಲಿದವರಿಗೆ ಕೆಲವೊಮ್ಮೆ ರಕ್ತದಲ್ಲಿ ಆಮ್ಲಜನಕ ದಿಢೀರ್ ಕುಸಿಯುತ್ತದೆ. ಆಗ ತ್ವರಿತವಾಗಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಬೇಕು. ಇದು ಸಾಧ್ಯವಾಗದೇ ಹೋದರೆ ರೋಗಿ ಸಾಯುವ ಸಂಭವ ಹೆಚ್ಚು' ಎಂದು ಬಿಬಿಎಂಪಿ ಅಧಿಕಾರಿ ತಿಳಿಸಿದರು.

ಅಂಕಿ ಅಂಶ

10.15 ಲಕ್ಷ – ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೋನಾ ಸೋಂಕು ದೃಢಪಟ್ಟ ಸಂಖ್ಯೆ

9,126 ಲಕ್ಷ – ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಕೊನೆಯುಸಿರೆಳೆದವರು

1.08% ಲಕ್ಷ – ಕೋವಿಡ್ ದೃಢಪಟ್ಟವರಲ್ಲಿ ಸಾವಿನ ದರ

ಕೋವಿಡ್ ಸಾವಿನ ವಿವರ (2021ಮೇ 30ಗಳಿನಲ್ಲಿ)

ದಿನಾಂಕ	ಸೋಂಕು ಪತ್ತೆ	ಸತ್ತವರು
ಮೇ 13	15,191	161
ಮೇ 12	16286	286
ಮೇ 11	15,879	259
ಮೇ 10	16,747	374
ಮೇ 09	20,897	281
ಮೇ 08	21,534	285
ಮೇ 07	21,376	346
ಮೇ 06	23,706	139
ಮೇ 05	23,106	161
ಮೇ 04	20,870	132
ಮೇ 03	22,112	115
ಮೇ 02	21,199	64
ಮೇ 01	19,353	162

10 ಲಕ್ಷ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, ಈ ತಿಂಗಳು 13 ದಿನಗಳಲ್ಲಿಯೇ 2.58 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 10 ಲಕ್ಷದ ಗಡಿ ದಾಟಿದೆ.

ಕಳೆದ ವರ್ಷ ಮಾ.8ರಂದು ವಿದೇಶದಿಂದ ನಗರಕ್ಕೆ ಮರಳಿದ್ದ 40 ವರ್ಷದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರು ಕೋವಿಡ್ ಪೀಡಿತರಾಗಿದ್ದರು. ಇದು ನಗರದಲ್ಲಿ ವರದಿಯಾದ ಪ್ರಥಮ ಕೋವಿಡ್ ಪ್ರಕರಣವಾಗಿತ್ತು. ಸೋಂಕಿತರ ಸಂಖ್ಯೆ 1 ಲಕ್ಷದ ಗಡಿ ದಾಟಲು ಐದೂವರೆ ತಿಂಗಳು ಬೇಕಾಗಿದ್ದವು. ತದನಂತರ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದ ಕಾರಣ ಒಂದು ತಿಂಗಳ ಅವಧಿಯಲ್ಲಿ ಮತ್ತೊಂದು ಲಕ್ಷ ಮಂದಿ ಸೋಂಕಿತರಾಗಿದ್ದರು.

ಅಕ್ಟೋಬರ ಬಳಿಕ ಸೋಂಕಿತರ ಸಂಖ್ಯೆ ಇಳಿಕೆಯಾಗಿತ್ತು. ಈ ವರ್ಷ ಫೆಬ್ರವರಿಯಲ್ಲಿ ಕೆಲ ದಿನಗಳು ಹೊಸ ಪ್ರಕರಣ 200ರ ಗಡಿಯ ಆಸುಪಾಸಿನಲ್ಲಿದ್ದವು. ಆದರೆ, ಮಾರ್ಚ್ ಬಳಿಕ ಏರುಗತಿ ಪಡೆದುಕೊಂಡಿತು. ಕೆಲ ದಿನಗಳು 24 ಗಂಟೆಗಳ ಅವಧಿಯಲ್ಲಿ 20 ಸಾವಿರಕ್ಕೂ ಅಧಿಕ ಪ್ರಕಣಗಳು ವರದಿಯಾಗಿವೆ. ಈ ವರ್ಷ ನಾಲ್ಕುವರೆ ತಿಂಗಳಲ್ಲಿಯೇ 6.26 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಇದರಿಂದಾಗಿ ಮೊದಲ ಪ್ರಕರಣ ವರದಿಯಾಗಿ ಒಂದು ವರ್ಷದ ಎರಡು ತಿಂಗಳು ಕಳೆಯುವ ಮುನ್ನವೆ ಒಟ್ಟು ಸೋಂಕಿತರಾದವರ ಸಂಖ್ಯೆ 10 ಲಕ್ಷ ದಾಟಿದೆ.

ನಗರದಲ್ಲಿ ಗುರುವಾರ 15,191 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಕಳೆದೊಂದು ವಾರದಿಂದ ಪ್ರತಿನಿತ್ಯ ಸರಾಸರಿ 15 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3.59 ಲಕ್ಷಕ್ಕೆ ಏರಿಕೆಯಾಗಿದೆ. ಕೋವಿಡ್‌ಗೆ ಸಾವಿಗೀಡಾಗುವವರ ಸಂಖ್ಯೆ ಕೂಡ ಹೆಚ್ಚಳ ಕಂಡಿದೆ. ಮತ್ತೆ 161 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಕೊರೊನಾ ಸೋಂಕಿಗೆ ಸಾವಿಗೀಡಾದವರ ಸಂಖ್ಯೆ 9,125ಕ್ಕೆ ತಲುಪಿದೆ.

ನಗರದ ಕೋವಿಡ್ ಅಂಕಿ–ಅಂಶ

10,14,996 ▲ ಒಟ್ಟು ಪ್ರಕರಣಗಳು (9,99,805 ನಿನ್ನೆಯ ವಿವರ)

3,59,565 ▼ ಸಕ್ರಿಯ ಪ್ರಕರಣಗಳು

6,46,305 ▲ ಗುಣಮುಖರಾದವರು

9,125 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	15,191	▼
ಗುಣಮುಖ	16,084	▼
ಸಾವು	161	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.15 ಕೋಟಿ ▲	2.40 ಕೋಟಿ ▲
ಸಕ್ರಿಯ ಪ್ರಕರಣ	1.77 ಕೋಟಿ ▼	37.05 ಲಕ್ಷ ▲
ಗುಣಮುಖ	13.94 ಕೋಟಿ ▲	2 ಕೋಟಿ ▲
ಸಾವು	33.52 ಲಕ್ಷ ▲	2.62 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.50 ಲಕ್ಷ ▲	3.28 ಲಕ್ಷ ▲
ಗುಣಮುಖ	8.12 ಲಕ್ಷ ▲	3.25 ಲಕ್ಷ ▲
ಸಾವು	13,427 ▲	3,691 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

76,638 ▲ ಬ್ರೆಜಿಲ್ · 31,109 ▲ ಅಮೆರಿಕ · 21,489 ▲ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

63.71 ▼ ಅಮೆರಿಕ · 10.09 ▼ ಬ್ರೆಜಿಲ್ · 7.54 ▼ ಫ್ರಾನ್ಸ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

78,857 ▲ ಮಹಾರಾಷ್ಟ್ರ · 16,768 ▲ ತಮಿಳುನಾಡು · 20,618 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

52.69 ಮಹಾರಾಷ್ಟ್ರ ▲ · 20.50 ಕೇರಳ ▲ · 15.80 ಉತ್ತರ ಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್

'ಕೋವ್ಯಾಕ್ಸಿನ್ ಪೇಟೆಂಟ್ ರದ್ದತಿಗೆ ಚಿಂತನೆ'

• ಅಕ್ರಂ ಮೊಹಮ್ಮದ್

ಡಿ.ವಿ. ಸದಾನಂದಗೌಡ

ಬೆಂಗಳೂರು: ಭಾರತ್ ಬಯೋಟೆಕ್ ಕೋವಿಡ್–19ಗಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿರುವ 'ಕೋವ್ಯಾಕ್ಸಿನ್' ಲಸಿಕೆಯ ಬೌದ್ಧಿಕ ಸನ್ನದು ರಕ್ಷಣೆಯ ಪೇಟೆಂಟ್ ರದ್ದುಪಡಿಸಬೇಕೆಂಬ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವ ಡಿ.ವಿ.ಸದಾನಂದಗೌಡ ಹೇಳಿದ್ದಾರೆ.

ಅಮೆರಿಕದಲ್ಲಿ ಕೋವಿಡ್‌ಗೆ ಸಂಬಂಧಿಸಿದಂತೆ ಲಸಿಕೆಗಳು ಮತ್ತು ಮಹತ್ವದ ಔಷಧಗಳ ಮೇಲಿನ ಪೇಟೆಂಟ್ ರದ್ದುಪಡಿಸಿದ ಕ್ರಮದ ಬೆನ್ನಲ್ಲೇ ಕೋವ್ಯಾಕ್ಸಿನ್ ಪೇಟೆಂಟ್ ರದ್ದುಪಡಿಸುವುದರ ಸಾಧ್ಯತೆ ಬಗ್ಗೆ ಪರಿಶೀಲನೆ ನಡೆಸಲು ಸಮಿತಿಯೊಂದನ್ನು ಕೇಂದ್ರ ರಚಿಸಿದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಬಗ್ಗೆ ನೀತಿ ಆಯೋಗ, ಭಾರತೀಯ ಔಷಧ ಸಂಶೋಧನಾ ಮಂಡಳಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರತಿನಿಧಿಗಳು ಚರ್ಚೆ ನಡೆಸುತ್ತಿದ್ದಾರೆ' ಎಂದರು.

ದೇಶದಲ್ಲಿ ಬೇಡಿಕೆಗೆ ತಕ್ಕಷ್ಟು ಲಸಿಕೆಗಳು ಉತ್ಪಾದನೆ ಆಗುತ್ತಿಲ್ಲ. ಇದರಿಂದಾಗಿ 18–44 ವರ್ಷ ವಯಸ್ಸಿನವರಿಗೆ ಲಸಿಕೆ ನೀಡಲು ಸಾಧ್ಯವಾಗುತ್ತಿಲ್ಲ. ಕೋವ್ಯಾಕ್ಸಿನ್ ಪೇಟೆಂಟ್ ರದ್ದು ಮಾಡಿದರೆ ಇತರ ಕಂಪನಿಗಳ ಮೂಲಕ ಹೆಚ್ಚು ಲಸಿಕೆ ತಯಾರಿಸಲು ಸಾಧ್ಯವಾಗಬಹುದು ಎಂಬ ಚರ್ಚೆ ನಡೆದಿದೆ ಎಂದರು. ವಿದೇಶಗಳಿಂದ ಲಸಿಕೆ ಪಡೆಯಲು ತಮಿಳುನಾಡು ಮತ್ತು ಮಹಾರಾಷ್ಟ್ರ ಮಾತ್ರ ಜಾಗತಿಕ ಟೆಂಡರ್ ಕರೆದಿವೆ. ಕರ್ನಾಟಕ ಜಾಗತಿಕ ಟೆಂಡರ್ ಕರೆದಿಲ್ಲ. ಈ ಸಂಬಂಧ ಕೇಂದ್ರಕ್ಕೆ ಮನವಿಯನ್ನು ಸಲ್ಲಿಸಿದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾಲ್ಕಕ್ಕಿಂತ ಹೆಚ್ಚು ಜನ ಸೇರದಂತೆ ತಾಕೀತು

ಬೆಂಗಳೂರು: ನಗರದಲ್ಲಿ ಲಾಕ್‌ಡೌನ್ ವೇಳೆ ನಾಲ್ಕು ಹಾಗೂ ಅದಕ್ಕಿಂತ ಹೆಚ್ಚು ಜನ ಸೇರದಂತೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಾಕೀತು ಮಾಡಿದ್ದಾರೆ.

ನಗರದಲ್ಲಿ ಜಾರಿ ಮಾಡಿರುವ ನಿಷೇಧಾಜ್ಞೆ ಆದೇಶವನ್ನು ತಿದ್ದುಪಡಿ ಮಾಡಿರುವ ಕಮಿಷನರ್, 'ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ಮನುಷ್ಯರ ಜೀವ ಹಾಗೂ ಆರೋಗ್ಯ ರಕ್ಷಣೆಗಾಗಿ ನಿಯಮ ರೂಪಿಸಲಾಗಿದೆ' ಎಂದಿದ್ದಾರೆ.

'ಯಾರೂ ಗುಂಪು ಸೇರಬಾರದು. ಸೇರಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ಆದೇಶ ಮೇ 24ರವರೆಗೆ ಜಾರಿಯಲ್ಲಿರಲಿದೆ' ಎಂದೂ ಅವರು ಹೇಳಿದ್ದಾರೆ.

ಲಸಿಕೆ ದಾಖಲೆ ನೋಡಿ ಅನುಕೂಲ: 'ನಗರದಲ್ಲಿ ಲಸಿಕೆ ಪಡೆಯಲು ಸಂಚರಿಸುತ್ತಿರುವವರ ಬಳಿ ದಾಖಲೆಗಳು ಇದ್ದಲ್ಲಿ, ಅವುಗಳನ್ನು ಪರಿಶೀಲಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ' ಎಂದು ಕಮಲ್ ಪಂತ್ ಟ್ವೀಟ್ ಮಾಡಿದ್ದಾರೆ.

'ಸಾರ್ವಜನಿಕರು, ಲಸಿಕೆ ಪಡೆಯುತ್ತಿರುವುದರ ಕುರಿತ ಎಸ್‌ಎಂಎಸ್, ರಸೀದಿ, ಆನ್‌ಲೈನ್ ದಾಖಲೆ ಅಥವಾ ಯಾವುದಾದರೂ ದಾಖಲೆ ತೋರಿಸತಕ್ಕದ್ದು. ಆದಷ್ಟು ಮನೆಯಲ್ಲೇ ಇರಿ. ಸುರಕ್ಷಿತವಾಗಿರಿ' ಎಂದೂ ಹೇಳಿದ್ದಾರೆ.

ವರದಿ ನೀಡಲು ವಿಳಂಬ: ಅಸಮಾಧಾನ

ಬೆಂಗಳೂರು: ಕೋವಿಡ್ ಪರೀಕ್ಷಾ ವರದಿ ತಿಳಿಸಲು ಸಮಯ ನಿಗದಿಪಡಿಸದ ಪ್ರಯೋಗಾಲಯಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಪರೀಕ್ಷೆಗೆ ಗಂಟಲು ದ್ರವ ನೀಡಿದವರೂ ಮೃತಪಟ್ಟ ಬಳಿಕವೂ ವರದಿ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಹೈಕೋರ್ಟ್ ಸಿಬ್ಬಂದಿಯೊಬ್ಬರಿಂದ ಮೇ 10ರಂದು ಬೆಳಿಗ್ಗೆ 11.53ಕ್ಕೆ ಬೆಂಗಳೂರಿನ ಸರ್ ಸಿ.ವಿ. ರಾಮನ್ ಜನರಲ್ ಆಸ್ಪತ್ರೆ ಸಿಬ್ಬಂದಿ ಗಂಟಲು ದ್ರವದ ಮಾದರಿ ಸಂಗ್ರಹಿಸಿದ್ದಾರೆ. ಅದಾದ 11 ಗಂಟೆಗಳ ನಂತರ ಪ್ರಯೋಗಾಲಯ ಅದನ್ನು ಪಡೆದುಕೊಂಡಿದೆ. ಮೇ 11ರ ಮಧ್ಯಾಹ್ನ 1 ಗಂಟೆಗೆ ಮಾದರಿ ಪರೀಕ್ಷೆ ಮಾಡಲಾಗಿದೆ. 1.33ರ ವೇಳೆಗೆ ಫಲಿತಾಂಶ ಸಿದ್ಧಗೊಂಡಿದೆ. ಆದರೂ, ವರದಿಯನ್ನು ಸಂಬಂಧಿಸಿದವರಿಗೆ ತಲುಪಿಸಿಲ್ಲ. ಅವರು 12ರ ರಾತ್ರಿ ಮೃತಪಟ್ಟಿದ್ದಾರೆ' ಎಂದು ಪೀಠ ವಿವರಿಸಿತು.

'ಮೃತಪಟ್ಟ ವ್ಯಕ್ತಿ ಹೈಕೋರ್ಟ್ ಉದ್ಯೋಗಿ ಎಂಬ ಕಾರಣಕ್ಕೆ ಈ ವಿಷಯ ಕೈಗೆತ್ತಿಕೊಳ್ಳುತ್ತಿಲ್ಲ. ಜನರ ಜೀವದ ಬಗ್ಗೆ ನಾವು ಚಿಂತಿಸುತ್ತಿದ್ದೇವೆ. ವರದಿ ನೀಡಲು ವಿಳಂಬ ಮಾಡಿದವರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿ ನೀಡಬೇಕು. ಈ ರೀತಿಯ ಘಟನೆಗಳು ಪುನರಾವರ್ತನೆ ಆಗದಂತೆ ಎಲ್ಲ ಪ್ರಯೋಗಾಲಯಗಳಿಗೆ ನಿರ್ದೇಶನ ನೀಡಬೇಕು' ಎಂದು ಪೀಠ ಆದೇಶಿಸಿತು.

ರೈಲು ಪ್ರಯಾಣಕ್ಕೆ ನಕಲಿ ವರದಿ: ಬಂಧನ

ಪ್ರಜಾವಾಣಿ ವಾರ್ತೆ

ಸಂಪತ್ ಲಾಲ್

ಬೆಂಗಳೂರು: ನಗರದಿಂದ ರೈಲಿನ ಮೂಲಕ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಪ್ರಯಾಣಿಸುತ್ತಿದ್ದ ಜನರಿಗೆ ಕೋವಿಡ್ ನೆಗೆಟಿವ್ ನಕಲಿ ವರದಿ ಪ್ರತಿ ನೀಡುತ್ತಿದ್ದ ಆರೋಪದಡಿ ಸಂಪತ್ ಲಾಲ್ ಎಂಬಾತನನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಕ್ಕಿಪೇಟೆ ಮುಖ್ಯರಸ್ತೆ ನಿವಾಸಿ ಸಂಪತ್ ಲಾಲ್, ಹಲವು ದಿನಗಳಿಂದ ಕೃತ್ಯ ಎಸಗುತ್ತಿದ್ದ. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಸೆರೆಹಿಡಿಯಲಾಗಿದೆ. ಆತನಿಂದ 3 ನಕಲಿ ನೆಗೆಟಿವ್ ವರದಿ ಪ್ರತಿ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರೈಲು ಹಾಗೂ ವಿಮಾನ ಟಿಕೆಟ್ ಕಾಯ್ದಿರಿಸುವ ಏಜೆಂಟ್‌ನಾಗಿ ಆರೋಪಿ ಕೆಲಸ ಮಾಡುತ್ತಿದ್ದ. ಲಾಕ್‌ಡೌನ್ ಸಮಯದಲ್ಲಿ ರೈಲಿನಲ್ಲಿ ಪ್ರಯಾಣಿಸಲು ಅವಕಾಶವಿದ್ದು, ಪ್ರಯಾಣಿಕರಿಗೆ ಸೋಂಕಿಲ್ಲ ಎಂಬ ವರದಿ ಕಡ್ಡಾಯ ಮಾಡಲಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿ, ಕೆಲವರಿಗೆ ನಕಲಿ ವರದಿ ತಯಾರಿಸಿ ಕೊಡುತ್ತಿದ್ದ.'

'ಲ್ಯಾಬ್‌ಗಳ ಹೆಸರಿನಲ್ಲಿ ನಕಲಿ ಪ್ರಮಾಣಪತ್ರಗಳನ್ನು ಸಿದ್ಧಪಡಿಸಿದ್ದ ಆರೋಪಿ, ಅದಕ್ಕೆ ನಕಲಿ ವೈದ್ಯರ ಸಹಿಯನ್ನೂ ಮಾಡುತ್ತಿದ್ದ. ಅಂಥ ಪ್ರತಿಗಳನ್ನು ಒಂದಕ್ಕೆ ₹ 3 ಸಾವಿರದಿಂದ ₹ 4 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ರಾಜಸ್ಥಾನ, ಪಶ್ಚಿಮ ಬಂಗಾಳಕ್ಕೆ ರೈಲಿನ ಮೂಲಕ ಹೋಗಿರುವ ಹಲವರು ಆರೋಪಿ ಬಳಿ ನಕಲಿ ವರದಿ ಪ್ರತಿ ಪಡೆದುಕೊಂಡಿದ್ದು ತನಿಖೆಯಿಂದ ಗೊತ್ತಾಗಿದೆ. ಅಂಥ ಪ್ರಯಾಣಿಕರ ಪಟ್ಟಿ ಸಮೇತ ಆಯಾ ರಾಜ್ಯಗಳ ಪೊಲೀಸರಿಗೆ ಮಾಹಿತಿ ನೀಡಲಾಗಿದೆ' ಎಂದರು.

'ಕೋವಿಡ್ ನಿರ್ವಹಣೆಗೆ ಮೇಲ್ವಿಚಾರಣಾ ಸಮಿತಿ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾಯಿಲೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಲಸಿಕೆ ಸೇರಿದಂತೆ ವಿವಿಧ ವಿಭಾಗಗಳಿಗೆ ಮೇಲ್ವಿಚಾರಣಾ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿ ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಯು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದೆ.

'ಮೇಲ್ವಿಚಾರಣಾ ಸಮಿತಿಯು ನಮ್ಮ ಪಕ್ಷದ ಹಿರಿಯ ನಾಯಕರ ಸಲಹೆ, ಮಾರ್ಗದರ್ಶನಗಳನ್ನು ಕೂಡ ಪಡೆದು ಕಾರ್ಯನಿರ್ವಹಿಸುವಂತಾಗಬೇಕು. ಡಿ.ವಿ. ಸದಾನಂದಗೌಡ, ಜಗದೀಶ ಶೆಟ್ಟರ್, ವಿ. ಸೋಮಣ್ಣ ಸೇರಿದಂತೆ ಹಿರಿಯ ನಾಯಕರನ್ನು ಗಣನೆಗೆ ತೆಗೆದುಕೊಂಡು ಸಮಿತಿಯ ಮುಖ್ಯಸ್ಥರನ್ನಾಗಿ ನೇಮಿಸಿ, ಜವಾಬ್ದಾರಿ ಹಂಚಿಕೆ ಮಾಡಬೇಕು. ಕೋವಿಡ್ ನಿರ್ವಹಣೆಗೆ ಸಹಕಾರಿಯಾಗುವ ಮಾರ್ಗಸೂಚಿಗಳನ್ನು ರೂಪಿಸಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ಲಸಿಕೆ, ರೆಮ್‌ಡಿಸಿವಿರ್ ಔಷಧ ಹಾಗೂ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಾಸವಾಗದಂತೆ ಕ್ರಮಕೈಗೊಳ್ಳಬೇಕು' ಎಂದು ಸಮಿತಿಯ ಅಧ್ಯಕ್ಷ ಎಂ. ರಾಜ್‌ಕುಮಾರ್ ತಿಳಿಸಿದ್ದಾರೆ.

'ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರ ಹಳಿ ತಪ್ಪಿದೆ. ಮಾರ್ಗಸೂಚಿಗಳು ಗೊಂದಲದಿಂದ ಕೂಡಿದ್ದು, ಸಾರ್ವಜನಿಕರಿಗೆ ಸಮಸ್ಯೆಗಳನ್ನು ತಂದೊಡ್ಡುತ್ತಿವೆ. ರೆಮ್‌ಡಿಸಿವಿರ್ ಸೇರಿದಂತೆ ಅಗತ್ಯ ಔಷಧಗಳು ಕಾಳ ಸಂತೆಯಲ್ಲಿ ಮಾರಾಟವಾಗುತ್ತಿವೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಸೋಂಕಿತರು ಮೃತಪಡುತ್ತಿದ್ದಾರೆ. ಕೋವಿಡ್ ಪೀಡಿತರ ಸಂಪರ್ಕ ಪತ್ತೆ ಕಾರ್ಯ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಇನ್ನಾದರೂ ಸರ್ಕಾರವು ಎಚ್ಚೆತ್ತುಕೊಂಡು ಜನರ ಜೀವ ಉಳಿಸಲು ಸಹಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.



Founder President
H.H. Sri Vibudhesha Theertha Swamiji

POORNAPRAJNA PRE-UNIVERSITY COLLEGE, UDUPI

(Promoted & Managed by Udupi Sri Admar Mutt Education Council)
(Accredited 'A' Grade Pre-University College by Department of Pre-University Education, Bengaluru)
Website:www.poornaprajnapuc.com (Email: udupi.ppucollege@gmail.com)
Contact No. : 9845713191, (0820-2521286)

President
H.H. Vishwapriya Theertha Swamiji



Sri Pradeep Kumar
Advocate
Hon. Secretary
PPUC, Udupi

Our college is one of the highly acknowledged institutions in Karnataka known for its academic excellence. The college is among the few colleges recognised by the Pre-University board for their overall accomplishments. The students of our college have garnered recognition through their academic and co-curricular achievements.

LANGUAGE 1	LANGUAGE 2	SCIENCE	COMMERCE
English	Kannada or Hindi or Sanskrit	PCMB (3 Batches) PCMS, PCMCs, PCME	BASE (2 Batches) BASM, BASCs

Faculty:
* Well qualified, experienced and dedicated
* Counselling and guidance to students for their all round development
* Working as State Level Resource Persons
* Serving as the members of Question paper Committee

Residential Facility:
*Separate hostel for Boys & Girls
*Delicious and nutritious food
*Pleasant study hall
*Outing provision
*Hostel Care Center
*Visual display once in a week
*Solar Water heater

Specialized training for the competitive examinations
* Science – CET, NEET & JEE Main -Coaching by state level resource persons
* Commerce – CA & CS – Foundation – Coaching by experienced faculty
* Special training for sports and cultural activities
* Special weightage given if students continue in the same campus for further studies

Infrastructural facilities:
* Well equipped laboratories
* Well maintained track Play ground with Basketball court
* Audio- Visual hall with PPT Facility
* Library with very valuable Reference books, dailies and periodicals
* Indoor sports room
* Smart Classes
* Well furnished auditorium

Facilities and incentives
* College has a secure campus with CCTV facility and security guards
* Purified drinking Water (Cold/Hot)
* Book Bank facility for poor students
* Scholarship for meritorious students
* Remedial classes for slow learners
* Special coaching for advanced learners

Extra Curricular Activities :
* Science Club
* Commerce Association
* Cultural Association
* Eco - Club
* Ladies Forum
* NCC
* Sports Club
* Magazine & Wall Magazine

Dr. M.R. Hegde, Founder Director, PIM, Udupi, 9880352026
Sri Venkatachala, Office Staff, 9964280214
Sri Ramananda Rao, Lecturer, PPUC, Udupi, 9342205939
Smt Prathima Baliga, Principal, 9845713191
Sri Ishwara.P, Off. Sup. PPUC, 9916045035
Sri Gururaja, Vice-Principal, PPUC, Udupi, 9845295124
Sri Praveen Kumar P.B., Treasurer, PPUC, Udupi, 9448153565
Sri Pradeep Kumar, Secretary, PPUC, Udupi, 9448012402

2019 - 20 II PU RESULTS

SCIENCE		COMMERCE	
Total Percentage	: 100%	Total Percentage	: 99%
Total Appeared	: 336	Total Appeared	: 232
Distinction	: 172	Distinction	: 126
First Class	: 162	First Class	: 100
Second Class	: 2	Second Class	: 5

BOYS HOSTEL

GIRLS HOSTEL

SCIENCE BLOCK

COMPUTER LAB

2020 - 21 RESULTS
CA Foundation : 76.22%
CS Foundation : 100%

Fee Concession for Achievers - I PU Admission
* Full Fee Concession to the students who secure within 5 ranks in SSLC Public Exam
* Above 95% will get 40% concession
* Full fee concession for Sports medal winners at National Level (at least 50% marks in SSLC must)
* 40% fee concession for those who participated in National Level Sports Meet

JEE MAIN/CET ACHIEVERS

MANOJ M (JEE & CET), ANIRUDH (JEE), NIDEESHA (JEE & CET), DILIP S (JEE & CET), BHUSHAN N (JEE), KARTHIK P (JEE & CET), DISHA A (JEE), PRASAD (JEE), ANMOL S (JEE & CET), VINAYAK D (JEE & CET), SANATH B (JEE), PRATHIKSHA (CET), SHUBHA (CET)

NEET ACHIEVERS

NIDHEESH B, DISHA A, SANJANA S, ANMOL S, SHASHANK, ADITHYA S, AKSHATHA B, PAVITHRA, SHREYANK

II PU COMMERCE STATE RANK HOLDERS



ABHIRAM 9th Rank (98.2%), ANUP 10th Rank (98%), VIJAYA B 10th Rank (98%)

II PU EXAM TOPPERS

SCIENCE

MANOJ M MALLYA 584 (97.3%), SANJANA SHARMA 583 (97.1%), HUMAIRA ARIF 581 (96.8%), CHINMAY 580 (96.7%), PRANAV RAI 580 (96.7%)

COMMERCE

JAGRATI NAYAK 587 (97.8%), SHAMA R KUNDER 587 (97.8%), LAVANYA TANTRY 587(97.8%), SMRITHI A. RAO 586 (97.7%), PRADYUMNA R. N. 585 (97.5%), SUMEDHA 584 (97.3%), NISHA S NAYAK 582 (97%), ANANYA SHETTY 582 (97%), SHREYA 580 (96.7%)

ADMISSIONS OPEN FOR HOSTEL

Contact : Dr. Olivita D'Souza : 8277767354, 9483315283, Sri Sathish Hande : 9481115117, 8762185171

ಹಲವೆಡೆ ಉತ್ತಮ ಮಳೆ: ಸಿಡಿಲಿಗೆ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮೈಸೂರು, ಕೊಡಗು, ಉತ್ತರಕನ್ನಡ, ಚಿಕ್ಕಮಗಳೂರಿನಲ್ಲಿ ಗುರುವಾರ ಉತ್ತಮ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆ ಆದಿನಗ್ಗೆಯಲ್ಲಿ ಸಿಡಿಲು ಬಡಿದು ಕೂಲಿಕಾರ್ಮಿಕ ಎಚ್.ಎಲ್.ಉಮೇಶ್ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಗರಕಹಳ್ಳಿಯಲ್ಲಿ ಹೆಂಚಿನ ಮನೆ ಕುಸಿದಿದ್ದು, ಮನೆಯವರು ಪಾರಾಗಿದ್ದಾರೆ. ಕೊಡಗು ಜಿಲ್ಲೆ ಹೆಬ್ಬಾಲೆಯಲ್ಲಿ ಶಾಲೆಯ ತಡೆಗೋಡೆಯೊಂದು ಕುಸಿದಿದೆ.

ಮೈಸೂರು ನಗರ, ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್. ನಗರ, ಸಾಲಿಗ್ರಾಮ ತಾಲ್ಲೂಕಿನಲ್ಲಿ ಬಿರುಸಿನ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ಹಲವೆಡೆ ಬುಧವಾರ ರಾತ್ರಿ ಬಿರುಸಿನ ಮಳೆಯಾಗಿದೆ.

ಕೊಡಗಿನ ಸುಂಟಿಕೊಪ್ಪ, ಮಡಿಕೇರಿ, ಗೋಣಿಕೊಪ್ಪಲು, ನಾಪೋಕ್ಲುಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಹೆಬ್ಬಾಲೆ ಸರ್ಕಾರಿ ಪ್ರಾಥಮಿಕ ಶಾಲೆಯ ತಡೆಗೋಡೆ ಕುಸಿದಿದೆ. ಮುಂದಿನ ಎರಡು ದಿನ ಭಾರಿ ಮಳೆ ಸಾಧ್ಯತೆಯಿದ್ದು, ಅಪಾಯದ ಸ್ಥಳಗಳಲ್ಲಿ ವಾಸವಿರುವ ನಿವಾಸಿಗಳು ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎಂದು ಕೊಡಗು ಜಿಲ್ಲಾಡಳಿತ ಸೂಚನೆ ನೀಡಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ, ಹೊಸನಗರ, ರಿಪ್ಪನ್‌ಪೇಟೆ ಭಾಗದಲ್ಲಿ ಗುಡುಗು ಸಹಿತ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೀರೂರು, ಶೃಂಗೇರಿ, ಕೊಪ್ಪ, ಎನ್.ಆರ್. ಪುರ, ಬಾಳೆಹೊನ್ನೂರು ಭಾಗದಲ್ಲಿ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಯಿತು. ಹೊನ್ನಾವರ ಮತ್ತು ಕುಮಟಾದಲ್ಲಿ ಬುಧವಾರ ರಾತ್ರಿ ಮಳೆ ಸುರಿಯಿತು.

ಮೂರು ದಿನ ಮಳೆ ಸಾಧ್ಯತೆ

ಕಾರವಾರ: ಅರಬ್ಬಿ ಸಮುದ್ರದಲ್ಲಿ ಲಕ್ಷದ್ವೀಪ ಭಾಗದಲ್ಲಿ ಗುರುವಾರ ಬೆಳಿಗ್ಗೆ ಕಡಿಮೆ ಒತ್ತಡದ ಪ್ರದೇಶ ನಿರ್ಮಾಣವಾಗಿದೆ. ಮೇ 14ರಂದು ಬೆಳಿಗ್ಗೆ ಅದು ವಾಯುಭಾರ ಕುಸಿತವಾಗಿ ಬದಲಾಗುವ ಲಕ್ಷಣಗಳಿವೆ. 15ರಂದು ಮತ್ತಷ್ಟು ವೇಗ ಪಡೆದು ಚಂಡಮಾರುತವಾಗಿ ಬದಲಾಗಲಿದೆ. ಬಳಿಕ ಮೂರು ದಿನ ಪಶ್ಚಿಮ ಕರಾವಳಿ ಮೂಲಕ ಸಾಗಲಿದ್ದು, ಭಾರಿ ಮಳೆ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಮೇ 14ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್', 15 ಮತ್ತು 16ರಂದು ಕರಾವಳಿ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಿಗೆ 'ರೆಡ್ ಅಲರ್ಟ್', 17ರಂದು 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ ಎಂದು ತಿಳಿಸಿದೆ.

ಎರಡು ಡೋಸ್‌ಗಳ ನಡುವಣ ಅಂತರ ● ವೈದ್ಯಕೀಯ ತಜ್ಞರ ಅಭಿಮತ

ಲಸಿಕೆ: 12ರಿಂದ 16 ವಾರವೇ ಉತ್ತಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಶೀಲ್ಡ್' ಲಸಿಕೆಯ ಎರಡು ಡೋಸ್‌ಗಳ ಅಂತರವನ್ನು 12ರಿಂದ 16 ವಾರಗಳಿಗೆ ಹೆಚ್ಚಿಸಬೇಕು ಎಂಬ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ಶಿಫಾರಸಿಗೆ ರಾಜ್ಯದ ತಜ್ಞರು ಕೂಡ ಧ್ವನಿಗೂಡಿಸಿದ್ದಾರೆ.

ಆದರೆ, ಇದೇ ವೇಳೆ ಲಸಿಕೆಯ ಕೊರತೆ ಕೂಡ ಈ ಶಿಫಾರಸಿಗೆ ಕಾರಣ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ.

ಸದ್ಯ 6ರಿಂದ 8 ವಾರ ಅಂತರದಲ್ಲಿ 'ಕೋವಿಶೀಲ್ಡ್' ಲಸಿಕೆಯ ಎರಡನೇ ಡೋಸ್ ನೀಡಲಾಗುತ್ತಿದೆ. 'ಕೋವ್ಯಾಕ್ಸಿನ್' ಲಸಿಕೆಯನ್ನು 4ರಿಂದ 6 ವಾರಗಳ ಅಂತರದಲ್ಲಿ ಒದಗಿಸಲಾಗುತ್ತಿದೆ.

ಈ ಲಸಿಕೆಯ ಅವಧಿ ವಿಸ್ತರಣೆಗೆ ಎನ್‌ಟಿಎಜಿಐ ಶಿಫಾರಸು ಮಾಡಿಲ್ಲ. ಹಾಗಾಗಿ, ಹಾಲಿ ಇರುವ ಅಂತರದಲ್ಲಿಯೇ 'ಕೋವ್ಯಾಕ್ಸಿನ್' ಲಸಿಕೆ ಎರಡನೇ ಡೋಸ್ ವಿತರಣೆ ಮುಂದುವರಿಯಲಿದೆ.

'ವೈಜ್ಞಾನಿಕ ಪುರಾವೆಗಳು ಲಭ್ಯ'

'ಕೋವಿಶೀಲ್ಡ್' ಲಸಿಕೆಯನ್ನು 12ರಿಂದ 16 ವಾರಗಳ ಅಂತರದಲ್ಲಿ ಎರಡನೇ ಡೋಸ್ ನೀಡಬೇಕು ಎಂದು ಈ ಹಿಂದೆ ಹೇಳಲಾಗಿತ್ತು. ವಿದೇಶಗಳಲ್ಲಿ ಇದೇ ಅಂತರದಲ್ಲಿ ನೀಡಲಾಗುತ್ತಿದ್ದು, ಲಸಿಕೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಆದರೆ, ಪ್ರಾರಂಭಿಕ ದಿನಗಳಲ್ಲಿ 28 ದಿನಗಳ ಅಂತರವನ್ನು ನಿಗದಿ ಮಾಡಲಾಗಿತ್ತು. ಬಳಿಕ 6ರಿಂದ 8 ವಾರ ಇರಬೇಕು ಎಂದು ಸೂಚಿಸಲಾಯಿತು. ಈಗ ಅವಧಿಯನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಇದರಿಂದ ಯಾವುದೇ ಸಮಸ್ಯೆಯಿಲ್ಲ. 8 ವಾರಗಳಿಗೆ ಹೋಲಿಸಿದಲ್ಲಿ 12 ವಾರದ ನಂತರವೇ ಉತ್ತಮ ಫಲಿತಾಂಶ ದೊರೆಯಲಿದೆ. ಈ ಬಗ್ಗೆ ವೈಜ್ಞಾನಿಕ ಪುರಾವೆಗಳಿವೆ.

ಡಾ. ಗಿರಿಧರ್ ಬಾಬು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

'ಸಿದ್ಧತೆ ಮಾಡಿಕೊಳ್ಳದೆ ಲಸಿಕೆ ವಿತರಣೆ'

ಸೋಂಕಿತರಾದವರು ಆರು ತಿಂಗಳು ಲಸಿಕೆ ಪಡೆದುಕೊಳ್ಳಬೇಕಿಲ್ಲ ಎಂದು ತಾಂತ್ರಿಕ ಸಮಿತಿಯೊಂದು ಹೇಳಿತ್ತು. ಸೂಕ್ತ ಸಿದ್ಧತೆ ಮಾಡಿಕೊಳ್ಳದೆಯೇ, ಅಧ್ಯಯನಗಳನ್ನು ಪರಿಗಣಿಸದೆಯೇ ಹಲವು ಸಮಯದಲ್ಲಿ ಗದ್ದಲ ಎಬ್ಬಿಸುವ ರೀತಿಯಲ್ಲಿ ಸರ್ಕಾರವು ಲಸಿಕೆ ವಿತರಣೆಗೆ ಮುಂದಾಯಿತು. ವಿಶ್ವ ಆರೋಗ್ಯ ಸಂಸ್ಥೆಯು 8ರಿಂದ 12 ವಾರಗಳ ಅಂತರದಲ್ಲಿ ಎರಡನೇ ಡೋಸ್ ನೀಡಿ ಎಂದು ಸೂಚಿಸಿತ್ತು. ಆದರೆ, ಕಂಪನಿಯ ಶಿಫಾರಸಿನ ಅನುಸಾರ 4 ವಾರಗಳ ಅಂತರದಲ್ಲಿ ನೀಡಬೇಕೆಂದು 2ನೇ ಡೋಸ್ ವಿತರಿಸಲಾಯಿತು. ಸೋಂಕಿತರಾಗಿ ಚೇತರಿಸಿಕೊಂಡವರಿಗೆ ಲಸಿಕೆ ಅಗತ್ಯವಿಲ್ಲ. ಅವರಲ್ಲಿ ಪ್ರತಿಕಾಯವು ವೃದ್ಧಿಯಾಗಿರುತ್ತದೆ. ಈಗಾಗಲೇ ಶೇ 50ರಿಂದ ಶೇ 60ರಷ್ಟು ಮಂದಿಗೆ ಸೋಂಕು ತಗುಲಿದೆ. 18 ವರ್ಷದೊಳಗಿನವರಿಗೆ ಲಸಿಕೆ ವಿತರಣೆ ನಡೆಯುತ್ತಿಲ್ಲ. ಹೀಗಾಗಿ, ಲಸಿಕೆ ಯಾರಿಗೆ ಅಗತ್ಯವಿದೆ ಅವರಿಗೆ ಮಾತ್ರ ವಿತರಿಸಿದಲ್ಲಿ ಬೇಡಿಕೆ ಕಡಿಮೆಯಾಗಲಿದೆ. ಲಸಿಕೆಗೆ ಸ್ಪಷ್ಟವಾದ ನೀತಿ ರಚಿಸಿಕೊಂಡು, ವಿತರಣೆಗೆ ಮುಂದಾಗಬೇಕಿತ್ತು.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯರು, ಮಂಗಳೂರು

'12 ವಾರಗಳ ಅಂತರ ಉತ್ತಮ'



ವೈಜ್ಞಾನಿಕ ಪುರಾವೆಗಳಿಲ್ಲದೆಯೇ ಅಂತರ ಹೆಚ್ಚಿಸಲು ಶಿಫಾರಸು ಮಾಡುವುದಿಲ್ಲ. ಬ್ರಿಟನ್‌ನಲ್ಲಿ ಲಸಿಕೆಯ ಪ್ರಯೋಗಕ್ಕೆ ಒಳಗಾದ 2 ಸಾವಿರ ಮಂದಿಗೆ ಮೊದಲ ಡೋಸ್ ಪಡೆದ ಬಳಿಕ ಎರಡನೇ ಡೋಸ್ ನೀಡುವುದು ವಿಳಂಬವಾಯಿತು. ನಾಲ್ಕು ವಾರಕ್ಕೆ ನೀಡಬೇಕಾದ ಎರಡನೇ ಡೋಸ್ ಅನ್ನು 20 ವಾರಗಳವರೆಗೂ ಒದಗಿಸಲಾಯಿತು. 12 ವಾರ ಹಾಗೂ ಅದಕ್ಕಿಂತ ಹೆಚ್ಚಿನ ಅಂತರದಲ್ಲಿ ಎರಡನೇ ಡೋಸ್ ಪಡೆದವರಲ್ಲಿ ಉತ್ತಮವಾದ ಫಲಿತಾಂಶ ಕಾಣಿಸಿಕೊಂಡಿತು. ಈಗ ಬ್ರಿಟನ್‌ನಲ್ಲಿ 12 ವಾರಗಳ ಅಂತರದಲ್ಲಿಯೇ ಎರಡನೇ ಡೋಸ್ ಒದಗಿಸಲಾಗುತ್ತಿದೆ. ಇದರಿಂದ ಮೊದಲ ಡೋಸ್ ಅನ್ನು ಹೆಚ್ಚಿನ ಮಂದಿಗೆ ಒದಗಿಸಲು ಸಾಧ್ಯ. ಮೊದಲ ಡೋಸ್‌ನಿಂದ ಅಭಿವೃದ್ಧಿಯಾಗುವ ಪ್ರತಿಕಾಯಗಳು ಕನಿಷ್ಠ ಮೂರು ತಿಂಗಳು ರಕ್ಷಣೆ ನೀಡಲಿವೆ ಎಂಬುದು ದೃಢಪಟ್ಟಿದೆ. ಲಸಿಕೆಯ ಕೊರತೆ ಕೂಡ ಈ ಶಿಫಾರಸಿಗೆ ಕಾರಣವಾಗಿರಬಹುದು.

ಡಾ. ಶ್ರೀಕಾಂತ್ ಹೆಗಡೆ, ವೈದ್ಯರು, ಶಿವಮೊಗ್ಗ

'28 ದಿನಗಳಿಗೆ ನೀಡಿದ್ದು ತಪ್ಪು'

ಯಾವುದೇ ಲಸಿಕೆಯ ಎರಡನೇ ಡೋಸ್ ವಿಳಂಬವಾದಲ್ಲಿ ಸಮಸ್ಯೆಯಾಗುವುದಿಲ್ಲ. ಅದೇ ರೀತಿ, 'ಕೋವಿಶೀಲ್ಡ್' ಲಸಿಕೆಯ ಎರಡನೇ ಡೋಸ್ ಅವಧಿಯನ್ನು 12ರಿಂದ 16 ವಾರಗಳಿಗೆ ವಿಸ್ತರಿಸಿದಲ್ಲಿ ಉತ್ತಮ ಫಲಿತಾಂಶವನ್ನೇ ಪಡೆಯಬಹುದಾಗಿದೆ. ಕೋವಿಡ್ ಲಸಿಕೆಯ ಕೊರತೆಯಿಂದ ಈ ರೀತಿ ಶಿಫಾರಸು ಮಾಡಲಾಗಿದೆ ಎಂಬ ಸಂದೇಹಗಳು ಜನಸಾಮಾನ್ಯರಲ್ಲಿ ಮೂಡಲಿದೆ. ವಾಸ್ತವದಲ್ಲಿ 12 ವಾರದ ಬಳಿಕ ಎರಡನೇ ಡೋಸ್ ನೀಡಿದಲ್ಲಿ ಅದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಈ ಮೊದಲು ಹುಮ್ಮಸ್ಸಿನಿಂದ 28 ದಿನಗಳ ಅಂತರದಲ್ಲಿ ಎರಡನೇ ಡೋಸ್ ಲಸಿಕೆ ನೀಡಲಾಯಿತು. ಇದು ತಪ್ಪಾದ ತೀರ್ಮಾನ. ಮೊದಲ ಡೋಸ್‌ನಿಂದ ಒಂದಷ್ಟು ಪ್ರತಿಕಾಯಗಳು ವೃದ್ಧಿಯಾಗುತ್ತದೆ. ಎರಡನೇ ಡೋಸ್ ಪಡೆದ ಬಳಿಕ ಅದು ಹೆಚ್ಚಲಿದೆ. ಲಸಿಕೆ ಕೊರತೆ ಕೂಡ ಅವಧಿ ವಿಸ್ತರಣೆಗೆ ಕಾರಣ.

ಡಾ.ವೈ.ಸಿ. ಯೋಗಾನಂದ ರೆಡ್ಡಿ, ವೈದ್ಯರು, ಬಳ್ಳಾರಿ

ಗ್ರಾ.ಪಂ.ಸದಸ್ಯ ಸಜೀವ ದಹನ

ಕಾಗವಾಡ (ಬೆಳಗಾವಿ ಜಿಲ್ಲೆ): ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಮನೆಗೆ ಬೆಂಕಿ ತಗುಲಿ ಶಿರಗುಪ್ಪಿ ಗ್ರಾಮ ಪಂಚಾಯಿತಿ ಸದಸ್ಯ ಸೋಮೇಶ ಶಿವಾನಂದ ಪಾಟೀಲ (27) ಸಜೀವ ದಹನರಾದ ಘಟನೆ ಬುಧವಾರ ತಡರಾತ್ರಿ ಸಂಭವಿಸಿದೆ.

ಕಾಗವಾಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ 4ನೇ ವಾರ್ಡ್‌ನಿಂದ ಚುನಾಯಿತರಾಗಿದ್ದರು.

ನಿಧನ ವಾರ್ತೆ

ಪಿ.ಸುರೇಶ್

ಚಾಮರಾಜನಗರ: ಜಿಲ್ಲೆಯ ಬಂಡೀಪುರದಲ್ಲಿರುವ 'ನಮ್ಮ ಸಂಘ' ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ಪಿ.ಸುರೇಶ್ (45) ಅವರು ಮೈಸೂರಿನ ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ಗುರುವಾರ ನಿಧನರಾದರು. ಇವರಿಗೆ ಪತ್ನಿ, ಪುತ್ರ ಇದ್ದಾರೆ.

'ಗ್ರೀನ್ ಆಸ್ಕರ್' ಪ್ರಶಸ್ತಿ ಪುರಸ್ಕೃತ ಕೃಪಾಕರ ಸೇನಾನಿ ಅವರು ಕಾಡಿನ ಸಂರಕ್ಷಣೆಗಾಗಿ ಬಂಡೀಪುರದಲ್ಲಿ ಸ್ಥಾಪಿಸಿರುವ 'ನಮ್ಮ ಸಂಘ'ದಲ್ಲಿ 17 ವರ್ಷ ಕೆಲಸ ಮಾಡಿದ್ದರು. ಕಾಡಂಚಿನ 200 ಹಳ್ಳಿಗಳ 40 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಅಡುಗೆ ಅನಿಲ ಸಂಪರ್ಕ ಒದಗಿಸಲು ಶ್ರಮಿಸಿದ್ದರು. ಈ ಸಾಧನೆಗಾಗಿ 'ಏಷ್ಯಾ ಸ್ಯಾಂಚುರಿ' ನೀಡುವ ಪರಿಸರ ಸಂರಕ್ಷಣಾ ಪ್ರಶಸ್ತಿಗೆ ಭಾಜನರಾಗಿದ್ದರು. ಹಿಂದೆ, ಕೇಂದ್ರದಲ್ಲಿ ಪರಿಸರ ಮತ್ತು ಅರಣ್ಯ ಖಾತೆ ಸಚಿವರಾಗಿದ್ದ ಜೈರಾಮ್ ರಮೇಶ್ ಅವರ ಮೆಚ್ಚುಗೆಗೂ ಪಾತ್ರರಾಗಿದ್ದ ಸುರೇಶ್, ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಂಸ್ಥೆಯ ಮೂಲಕ ನೆರವಾಗಿದ್ದರು.

ಅಂತ್ಯಕ್ರಿಯೆಯು, ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಾಮನಹಳ್ಳಿಯಲ್ಲಿ ಗುರುವಾರ ನಡೆಯಿತು.

ಶಿಲ್ಪ ಕಲಾವಿದೆ ಕನಕಾ ಮೂರ್ತಿ

ಬೆಂಗಳೂರು: ನಾಡಿನ ಖ್ಯಾತ ಶಿಲ್ಪ ಕಲಾವಿದರಲ್ಲಿ ಒಬ್ಬರಾದ ಕನಕಾ ಮೂರ್ತಿ (79) ಗುರುವಾರ ಬೆಳಿಗ್ಗೆ ನಿಧನರಾದರು.

ಕೋವಿಡ್ ದೃಢಪಟ್ಟಿದ್ದು, ಕಳೆದ ಬುಧವಾರ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಅವರಿಗೆ ಪತಿ, ಪುತ್ರಿ ಇದ್ದಾರೆ. ಗುರುವಾರ ಅಂತ್ಯಕ್ರಿಯೆ ನಡೆಯಿತು.

1942ರಲ್ಲಿ ಗದಗದಲ್ಲಿ ಜನಿಸಿದ್ದ ಅವರು, ಶಿಲ್ಪಿ ವಾದಿರಾಜ್ ಅವರ ಬಳಿ ಶಿಲ್ಪ ಕಲಾ ಅಭ್ಯಾಸ ಮಾಡಿದ್ದರು. ಬೆಂಗಳೂರಿನ ಲಾಲ್‌ಬಾಗ್ ನಲ್ಲಿರುವ ಕುವೆಂಪು ಕಂಚಿನ ಪ್ರತಿಮೆ, ಸತ್ಯಸಾಯಿ ಆಸ್ಪತ್ರೆಯಲ್ಲಿನ ನಾಲ್ಕು ಅಡಿ ಎತ್ತರದ ಹೊಯ್ಸಳ ಶೈಲಿಯ ವಿಷ್ಣು ಪ್ರತಿಮೆ ಮತ್ತು ಮೈಸೂರಿನ ಎಂಜಿನಿಯರುಗಳ ಸಂಸ್ಥೆಯಲ್ಲಿರುವ ಸರ್.ಎಂ. ವಿಶ್ವೇಶ್ವರಯ್ಯ ಅವರ ಕಂಚಿನ ಪ್ರತಿಮೆಯನ್ನು ನಿರ್ಮಿಸಿದ್ದಾರೆ.

ದೇಶದ ವಿವಿಧ ದೇವಾಲಯಗಳಲ್ಲಿ ಇವರು ತಯಾರಿಸಿದ 200ಕ್ಕೂ ಅಧಿಕ ಶಿಲ್ಪಗಳಿವೆ. ಕಲ್ಲು, ಮರ ಮತ್ತು ಫೈಬರ್‌ನಲ್ಲಿ ಕಲಾಕೃತಿಗಳನ್ನು ತಯಾರಿಸಿದ ಅವರು, ಸಾಹಿತ್ಯ ಕೃತಿಗಳನ್ನು ಕೂಡ ರಚಿಸಿದ್ದಾರೆ. ರಾಜ್ಯೋತ್ಸವ, ಜಕಣಾಚಾರಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು.

ಮಾಜಿ ಶಾಸಕ ಆರ್.ಆರ್. ಕಲ್ಲೂರ

ವಿಜಯಪುರ: ಮಾಜಿ ಶಾಸಕ, ಕಾಂಗ್ರೆಸ್‌ನ ಹಿರಿಯ ಮುಖಂಡ ಆರ್.ಆರ್. ಕಲ್ಲೂರ (92) ಗುರುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ದತ್ತು ಪುತ್ರರು ಇದ್ದಾರೆ. ಇಲ್ಲಿನ ಇಂಡಿ ರಸ್ತೆಯಲ್ಲಿರುವ ಅವರದೇ ಆದ ಬಿ.ಇಡಿ ಮಹಾವಿದ್ಯಾಲಯದ ಆವರಣದಲ್ಲಿ ಅಂತ್ಯಕ್ರಿಯೆ ನಡೆಯಿತು.

ಇಂಡಿ ತಾಲ್ಲೂಕಿನ ಹಿರೇಮಸಳಿ ಗ್ರಾಮದವರಾಗಿದ್ದ ಇವರು 1978, 1983 ಮತ್ತು 1989ರಲ್ಲಿ ಇಂಡಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

1983ರಲ್ಲಿ ಬರಗಾಲ ಬಿದ್ದಾಗ ಕ್ಷೇತ್ರದ ರೈತರ ಬಾವಿಗಳಿಗೆ ಉಚಿತ ವಿದ್ಯುತ್ ಮತ್ತು ಪಂಪ್‌ಸೆಟ್ ನೀಡಲು ಆಗಿನ ಮುಖ್ಯಮಂತ್ರಿ ಗುಂಡೂರಾವ್ ಅವರನ್ನು ಆಗ್ರಹಿಸಿ, ಹೆಚ್ಚು ರೈತರಿಗೆ ಮಂಜೂರು ಮಾಡಿಸಿಕೊಟ್ಟಿದ್ದರು. ಹೀಗಾಗಿ ಇಂದಿಗೂ ರಾಜ್ಯದಲ್ಲಿಯೇ ಅತೀ ಹೆಚ್ಚು ತೆರೆದ ಬಾವಿಗಳಿರುವ ಕ್ಷೇತ್ರ ಎಂದರೆ ಅದು ಇಂಡಿ ತಾಲ್ಲೂಕಾಗಿದೆ.

ಶಾಸಕರಾಗಿದ್ದ ಅವಧಿಯಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರನ್ನು ಇಂಡಿ ಪಟ್ಟಣಕ್ಕೆ ಕರೆಯಿಸಿ, ಬೆಳ್ಳಿ ಪಂಪ್ ಸೆಟ್ ನೀಡಿ ಗೌರವಿಸಿದ್ದರು. ಇಂಡಿಗೆ ಭೀಮಾ ನದಿಯಿಂದ ಕುಡಿಯುವ ನೀರು ತರುವ ಯೋಜನೆ ರೂವಾರಿ ಆಗಿದ್ದರು. ಕರ್ನಾಟಕ ಭೂಸೇನಾ ನಿಗಮದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಪತ್ರಕರ್ತ ಜಯತೀರ್ಥ ಕಾಗಲಕರ್

ಕಲಬುರ್ಗಿ: ಪತ್ರಕರ್ತ ಜಯತೀರ್ಥ ಕಾಗಲಕರ್ (53) ಕೋವಿಡ್‌ನಿಂದ ನಗರದ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಅವರು, ಸಂಯುಕ್ತ ಕರ್ನಾಟಕ ಪತ್ರಿಕೆಯ ಕಲಬುರ್ಗಿ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿದ್ದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ–586201.
ತಾ॥ ಬ.ಬಾಗೇವಾಡಿ, ಜಿ॥ ವಿಜಯಪೂರ.

ಸಂಖ್ಯೆ:ಕೃ.ಭಾ.ನಿ.ನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ್/ವಿಶೇಷ ದುರಸ್ತಿ/2021–22/181 ದಿನಾಂಕ:10.05.2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಎ ಎಲ್ ಬಿ ಸಿ ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಜಿಲ್ಲೆ: ವಿಜಯಪೂರ ಇವರು ಈ ಕೆಳಗಿನ **ವಿಶೇಷ ದುರಸ್ತಿ ಕಾಮಗಾರಿಗಳಿಗಾಗಿ ನೊಂದಾಯಿತ ಕೆ.ಪಿ.ಡಬ್ಲ್ಯೂಡಿ ತೃತೀಯ ದರ್ಜೆ & ಮೇಲ್ಪಟ್ಟು ಗುತ್ತಿಗೆದಾರರು** ಇವರಿಂದ ಟೆಂಡರನ್ನು ಅಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮರನ್ವಯ ಗುತ್ತಿಗೆದಾರರು ಅಗತ್ಯ ಇ.ಎಂ.ಡಿ ತೇವಣಿ ಮೊತ್ತವನ್ನು ಇ–ಕ್ಯಾಶನಲ್ಲಿ ಪಡೆದು **ಏಕಮಾತ್ರ ಲಕೋಟಿಯಲ್ಲಿ** ಟೆಂಡರನ್ನು ಸಲ್ಲಿಸುವದು. ಒಟ್ಟು ಕಾಮಗಾರಿಗಳ **ಸಂಖ್ಯೆ: 12** ಮತ್ತು ಕಾಮಗಾರಿಗಳಿಗೆ ಇಟ್ಟಿರುವ **ಒಟ್ಟು ಮೊತ್ತ ರೂ. 113.75 ಲಕ್ಷಗಳು.**

ಟೆಂಡರನ ವಿವಿಧ ಹಂತಗಳನ್ನು 1) ಟೆಂಡರ ಡಾಕುಮೆಂಟ್‌ನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: **12.05.2021 ರಿಂದ 20.05.2021 ಸಾಯಂಕಾಲ 5.00 ಘಂಟೆಯವರೆಗೆ.** 2) ಟೆಂಡರ್‌ನ್ನು (ಏಕಮಾತ್ರ ಲಕೋಟೆ) ತೆರೆಯುವ **ದಿನಾಂಕ; 22.05.2021 ಬೆಳಿಗ್ಗೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka.gov.in/eportal/ines.seam and www.kbjnl.karnataka.gov.in ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ವಾಸಾಸಂಇ/ವಿಜಯಪುರ/66/ಎಂಸಿಎ/2021–22

ಮಹಾನಗರ ಪಾಲಿಕೆ, ಬೆಳಗಾವಿ

ಸಂಖ್ಯೆ: ಸಿಸಿಬಿ/ಲೋವಿ/ಕಾಲಿ/ಡಿಎಮ್/ಟಿಎನ್‌ಡಿ/ಇಪ್ರೋ–01/2021–22 ದಿನಾಂಕ : 12–05–2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಬೆಳಗಾವಿ ಮಹಾನಗರ ಪಾಲಿಕೆಗೆ ಬಿಡುಗಡೆಯಾದ 15ನೇ ಹಣಕಾಸಿನ ಸಾಮಾನ್ಯ ಮೂಲ ಅನುದಾನ ಹಾಗೂ ಎಸ್.ಎಫ್.ಸಿ. 2017–18 (ಉಳಿತಾಯ ಮೊತ್ತ) ಅನುದಾನದಡಿ 05 ಕಾಮಗಾರಿಗಳ ಕುರಿತು ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಕೆ.ಪಿ.ಡಬ್ಲೂಡಿ/ಜಿಲ್ಲಾ ಪಂಚಾಯತ/ಸಿಪಿ ಡಬ್ಲ್ಯೂಡಿ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್‌ಮೂಲಕ ವೆಬ್‌ಸೈಟ್ https://www.eproc.karnataka.gov.in ನಲ್ಲಿ ವೇಳೆ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ.

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ

DIPO/RO No. 82/2021-22

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ: ಕಾಇಂ:ಗ್ರಾಕುನೀ&ನೈವಿ:ದಾ:/ಸ.ಇ೦2/.ವಾರ್ಷಿಕ ನಿರ್ವಹಣೆ/ಟೆಂಡರ್::2021–22/154 ದಿನಾಂಕ: 07.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2021–22 ನೇ ಸಾಲಿನಲ್ಲಿ ಬಹುಗ್ರಾಮ ವಾರ್ಷಿಕ ನಿರ್ವಹಣೆ ಯೋಜನೆಯಡಿ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿಗೆ ಅನುಮೋದನೆಯಾದ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕಿನ ಮಾಳಗೊಂಡನಹಳ್ಳಿ ಮತ್ತು ಇತರೆ 12/15 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಾರ್ಷಿಕ ನಿರ್ವಹಣೆ (5 ವರ್ಷಗಳು) ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು, ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 05.06.2021 ರ ಸಂಜೆ 5.00ರ ವರೆಗೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

ವಾಸಾಇ/ಡಿವಿಜಿ/89/ಎಂಸಿಎ/2021–22

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ–03/2021.22 ದಿನಾಂಕ: 12.05.2021 (ದ್ವಿ–ಲಕೋಟೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ಈ ಕೆಳಗೆ ನಮೂದಿಸಿದ ಇಂಡೆಂಟ್ ನಂಬರ್‌ನ 02 ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಕರ್ನಾಟಕ ಲೋಕೋಪಯೋಗಿ/ ಕೇಂದ್ರ ಲೋಕೋಪಯೋಗಿ/ಜಲ ಸಂಪನ್ಮೂಲ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಒಂದನೇ ದರ್ಜೆಯಲ್ಲಿ ಹಾಗೂ ಕಾವೇರಿ ನೀರಾವರಿ ನಿಗಮದಲ್ಲಿ ಒಂದನೇ 'ಬಿ' ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ, ದ್ವಿ–ಲಕೋಟೆ ಪದ್ಧತಿಯಲ್ಲಿ **KW-3** ನಬಂಧನೆಗಳೊಂದಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ. 1.ಇಂಡೆಂಟ್ ಸಂ: **35432**:- ಟೆಂಡರ್ ಮೊತ್ತ- **84.28** ಲಕ್ಷಗಳು, ಇ.ಎಂ.ಡಿ ಮೊತ್ತ – **168600/-**, ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿ– **45** ದಿನಗಳು (ಮಳೆಗಾಲ ಸೇರಿ) 2.ಇಂಡೆಂಟ್ ಸಂ: **35433**:- ಟೆಂಡರ್ ಮೊತ್ತ- **87.27** ಲಕ್ಷಗಳು, ಇ.ಎಂ.ಡಿ ಮೊತ್ತ – **174600/-**, ಕಾಮಗಾರಿ ಪೂರ್ಣಗೊಳಿಸಲು ನಗಧಿಪಡಿಸಿರುವ ಕಾಲಾವಧಿ– **45** ದಿನಗಳು (ಮಳೆಗಾಲ ಸೇರಿ) ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:– 18.05.2021 ರಿಂದ 25.05.2021 ಸಂಜೆ 4.00 ಗಂಟೆ ರವರೆಗೆ ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 21.05.2021 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:– 26.05.2021 ಸಂಜೆ 5.00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ:– 03.06.2021 ಸಂಜೆ 5.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ) ಕಾಮಗಾರಿ ವಿವರ, ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ **https://eproc.karnataka.gov.in/eprocportal/pages/index.jsp** ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

ವಾಸಾಸಂಇ/ಹಿಸನಿ/ತುಮಕೂರು/ಎಂಸಿಎ/50/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)

ಪಿ.ಹೆಚ್.ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರು, ಕೆ.ಆರ್.ಸರ್ಕಲ್, ಶೇಷಾದ್ರಿರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: +91–80–29619801 ಮಿಂಚ್ ಅಂಚೆ: md.ksmscl@gmail.com,

No. HFW/KSMSCL/Covid/INJ. Vaccine/INT/26/2021-22 Date: 13-05-2021

ದರಪಟ್ಟಿ ಪ್ರಕಟಣೆ

ಉಲ್ಲೇಖ: (1) ಅಲ್ಪಾವಧಿ ಗ್ಲೋಬಲ್ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/Covid/INJ.Vaccine/INT /26/2021-22, Dated:13.05.2021 (2) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/Covid/IFQ/INJ.Enoxaparin/27/2021-22, Dated:13.05.2021. (3) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/Eqpt/Covid-19/RTPCR Consu/27/2021-22, Dated:13.05.2021. (4) ದರಪಟ್ಟಿ ಅಧಿಸೂಚನೆ ಸಂಖ್ಯೆ: HFW/KSMSCL/Eqpt/Covid-19/RAT/28/ 2021-22, Dated:13.05.2021.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ 4(ಎ) ಅಡಿಯಲ್ಲಿ ಈ ಕೆಳಕಂಡ ಔಷಧಿಯನ್ನು ಖರೀದಿಸಿ ಪೂರೈಸಲು ದರಪಟ್ಟಿಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

(1) Short Term Global Tender for supply of Vaccine for Covid-19. (2) Quotation for supply of Enoxaparin Sodium Injection 40mg/0.4ml, Ampoule with Syringe, combipack. (3) Quotation for Supply of RTPCR Consumables (4) Quotation for Supply of RAT

ಕೆ.ಎಸ್.ಎಂ.ಎಸ್.ಸಿ.ಎಲ್ ವೆಬ್‌ಸೈಟ್ ಮುಖಾಂತರ: http://www.kdlws.kar.nic.in/ ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ದಿನಾಂಕ:14.05.2021 ರಿಂದ 24.05.2021, ದಿನಾಂಕ:14.05.2021 ರಿಂದ 17.05.2021 ಮತ್ತು ದಿನಾಂಕ: 14.05.2021 ರಿಂದ 18.05.2021 ರ ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ಆನ್‌ಲೈನ್ ಮೂಲಕ ದರಪಟ್ಟಿಯನ್ನು Password Protected PDF ನಲ್ಲಿ ಇ–ಮೇಲ್ ಐಡಿ: ksdlwscovid-19.procurement@gmail.com ಗೆ ದಿನಾಂಕ: 14.05.2021 ರಿಂದ 24.05.2021ರ ಸಂಜೆ 5.30, ದಿನಾಂಕ:14.05.2021 ರಿಂದ 17.05.2021 ಸಂಜೆ 5.00 ಮತ್ತು ದಿನಾಂಕ: 14.05.2021 ರಿಂದ 18.05.2021 ಸಂಜೆ 5.00 ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು.
ಕೆ.ಎಸ್.ಎಮ್.ಎಸ್.ಸಿ.ಎಲ್.

DIPR/DDU/Zen/RO-364/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ

ಎಸ್.ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010

ಸಂಖ್ಯೆ:ಗ್ರೂಪ್–ಡಿ/24/2020–21 ದಿನಾಂಕ:12.05.2021

ಟೆಂಡರ್ ಪ್ರಕಟಣೆ

ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳ ಎದುರಾಗಿ ಒಂದು ವರ್ಷದ ಅವಧಿಗೆ ಬಾಹ್ಯ ಗುತ್ತಿಗೆ ಟೆಂಡರ್ ಆಧಾರದ ಮೇಲೆ ಸೇವೆ/ಸ್ವಚ್ಛತಾ ಪರಿಕರಗಳನ್ನು ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. (1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: **ಗ್ರೂಪ್ ಡಿ/24/2020–21 ದಿನಾಂಕ:12.05.2021** (2) ವಿವರಗಳು: **ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಬಾಹ್ಯ ಗುತ್ತಿಗೆ ಮೇರೆಗೆ ನೇಮಕಾತಿ ಮಾಡಲು ಟೆಂಡರ್.** (3) ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್: **www.eproc.karnataka.gov.in** (4) ಟೆಂಡರಿನ ಅಂದಾಜು ಮೊತ್ತ: **ರೂ.5,73,05,029/–** (5) ಪ್ರಿ–ಬಿಡ್ **ಮೀಟಿಂಗ್: 25.05.2021 ಬೆಳಿಗ್ಗೆ 11.30 ಗಂಟೆಗೆ** (6) ಟೆಂಡರ್‌ಗಳನ್ನು e-Procurement portal system ಮುಖಾಂತರ ಸಲ್ಲಿಸಲು ಅಂತಿಮ **ದಿನಾಂಕ: 15.06.2021 ಸಂಜೆ 4.30 ಗಂಟೆ ಒಳಗೆ.** (7) e-Procurement portal system ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 17.06.2021, ಬೆಳಿಗ್ಗೆ 11.30 ಗಂಟೆಗೆ.**

ಸಹಿ/– ನಿರ್ದೇಶಕರು, ಕಾ.ರಾ.ವಿ.ಯೋ.ವೈ. ಸೇವೆ

ವಾಸಾಸಂಇ/ಉನಿ.ನ/351/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಕನಕನಪಾಳ್ಯ, ಬೆಂಗಳೂರು–560 011

ಸಂಖ್ಯೆ: ಕಾಪಾಅ/ಚಿಪೇ/ಇ–ಪ್ರೊಕ್/03/2021–22 ದಿನಾಂಕ: 12.05.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಏಕಲಕೋಟೆ & ದ್ವಿಲಕೋಟೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–1,2,3 & 4)**

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
1	**ವಾರ್ಡ್ ಸಂಖ್ಯೆ–153,** ಜಯನಗರ ಬಿಟಿಬಿ ಪ್ರದೇಶದಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಮತ್ತು ಕೆಹೆಚ್‌ಬಿ ಕಾಲೋನಿ ಹತ್ತಿರ ಸುತ್ತಮುತ್ತಲ ರಸ್ತೆಗಳಿಗೆ ಸುಧಾರಣೆಗಳನ್ನು ಮಾಡುವುದು.	99.00
2	**ವಾರ್ಡ್ ಸಂಖ್ಯೆ–153,** ಜಯನಗರದ ಬಿಟಿಬಿ ಪ್ರದೇಶ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸುತ್ತ ಸುಂದರೀಕರಣ ಮತ್ತು ಇತರೆ ಸುಧಾರಣೆ ಕಾಮಗಾರಿಗಳನ್ನು ಮಾಡುವುದು.	99.00
3	**ವಾರ್ಡ್ ಸಂಖ್ಯೆ–143,** ವಿಶ್ವೇಶ್ವರಪುರಂನಲ್ಲಿ ನೈರ್ಮಲ್ಯ ಮತ್ತು ಕುಡಿಯುವ ನೀರಿನ ಕೊಳವೆಗಳನ್ನು ಬದಲಾಯಿಸುವುದು ಹಾಗೂ ಮೇಲ್ಕಂಡ ಕಾಮಗಾರಿಯ ತದನಂತರ ರಸ್ತೆಗಳಿಗೆ ಕಾಂಕ್ರೀಟ್ ಒದಗಿಸುವುದು.	99.90
4	**ವಾರ್ಡ್ ಸಂಖ್ಯೆ–119**ರಲ್ಲಿ ಹೂಳು ತೆಗೆಯಲು ಟ್ರ್ಯಾಕ್ಟರ್ ನಿಯೋಜಿಸುವುದು. (4ನೇ ಕರೆ) ಸಾಮಾನ್ಯರಿಗೆ.	12.00
5	**ವಾರ್ಡ್ ಸಂಖ್ಯೆ–118**ರಲ್ಲಿ ಹೂಳು ತೆಗೆಯಲು ಟ್ರ್ಯಾಕ್ಟರ್ ನಿಯೋಜಿಸುವುದು. (2ನೇ ಕರೆ) (ಪರಿಶಿಷ್ಟ ಪಂಗಡಕ್ಕೆ ಮಾತ್ರ)	12.00
6	**ವಾರ್ಡ್ ಸಂಖ್ಯೆ–153** ಜಯನಗರದಲ್ಲಿ ಕೊಳವೆಬಾವಿ ನಿರ್ವಹಣೆ ಮತ್ತು ನೀರಿನ ಕೊಳವೆ ಮಾರ್ಗಗಳನ್ನು ಒದಗಿಸುವುದು. (ಪರಿಶಿಷ್ಟ ಪಂಗಡಕ್ಕೆ ಮಾತ್ರ)	10.00
7	**ವಾರ್ಡ್ ಸಂಖ್ಯೆ–143**ರ ಗ್ರಾಮದೇವತೆ ಬೀದಿ ಉಪ್ಪಾರಹಳ್ಳಿ ಬೃ.ಬೆಂ.ಮ.ಪಾಲಿಕೆ ಸ್ವತ್ತಿನಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವುದು. (ಪರಿಶಿಷ್ಟ ಜಾತಿಗೆ ಮಾತ್ರ) 2ನೇ ಕರೆ.	50.00
ಇಎಂಡಿ (₹. ಗಳಲ್ಲಿ)	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಇ 675, ವೆಚ್ಚ–12/2020, ಬೆಂಗಳೂರು ಇದರಂತೆ ದಿನಾಂಕ: 22–12–2020 ರಿಂದ 31–12–2021 ರವರೆಗೆ ಮಾತ್ರ ಇಎಂಡಿಗೆ ವಿನಾಯಿತಿ ನೀಡಲಾಗಿದೆ.	

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **31.05.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **26.05.2021**ರ ಮಧ್ಯಾಹ್ನ **3:00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ (ಚಿಕ್ಕಪೇಟೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕನಕನಪಾಳ್ಯ, 8ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560 011 ಇಲ್ಲಿ ನಡೆಸಲಾಗುವುದು. (3) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **31.05.2021**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್ ಟೆಂಡರ್‌ಗಳ ತೆರೆಯುವ ದಿನಾಂಕ: **01.06.2021**ರ ಸಂಜೆ **4:30** ಗಂಟೆಗೆ. (5) ಆರ್ಥಿಕ ಬಿಡ್ ಟೆಂಡರ್‌ಗಳ ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ

ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009
ವೆಬ್‌ಸೈಟ್: https://www.khb.karnataka.gov.in/

ಸಂ.: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/2021–2022 ದಿನಾಂಕ: 13–05–2021

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ರಾಜ್ಯಾದ್ಯಂತ ಲಭ್ಯವಿರುವ ಮೂಲೆ/ವಾಣಿಜ್ಯ ನಿವೇಶನಗಳ ಇ–ಹರಾಜು, ಬೆಂಗಳೂರು ನಗರ, ಚಂದಾಪುರ–ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಸೂರ್ಯ ಎಲಿಗೆನ್ಸ್ ಫ್ಲಾಟ್‌ಗಳು ಹಾಗೂ ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ಹಂಚಿಕೆಗೆ ಈಗಾಗಲೇ ಅರ್ಜಿಗಳನ್ನು ಸಾರ್ವಜನಿಕರಿಂದ ಆಹ್ವಾನಿಸಲಾಗಿರುತ್ತದೆ. ಕೋವಿಡ್–19 ಪರಿಣಾಮದಿಂದಾಗಿ ಕರ್ನಾಟಕ ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆಯಾಗಿರುವುದರಿಂದ ಮಂಡಳಿಯ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಈ ಕೆಳಕಂಡಂತೆ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ.

ಕ್ರ. ಸಂ.	ವಿಷಯ	ಈ ಹಿಂದೆ ನಿಗದಿಪಡಿಸಿರುವ ಕೊನೆಯ ದಿನಾಂಕ	ವಿಸ್ತರಿಸಿದ ಕೊನೆಯ ದಿನಾಂಕ
1	ರಾಜ್ಯಾದ್ಯಂತ ಲಭ್ಯವಿರುವ ಮೂಲೆ/ ವಾಣಿಜ್ಯ ನಿವೇಶನಗಳ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ	17.05.2021 ಸಂಜೆ 3.00 ಗಂಟೆ	19.06.2021 ಸಂಜೆ 3.00 ಗಂಟೆ
	ಇ–ಹರಾಜು ಮುಕ್ತಾಯಗೊಳಿಸುವ ದಿನಾಂಕ ಕ್ರಮ ಸಂಖ್ಯೆ 1 ರಿಂದ 70 ರವರೆಗೆ	19.05.2021 ಸಂಜೆ 3.00 ಗಂಟೆ	21.06.2021 ಸಂಜೆ 3.00 ಗಂಟೆ
	ಇ–ಹರಾಜು ಮುಕ್ತಾಯಗೊಳಿಸುವ ದಿನಾಂಕ ಕ್ರಮ ಸಂಖ್ಯೆ 71 ರಿಂದ 195 ರವರೆಗೆ	20.05.2021 ಸಂಜೆ 3.00 ಗಂಟೆ	22.06.2021 ಸಂಜೆ 3.00 ಗಂಟೆ
	ಇ–ಹರಾಜು ಮುಕ್ತಾಯಗೊಳಿಸುವ ದಿನಾಂಕ ಕ್ರಮ ಸಂಖ್ಯೆ 196 ರಿಂದ 278 ರವರೆಗೆ	21.05.2021 ಸಂಜೆ 3.00 ಗಂಟೆ	23.06.2021 ಸಂಜೆ 3.00 ಗಂಟೆ
2	ಬೆಂಗಳೂರು ನಗರ, ಚಂದಾಪುರ–ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಸೂರ್ಯ ಎಲಿಗೆನ್ಸ್ ಫ್ಲಾಟ್‌ಗಳು	25.05.2021	25.06.2021
3	ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ ಬಡಾವಣೆಯಲ್ಲಿ ನಿವೇಶನಗಳು	13.05.2021	14.06.2021

ಉಳಿದಂತೆ ಈ ಹಿಂದೆ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿರುವ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಮಂಡಳಿಯ ವೆಬ್‌ಸೈಟ್ : https://www.khb.karnataka.gov.in ಅನ್ನು ಸಂಪರ್ಕಿಸುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾಸೇ)
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/DDU/YC/366/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ,ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2020–21/509 ದಿನಾಂಕ: 11/05/2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ 05 ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 137428, 137429, 137430, 137431, 137432, 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಟ 76.45 ಲಕ್ಷಗಳು ಗರಿಷ್ಠ 317.32 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಪ್ರೀ ಬಿಡ್ ಸಭೆ ದಿನಾಂಕ : 20.05.2021 (11.00 ಗಂಟೆ), 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 21.05.2021 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 24.05.2021 (16.00 ಗಂಟೆ), 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25.05.2021 (16.30 ಗಂಟೆ), 8)ಆರ್ಥಿಕ ಬಿಡ್ ತೆರೆಯುವ ದಿನಾಂಕ : 28.05.2021 (11.30 ಗಂಟೆ), 9) ಇ–ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ : 19.05.2021 ರಿಂದ, 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ : **WWW.e-proc.Karnataka.gov.in**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/162/ಎಂ.ಸಿ&ಎ/2021–22

ಮಹಾನಗರ ಪಾಲಿಕೆ, ಕಲಬುರಗಿ

ದೂರವಾಣಿ : 08472/ 278675 ಫ್ಯಾಕ್ಸ : 08472 / 260776
ಇ ಮೇಲ್ : itstaff_ulb_gulbarga@yahoo.com

No: KMP/EE/ELE/CCMS/139/2020-21/376 DATE: 11.05.2021

:: ತಿದ್ದುಪಡಿ ::

ವಿಷಯ: ಇ–ಪ್ರೊಕ್ಯುರಮೆಂಟ್ ಟೆಂಡರ್ ಪ್ರಕಟಣೆ ತಿದ್ದುಪಡಿ ಕುರಿತು.
ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ:KMP/EE/ELE/CCMS/139/2020-21 ದಿನಾಂಕ:01.04.2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ ಕಲಬುರಗಿ ಮಹಾನಗರ ಪಾಲಿಕೆಯ SFC Special Fund ಯೋಜನೆಯಲ್ಲಿ ಮಂಜೂರಾದ ಕಾಮಗಾರಿಯ ಇಂಡೆಂಟ್ ನಂ:KMP/EE/ELE/CCMS/139/2020-21 ಟೆಂಡರ್ ಪ್ರಕಟಣೆ ಪ್ರಕಟಿಸಲು ದಿನಾಂಕ: 01.04.2021 ರಂದು ನೀಡಲಾಗಿತ್ತು. ಆದರೆ ಕೋವಿಡ್–19 ಲಾಕಡೌನ್ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್‌ನ ದಿನಾಂಕಗಳನ್ನು ಮೂಂದುಡಿಸಿ ಹೊಸ ದಿನಾಂಕಗಳನ್ನು ಪ್ರಕಟಿಸಲು ಸೂಚಿಸಲಾಗಿದೆ. ಅದರಂತೆ ಹೊಸ ದಿನಾಂಕಗಳು ಕೆಳಗಿನಂತಿವೆ;

ಕ್ರ.ಸಂ.	ಪ್ರಕಟಿಸಲಾದ ದಿನಾಂಕ	ತಿದ್ದುಪಡಿ ದಿನಾಂಕ
1.	ಮೊದಲು ಪ್ರಕಟಿಸಲಾದ ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 18.05.2021 ಸಾಯಂಕಾಲ 5:00 ಗಂಟೆಯವರೆಗೆ	ಬದಲಾದ ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ: 04.06.2021 ಸಾಯಂಕಾಲ 5:00 ಗಂಟೆಯವರೆಗೆ
2.	ಮೊದಲು ಪ್ರಕಟಿಸಲಾದ ತಾಂತ್ರಿಕ ಟೆಂಡರ ತೆರೆಯುವ ದಿನಾಂಕ 20.05.2021 ಸಾಯಂಕಾಲ 4:30 ಗಂಟೆಗೆ	ಬದಲಾದ ತಾಂತ್ರಿಕ ಟೆಂಡರ ತೆರೆಯುವ ದಿನಾಂಕ 07.06.2021 ಸಾಯಂಕಾಲ 4:30 ಗಂಟೆಗೆ
3.	ಮೊದಲು ಪ್ರಕಟಿಸಲಾದ ಆರ್ಥಿಕ ಟೆಂಡರ ತೆರೆಯುವ ದಿನಾಂಕ 01.06.2021 ಬೆಳಗ್ಗೆ 11:00 ಗಂಟೆಗೆ	ಬದಲಾದ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ 14.06.2021 ಬೆಳಗ್ಗೆ 11:00 ಗಂಟೆಗೆ

ಸಹಿ/– ಆಯುಕ್ತರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/157/ಎಂ.ಸಿ&ಎ/2021–22

ವೈಷ್ಣವಿ ಗೌಡ

ನಿಯಮ ಪಾಲಿಸಿದರೆ 'ಕಪ್ ನಮ್ದೇ'!

ಚುಟು–ಚುಟು ಜೋಡಿ 'ಅವತಾರ ಪುರುಷ'ದಲ್ಲಿ ಮತ್ತೆ ಒಂದಾಗಿದ್ದು, ನಗುವಿನ ಲಸಿಕೆಯ ಸ್ಯಾಂಪಲ್ ಅನ್ನು ನಟ ಶರಣ್ ಟೀಸರ್‌ನಲ್ಲೇ ನೀಡಿದ್ದಾರೆ. 'ಗುರುಶಿಷ್ಯರು' ಚಿತ್ರದಲ್ಲಿ ಎರಡನೇ ಹಂತದ ಮನರಂಜನೆಯ ಡೋಸ್ ನೀಡಲು ಸಜ್ಜಾಗಿರುವ ಶರಣ್, ತಮ್ಮದೇ ಮಾತಿನ ಶೈಲಿಯಲ್ಲಿ ಕೋವಿಡ್, ಲಾಕ್‌ಡೌನ್ ಹಾಗೂ ತಮ್ಮ ಸಿನಿಮಾಗಳ ಬಗ್ಗೆ 'ಸಿನಿಮಾ ಪುರವಣಿ' ಜೊತೆ ಮಾತನಾಡಿದ್ದಾರೆ.

ಅಭಿಲಾಷ್ ಪಿ.ಎಸ್.

- **ಚಿತ್ರೀಕರಣವೆಲ್ಲ ಸ್ತಬ್ಧವಾಗಿದೆ. ಲಾಕ್‌ಡೌನ್ ಅನುಭವ?**

ಈ ಬಾರಿ ಲಾಕ್‌ಡೌನ್ ಆಗುತ್ತದೆ ಎನ್ನುವ ಯಾವುದೇ ಮುನ್ಸೂಚನೆ ಇರಲಿಲ್ಲ. ಕೋವಿಡ್ ಎರಡನೇ ಅಲೆ ಬರುತ್ತದೆ ಎನ್ನುವ ಊಹಾಪೋಹವಷ್ಟೇ ಇತ್ತು. ಇದು ಈ ರೀತಿ ಕಾಡ್ಗಿಚ್ಚಿನಂತೆ ಹರಡುತ್ತದೆ ಎನ್ನುವುದನ್ನು ಯಾರೂ ಊಹಿಸಿರಲಿಲ್ಲ. ಮೊದಲು ನಮ್ಮ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ನಾವು ಅರಿಯಬೇಕು. ಎರಡನೇ ಅಲೆಯ ಸರಪಳಿ ತುಂಡಾಗಲು ನಾವು ಮೊದಲು ಪ್ರತ್ಯೇಕವಾಗಿರಬೇಕು. ಇಡೀ ಪ್ರಪಂಚವೇ ಸಂದಿಗ್ಧ ಪರಿಸ್ಥಿತಿಯಲ್ಲಿದೆ. ಸವಾಲಿನ ವಾತಾವರಣ ನಮ್ಮೆಲ್ಲರ ಮುಂದಿದೆ. ನಾವು ಬದುಕಿದ್ದರಷ್ಟೇ ಮುಂದಿನ ಹೋರಾಟ. ನನಗೆ ನಾನೆಷ್ಟು ಅಮೂಲ್ಯವೋ ನನ್ನ ಕುಟುಂಬಕ್ಕೂ ನಾನು ಅಷ್ಟೇ ಅಮೂಲ್ಯ. ಈ ಮಾತು ಪ್ರತಿ ವ್ಯಕ್ತಿಗೂ ಅನ್ವಯ. ಒಂದಿಷ್ಟು ನಿಯಮಗಳನ್ನು ಸರ್ಕಾರ ತಂದಿದೆ. ಇದನ್ನು ನಿಷ್ಠೆಯಿಂದ ಪಾಲಿಸೋಣ. ಹೀಗಾದರೆ ಬಹಳ ಬೇಗ ಗೆದ್ದು ಬರುತ್ತೇವೆ.

ಸಂಕಷ್ಟದ ಈ ಸಂದರ್ಭದಲ್ಲಿ ಕಲಾವಿದರೆಲ್ಲರೂ ತಮ್ಮ ಕೈಲಾದಷ್ಟು ಸಹಾಯವನ್ನು ಜನರಿಗೆ ಮಾಡುತ್ತಿದ್ದಾರೆ. ಮುಖತಃ ಭೇಟಿಯಾಗುವ ಸಂಪರ್ಕದ ಸರಪಳಿ ತುಂಡಾಗಿ, ನಾವೆಲ್ಲ ಒಂದೇ ಎನ್ನುವ ಸಹಾಯ, ನೆರವಿನ ಸರಪಳಿ ಮತ್ತಷ್ಟು ಗಟ್ಟಿಯಾಗಬೇಕು. ಭಾವನಾತ್ಮಕವಾಗಿ ನಾವೆಲ್ಲರೂ ಪರಸ್ಪರ ಸಂಬಂಧ ಹೊಂದಿದ್ದೇವೆ. ಕೊರೊನಾದಿಂದ ಕಲಿಯುವಂತಹದೂ ಬಹಳಷ್ಟಿದೆ. ಕೊರೊನಾ ಸಂಕಷ್ಟದಲ್ಲಿ ಒಬ್ಬರೇ ಸಂತೋಷವಾಗಿರಲು ಸಾಧ್ಯವಿಲ್ಲ. ನೆರೆಹೊರೆಯವರು ಚೆನ್ನಾಗಿದ್ದರಷ್ಟೇ ನಾವು ಸಂತೋಷವಾಗಿರಲು ಸಾಧ್ಯ. ಕೊರೊನಾದಿಂದ ಕಲಿತ ಪಾಠವನ್ನು ಮುಂದಿನ ದಿನಗಳಲ್ಲಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ. ನಮಗೆ ಇಂತಹ ಪರಿಸ್ಥಿತಿ ಬಂದಾಗಲಷ್ಟೇ ಪ್ರಕೃತಿಯನ್ನು ಕಾಪಾಡಿಕೊಳ್ಳುವುದರ ಬಗ್ಗೆ ಜಾಗೃತರಾಗುತ್ತೇವೆ. ಪ್ರಸ್ತುತ ಹುಟ್ಟಿರುವಂತಹ ಜಾಗೃತಿ ಕೇವಲ ವಾಟ್ಸ್‌ಆ್ಯಪ್ ಸ್ಟೇಟಸ್, ಫಾರ್‌ವರ್ಡ್ ಮೆಸೇಜ್‌ಗಷ್ಟೇ ಸೀಮಿತವಾಗಬಾರದು. ಈ ವಿಚಾರಗಳಲ್ಲಿ ನಾವು ಇನ್ನಷ್ಟು ಸಕ್ರಿಯರಾಗಬೇಕು, ಸಂವೇದನಾಶೀಲರಾಗಬೇಕು.

- **'ಅವತಾರ ಪುರುಷ' ಹಾಡಿನಲ್ಲಿ ಕಪ್ ನಮ್ದೇ ಎಂದಿರಿ..?**

ಐಪಿಎಲ್ ಆರಂಭದ ಸಂದರ್ಭದಲ್ಲೇ ಅವತಾರ ಪುರುಷ ಟೈಟಲ್ ಟ್ರ್ಯಾಕ್ 'ಕರುನಾಡ ಶರಣ ಇವ' ಬಿಡುಗಡೆ ಮಾಡಿದ್ದೆವು. ಐಪಿಎಲ್ ಆರಂಭವಾಗಿ ಆರ್‌ಸಿಬಿ ತಂಡ ಕೂಡಾ ಉತ್ತಮವಾಗಿ ಆಡಿ ಪಾಯಿಂಟ್ಸ್ ಟೇಬಲ್‌ನಲ್ಲಿ ಮೊದಲ ಸ್ಥಾನದಲ್ಲಿತ್ತು. ಕಪ್ ಗೆಲ್ಲುವ ಚಾನ್ಸ್ ಇತ್ತು. ಈ ಕೋವಿಡ್, ಕ್ರಿಕೆಟ್, ಸಿನಿಮಾ ಮಾತ್ರವಲ್ಲ ಇಡೀ ಪ್ರಪಂಚವನ್ನೇ ಮಲಗಿಸಿಬಿಟ್ಟಿತು. ಈ ಸ್ಥಿತಿ ತಾತ್ಕಾಲಿಕವಷ್ಟೇ... ಸರ್ಕಾರದ ನಿಯಮಗಳನ್ನು ಪಾಲಿಸಿದರೆ 'ಕಪ್ ನಮ್ದೇ'... ಇಲ್ಲದಿದ್ದರೆ 'ತಪ್ ನಮ್ದೇ'. ಕೋಟ್ಯಾಂತರ ಜನರ ಮೇಲೆ ಸರ್ಕಾರ ಹೇಗೆ ನಿಗಾ ಇಡಲು ಸಾಧ್ಯ. ಮೊದಲು ನಾವು ಸರಿಯಾಗಿ ಇರಬೇಕು. ಆ ಸಂದರ್ಭದಲ್ಲಿ ಕೋವಿಡ್‌ಗೆ ಸಂಬಂಧಿಸಿದ ಇತರೆ ಕೆಲಸಗಳನ್ನು ಸರ್ಕಾರ ಮಾಡಲು ಸಾಧ್ಯ. ಸಾಸಿವೆ ಕಾಳಿನಷ್ಟಾದರೂ, ನಮ್ಮ ಕರ್ತವ್ಯ ಅರಿತು ನಡೆದರೆ ಬದಲಾವಣೆ ಸಾಧ್ಯ. ಹನಿಹನಿಗೂಡಿದರೆ ಹಳ್ಳ ಎನ್ನುವುದನ್ನು ಅರಿತು ನಾವೆಲ್ಲರೂ ಕೋವಿಡ್ ವಿರುದ್ಧದ ಹೋರಾಟದಲ್ಲಿ ಹೆಜ್ಜೆ ಇಡಬೇಕು.

- **ಶರಣ್ ನಗುವಿನ ಲಸಿಕೆ. 'ಅವತಾರ ಪುರುಷ'ದಲ್ಲಿ ನಿಮ್ಮ ಪಾತ್ರದ ಬಗ್ಗೆ?**

ಇದುವರೆಗೂ ನಗಿಸುತ್ತಾ ಬಂದ ಶರಣ್ ಈ ಸಿನಿಮಾದಲ್ಲೂ ಇರುತ್ತಾನೆ. ಚಿತ್ರದ ಟೀಸರ್‌ನಲ್ಲಿ ನನ್ನ ಪಾತ್ರದ ವಿವರಣೆ ಇದೆ. ವಿಭಿನ್ನವಾದ ಪ್ರಯತ್ನದ ಸುಳಿವು ಜನರಿಗೆ ದೊರಕಿದೆ. ಹೊಸ ಪ್ರಯತ್ನ ಆಗಬೇಕು ಎನ್ನುವ ಉದ್ದೇಶದಿಂದಲೇ ಈ ಸಿನಿಮಾ ಮಾಡಿದೆವು. ಉದಾಹರಣೆಗೆ ಹೇಳುವುದಾದರೆ ಕಬಡ್ಡಿ ನನ್ನ ಆಟ. ಇಲ್ಲಿಯವರೆಗೂ ಕಬಡ್ಡಿ ಮೈದಾನದಲ್ಲಿ ಕಬಡ್ಡಿ ಆಡುತ್ತಿದ್ದೆವು. ಇದೀಗ ಬೇರೆ ಮೈದಾನದಲ್ಲಿ ಶರಣ್ ಕಬಡ್ಡಿ ಆಟ. ಇಲ್ಲಿ ನಗಿಸುವ ಶರಣ್ ಮರೆಯಾಗುವುದಿಲ್ಲ. ಇದು ಅವತಾರ ಪುರುಷ.

- **ಮುಂದಿನ ಸಿನಿಮಾಗಳ ಬಗ್ಗೆ**

ಸದ್ಯಕ್ಕೆ ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಕೆಲ ಸಿನಿಮಾಗಳ ಕಥೆಗಳನ್ನು ಫೋನ್ ಮೂಲಕ ಕೇಳುತ್ತಿದ್ದೇನೆ. ಇನ್ನೂ ಯಾವುದೂ ಅಂತಿಮವಾಗಿಲ್ಲ. ಗುರುಶಿಷ್ಯರು ಚಿತ್ರದ ಎರಡು ಶೆಡ್ಯೂಲ್ ಮುಗಿದಿದೆ. ಇನ್ನೊಂದು ಹಂತದ ಚಿತ್ರೀಕರಣಕ್ಕೆ ಸಿದ್ಧತೆ ನಡೆಸುತ್ತಿರುವಾಗಲೇ ಲಾಕ್‌ಡೌನ್ ಬಂದಿದೆ. ಕೋವಿಡ್ ಇರದೇ ಇದ್ದರೆ ಚಿತ್ರೀಕರಣವೇ ಮುಕ್ತಾಯವಾಗುತ್ತಿತ್ತು. ಮುಂದಿನ ದಿನಗಳಲ್ಲಿ ಕೋವಿಡ್ ಪರಿಸ್ಥಿತಿಯನ್ನು ನೋಡಿಕೊಂಡಷ್ಟೇ ಈ ವರ್ಷವೇ ಎರಡೂ ಚಿತ್ರಗಳು ಬಿಡುಗಡೆಯಾಗುತ್ತದೆಯೇ ಎನ್ನುವುದು ನಿರ್ಧಾರವಾಗಲಿದೆ.

ಅವತಾರ ಪುರುಷ
ಶರಣ್

ಕಳೆದ ಲಾಕ್‌ಡೌನ್ ಪ್ರಯೋಗವೇ ಈ ಗಡ್ಡಮೀಸೆ!

'ಗುರುಶಿಷ್ಯರು ಸಿನಿಮಾದಲ್ಲಿ ಮತ್ತೊಂದು ವಿಭಿನ್ನ ಪಾತ್ರಕ್ಕೆ ಬಣ್ಣಹಚ್ಚಿದ್ದೇನೆ. ಗುರುಶಿಷ್ಯರ ಸಂಬಂಧದ ಸಿನಿಮಾ ಇದು. ಶೀರ್ಷಿಕೆಗೆ ಪೂರಕವಾಗಿಯೇ ಸಿನಿಮಾ ಇದೆ. ಸಿನಿಮಾ ವೀಕ್ಷಿಸಿದ ಪ್ರೇಕ್ಷಕ ಮನರಂಜನೆ ಪಡೆಯುವುದರ ಜೊತೆಗೆ ಒಂದಷ್ಟು ವಿಷಯಗಳನ್ನು ತಿಳಿದುಕೊಂಡೂ ಹೋಗಬೇಕು ಎನ್ನುವುದು ನಮ್ಮ ಉದ್ದೇಶ. ನಾನು ಇಲ್ಲಿಯವರೆಗೂ ಗಡ್ಡಮೀಸೆ ಬಿಟ್ಟಿಲ್ಲ. ಮೊದಲ ಸಿನಿಮಾದಿಂದಲೇ ನನ್ನ ಪಾತ್ರಕ್ಕೆ ಮೀಸೆ ಇರಲಿಲ್ಲ. ಮತ್ತೆ ಕೆಲ ಚಿತ್ರಗಳ ಸರಣಿ ಬಂತು. ಹೀಗಾಗಿ ಗಡ್ಡಮೀಸೆ ಬಿಡುವ ಗೋಜಿಗೆ ಹೋಗಿರಲಿಲ್ಲ. ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ 'ಯಾವುದೋ ಪಾತ್ರವೋ ಏನೋ ಹೇಗೂ ಸುಮ್ಮನೆ ಇದ್ದೀಯಲ್ಲ ಗಡ್ಡಮೀಸೆ ಬಿಡು. ಗಡ್ಡಮೀಸೆ ಇರುವ ಶರಣ್ ಹೇಗಿರುತ್ತಾನೆ ಎಂದು ನೋಡಿಲ್ಲ. ಈಗ ನೋಡೋಣ' ಎಂದು ತರುಣ್ ಹೇಳಿದ್ದ. ಗಡ್ಡಮೀಸೆಯಲ್ಲಿ ನನ್ನನ್ನು ನಾನೇ ನೋಡಿಲ್ಲ. ಹೀಗಾಗಿ ಗಡ್ಡಮೀಸೆ ಬಿಟ್ಟು, ಒಂದಿಷ್ಟು ಫೋಟೊ ತೆಗೆದಿಟ್ಟುಕೊಂಡಿದ್ದೆ. ಈ ಸಂದರ್ಭದಲ್ಲಿ 'ಗುರುಶಿಷ್ಯರು' ಕಥೆ ನಮ್ಮ ಮುಂದೆ ಬಂದೇ ಇರಲಿಲ್ಲ. ಈ ಕಥೆ ಬಂದಾಗ ಮೀಸೆ ಇರುವ ಇದೇ ಲುಕ್ ಇರಲಿ ಎಂದು ಅಂತಿಮಗೊಳಿಸಿದೆವು. ಕಳೆದ ಲಾಕ್‌ಡೌನ್‌ನಲ್ಲಿ ಆದ ಪ್ರಯೋಗ ಇದು. ಇದೇ ಲುಕ್‌ಗಳಲ್ಲಿ ಮತ್ತೊಂದಿಷ್ಟು ಪಾತ್ರ ಮಾಡುವ ಆಸೆಯೂ ಹುಟ್ಟಿಕೊಂಡಿದೆ' ಎಂದು ವಿವರಿಸಿದರು ಶರಣ್.

ಕೋವಿಡ್–19 ಎರಡನೇ ಅಲೆ ತೀವ್ರತೆಗೆ ಚಿತ್ರರಂಗ ಹಾಗೂ ಕಿರುತೆರೆ ಸ್ತಬ್ಧವಾಗಿದ್ದು, ಬಿಗ್‌ಬಾಸ್ ಎಂಟನೇ ಆವೃತ್ತಿಯೂ ಅರ್ಧಕ್ಕೆ ಸ್ಥಗಿತವಾಗಿದೆ. 71 ದಿನ ಬಿಗ್‌ಬಾಸ್ ಮನೆಯಲ್ಲಿದ್ದ ಸ್ಪರ್ಧಿಗಳೆಲ್ಲರೂ ಹೊರಬಂದಿದ್ದಾರೆ. 'ಇಲ್ಲಿಯವರೆಗೂ ಮನೆಯಲ್ಲಿ ಉಳಿಯಲು ಯಶಸ್ವಿಯಾದ ಎಲ್ಲರೂ ಬಿಗ್‌ಬಾಸ್ ವಿಜೇತರು' ಎಂದು ನಿರೂಪಕ, ನಟ ಸುದೀಪ್ ಘೋಷಿಸಿದ್ದು, ಮನೆಯಿಂದ ಹೊರಬಂದ ವೈಷ್ಣವಿ ಗೌಡ ಹಾಗೂ ಅರವಿಂದ್ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.

ಅರ್ಧಕ್ಕೇ ನಿಂತ ಬಿಗ್‌ಬಾಸ್

ಎಲ್ಲರೂ ವಿಜೇತರೇ!

ಕಿರುತೆರೆ

ಮತ್ತೆ ಬರುವುದಿಲ್ಲ ಬಿಗ್‌ಬಾಸ್ ಪಯಣ

'ಬಿಗ್‌ಬಾಸ್ ಪಯಣ ಇಲ್ಲಿಗೇ ಮುಗಿಯುತ್ತದೆ ಎನ್ನುವಾಗ ಒಂದು ಕ್ಷಣ ಆಘಾತವಾಯಿತು. ಹೇಗೆ ಇದಕ್ಕೆ ಪ್ರತಿಕ್ರಿಯೆ ನೀಡಬೇಕು ಎಂದು ತೋಚಲಿಲ್ಲ. ಜೀವನದಲ್ಲಿ ಮುಂದೇನು ಎನ್ನುವ ಪ್ರಶ್ನೆ ಮೂಡಿತು. ಆದರೆ ಜೀವನವನ್ನು ನಂಬಿದ್ದೇನೆ. ಅದೇ ಮುಂದಕ್ಕೆ ಕರೆದುಕೊಂಡು ಹೋಗುತ್ತದೆ. ಎಷ್ಟೇ ಕೋಟಿ ಗಳಿಸಿದರೂ, ಬಿಗ್‌ಬಾಸ್ ಪಯಣ ಮತ್ತೆ ಬರುವುದಿಲ್ಲ' ಎಂದು ಕಿರುತೆರೆ ನಟಿ, ಬಿಗ್‌ಬಾಸ್ ಸ್ಪರ್ಧಿ ವೈಷ್ಣವಿ ಹೇಳಿದರು.

ಲಾಕ್‌ಡೌನ್ ಮುಗಿದ ಮೇಲೆ ಎಂಟನೇ ಆವೃತ್ತಿ ಮುಂದುವರಿಸ್ತಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ವೈಷ್ಣವಿ, 'ನನಗೆ ಇದರ ಬಗ್ಗೆ ಒಂದಿಷ್ಟೂ ಸುಳಿವಿಲ್ಲ. ತಂಡದವರು ಚರ್ಚೆ ನಡೆಸುತ್ತಿದ್ದಾರೆ. ಹೊಸ ಯೋಚನೆಯೊಂದಿಗೆ ಅವರು ಬರುತ್ತಾರೆ ಎಂದುಕೊಂಡಿದ್ದೇನೆ' ಎಂದು ಪ್ರತಿಕ್ರಿಯೆ ನೀಡಿದರು.

ವೈಷ್ಣವಿ ಯಾಕಿಷ್ಟು ಮೌನಿ ಎಂಬುವುದಕ್ಕೆ ಉತ್ತರಿಸುತ್ತಾ, 'ನಾನು ನಿಜಜೀವನದಲ್ಲೂ ಹೆಚ್ಚು ಮಾತನಾಡುವುದಿಲ್ಲ. ನೀನು ರೋಬೋನಾ? ನಿನಗೆ ಭಾವನೆಗಳೇ ಇಲ್ವಾ? ಎಂದು ಎಲ್ಲರೂ ಕೇಳುತ್ತಾರೆ. ಹಾಗೇನಿಲ್ಲ. ನನಗೂ ಭಾವನೆಗಳಿಗೆ. ಒಂದು ಪರಿಸ್ಥಿತಿಯನ್ನು ನಿಭಾಯಿಸಲು ಕೋಪ ಮಾತ್ರವೇ ಒಂದು ವಿಧವಲ್ಲ. ಮನಃಸ್ತಾಪ ಆಗಿದ್ದರೆ ಅದನ್ನು ನಿಭಾಯಿಸಲು ನಾನಾ ರೀತಿಯಿದೆ. ನಾನು ಶಾಂತ ರೀತಿಯಿಂದ ಎಲ್ಲವನ್ನೂ ನಿಭಾಯಿಸಲು ಬಯಸುತ್ತೇನೆ. ನನ್ನ ಸಂತೋಷ ನನ್ನದು. ನನ್ನ ಕೋಪ ನನ್ನ ಕೈಯಲ್ಲಿದೆ. ಶಾಂತಿ, ಖುಷಿ, ನಗು ಪಸರಿಸಲು ನಾನು ಮನೆ ಒಳಗೆ ಹೋಗಿದ್ದೆ. ಇದರಲ್ಲಿ ಸ್ವಲ್ಪ ಯಶಸ್ವಿಯಾಗಿದ್ದೇನೆ' ಎಂದರು.

'ಮನೆಯಲ್ಲಿ ಪ್ರತಿಯೊಬ್ಬ ಸ್ಪರ್ಧಿಯೂ ನನ್ನ ಫೇವರೇಟ್ ಆಗಿದ್ದರು. ಇದರಲ್ಲಿ ತುಂಬಾ ಫೇವರೇಟ್ ದಿವ್ಯಾ ಉರುಡುಗ. ಕೊನೆಯ ದಿನಗಳಲ್ಲಿ ನಾವಿಬ್ಬರು ಒಳ್ಳೆಯ ಸ್ನೇಹಿತರಾದೆವು. ಅನಾರೋಗ್ಯದ ಕಾರಣ ಅವರು ಹೊರಗಡೆ ಬಂದ ಸಂದರ್ಭದಲ್ಲಿ ಅವರನ್ನು ಮಿಸ್ ಮಾಡಿಕೊಂಡೆ. ಬಿಗ್‌ಬಾಸ್ ಪಯಣವೇ ವಿಶೇಷವಾಗಿತ್ತು' ಎಂದರು.

'ದಿವ್ಯ ಉರುಡುಗ ನನ್ನನ್ನು ಆಯ್ಕೆ ಮಾಡಿಕೊಂಡಾಗಿದೆ'

ಬಿಗ್‌ಬಾಸ್ ಮನೆಯಲ್ಲಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದ್ದು ಅರವಿಂದ್ ಹಾಗೂ ದಿವ್ಯಾ ಉರುಡುಗ ಜೋಡಿ. ಈ ಕುರಿತಂತೇ, ದಿವ್ಯ ಉರುಡುಗ ಹಾಗೂ ಬಿಗ್‌ಬಾಸ್ ಗೆಲ್ಲುವುದರಲ್ಲಿ ನಿಮಗೆ ಮುಖ್ಯವಾಗಿದ್ದು ಯಾವುದು ಎಂಬ ಪ್ರಶ್ನೆಗೆ ಉತ್ತರಿಸಿದ ಅರವಿಂದ್, 'ದಿವ್ಯ ಉರುಡುಗ(ಡಿಯು) ಅವರು ನನ್ನನ್ನು ಆಯ್ಕೆ ಮಾಡಿದ್ದಾರೆ. ಹೀಗಾಗಿ ನಾನು ಅವರನ್ನು ಆಯ್ಕೆ ಮಾಡಬೇಕೆಂದಿಲ್ಲ. ಬಿಗ್‌ಬಾಸ್ ಗೆಲ್ಲುವುದನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ನಾನು ಬಿಗ್‌ಬಾಸ್ ಪ್ರವೇಶಿಸಿದ್ದು ಯಾರನ್ನೂ ಸ್ನೇಹಿತರನ್ನಾಗಿ ಮಾಡಿಕೊಳ್ಳಲು ಅಲ್ಲ. ಆದರೆ ಆಟ ಆಡುವಾಗ ಎಲ್ಲರೂ ಸ್ನೇಹಿತರಾಗುತ್ತಾರೆ. ನಾನು ಬಿಗ್‌ಬಾಸ್ ಮನೆಯಿಂದ ಹೊರಬಂದ ಕೂಡಲೇ ದಿವ್ಯಾಗೆ ಕರೆ ಮಾಡಿದ್ದೆ. ಅವರ ಆರೋಗ್ಯ ಚೇತರಿಸಿಕೊಂಡಿದೆ. ಆಸ್ಪತ್ರೆಯಿಂದ ಬಿಡುಗಡೆ ಆಗಿ ಮನೆಗೆ ಸೇರಿದ್ದಾರೆ. ಅವರು ಖುಷ್‌ಖುಷಿಯಾಗಿದ್ದಾರೆ. ಡಿಯು ಕೊಟ್ಟಿರೋ ರಿಂಗ್ ಕೈಯಲ್ಲೇ ಇದೆ. ಅದು ಯಾವಾಗಲೂ ತೆಗೆಯಲ್ಲ. ಅವರು ಕೊಟ್ಟಿರುವ ಒಲವಿನ ಉಡುಗೊರೆಗೆ ಅಷ್ಟೇ ಮೌಲ್ಯವಿದೆ. ಸ್ವಲ್ಪ ಬಿಗಿಯಾಗಿದೆ, ಅದನ್ನು ಸರಿಮಾಡಿಸಬೇಕಷ್ಟೇ' ಎಂದು ಮುಗುಳ್ನಗೆಯಲ್ಲೇ ಉತ್ತರಿಸಿದರು.

ದಿವ್ಯ ಉರುಡುಗ ನೀಡಿದ ರಿಂಗ್ ತೋರಿಸಿದ ಅರವಿಂದ್

'ಮನೆ ಒಳಗಡೆ ಹೋಗುವಾಗ ಯಾವ ಯೋಚನೆಯೂ ನನ್ನ ತಲೆಯಲ್ಲಿ ಇರಲಿಲ್ಲ. ಮನೆಯಲ್ಲಿದ್ದ ಮತ್ತೆಲ್ಲರೂ ಮನರಂಜನಾ ಕ್ಷೇತ್ರದಿಂದ ಬಂದವರಾಗಿದ್ದರು. ಮನೆಯ ಎಲ್ಲ ಸದಸ್ಯರೂ ಒಳ್ಳೆಯವರಾಗಿದ್ದ ಕಾರಣ ಹೊಂದಿಕೊಂಡು ಹೋಗಲು ಸಾಧ್ಯವಾಯಿತು. ಒಂದು ವಾರ ಉಳಿದುಕೊಳ್ಳುತ್ತೇನೋ ಎಂಬ ಪ್ರಶ್ನೆ ಇತ್ತು. ಟಾಸ್ಕ್‌ಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಬಲ್ಲೆ ಎಂಬ ನಂಬಿಕೆ ಇತ್ತು. ಬಿಗ್‌ಬಾಸ್ ಪಯಣ ಈ ರೀತಿ ಅಂತ್ಯವಾಗುತ್ತದೆ ಎಂದು ಯಾರೂ ಕನಸಲ್ಲಿ ಅಂದುಕೊಂಡಿರಲಿಲ್ಲ. ಬಿಗ್‌ಬಾಸ್ ಮನೆ ನಡೆಸಲು 800 ಜನರ ಶ್ರಮ ಈ ರೀತಿ ಅರ್ಧಕ್ಕೇ ನಿಂತುಹೋಗಿರುವುದು ಕಂಡು ಬೇಜಾರಾಗಿದೆ. ಬಿಗ್‌ಬಾಸ್ ಮನೆಯನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಈಗಿನ ಪರಿಸ್ಥಿತಿಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗಿದೆ' ಎಂದರು.

ನೆರವಿಗೊಂದು ವ್ಯವಸ್ಥಿತ ಮಾರ್ಗ

ಸಿನಿಮಾ, ಕಿರುತೆರೆ ರಂಗದ ಎಲ್ಲ ಚಟುವಟಿಕೆಗಳು ಬಹುತೇಕ ಸ್ತಬ್ಧವಾಗಿವೆ. ಈ ನಡುವೆ ಮನೆಯಲ್ಲೇ ಉಳಿಯಬೇಕಾದ ಈ ಕ್ಷೇತ್ರದ ಎಲ್ಲರಿಗೂ (ಕಲಾವಿದರು, ತಂತ್ರಜ್ಞರು) ಇಲ್ಲಿನ ಪ್ರಮುಖರು ನೆರವಿನ ಮಹಾಪೂರ ಹರಿಸಿದ್ದಾರೆ.

ಈ ಬಾರಿಯಂತೂ ನೆರವು ನೀಡುವ ಕ್ರಮ ವ್ಯವಸ್ಥಿತವಾಗಿ ನಡೆದಿದೆ.

ಎಸ್.ವಿ. ಶಿವಕುಮಾರ್

ಉಪೇಂದ್ರ ಪ್ಲಾನ್: ಉಪೇಂದ್ರ ಅವರು ಸುಮಾರು ಮೂರು ಸಾವಿರ ಜನರಿಗೆ ಕಿಟ್ ನೀಡಲು ಸಿದ್ಧತೆ ನಡೆಸಿದ್ದರು. ಅದು ಕಾರ್ಯಗತವಾಗುತ್ತಿದ್ದಂತೆಯೇ ಚಲನಚಿತ್ರ, ಟಿವಿ, ಸುಗಮ ಸಂಗೀತ ಕ್ಷೇತ್ರದ ಒಕ್ಕೂಟದ ಹಲವಾರು ಮಂದಿ ಕೈ ಜೋಡಿಸಿದರು. ಹಿರಿಯ ನಟಿ ಸರೋಜಾದೇವಿ, ನಟರಾದ ಸಾಧು ಕೋಕಿಲ, ಎಸ್.ಕೆ. ಸ್ಟೀಲ್ ಕಂಪನಿ ಸೇರಿದಂತೆ ಹಲವಾರು ಮಂದಿ ದಾನಿಗಳು ತಮ್ಮಿಂದಾದಷ್ಟು ನೆರವು ನೀಡಿದರು.

ಈಗ ಅದನ್ನು ವ್ಯವಸ್ಥಿತವಾಗಿ ತಲುಪಿಸುವ ಹೊಣೆ ಉಪೇಂದ್ರ ಅವರ ತಂಡದ್ದು. ಅದಕ್ಕೆ ಉಪೇಂದ್ರ ಅವರು ಯೋಜನೆ ಹಾಕಿದ್ದಾರೆ. ಉದಾಹರಣೆಗೆ ರೈತರಿಂದ ತರಕಾರಿಗಳನ್ನು ಕೊಳ್ಳುವುದು. ಅವರಿಗೆ ಮಾರುಕಟ್ಟೆ ದರವನ್ನೇ ಪಾವತಿಸಿ ಅದನ್ನು ಅಗತ್ಯ ಉಳ್ಳವರಿಗೆ ನೆರವಿನ ರೂಪದಲ್ಲಿ ಕೊಡುವುದು. ಅತ್ತ ರೈತನಿಗೂ ಸಹಾಯ ಕೊಟ್ಟಂತಾಗುತ್ತದೆ. ಇನ್ನು ಅಗತ್ಯಗಳ ಪಟ್ಟಿಯಲ್ಲಿ ಆಹಾರ ಮಾತ್ರ ಅಲ್ಲ, ಔಷಧ, ಚಿಕಿತ್ಸೆಗೆ ನೆರವು, ತುರ್ತು ಸಹಾಯ ಹೀಗೆ ಹಲವಾರು ಇವೆ. ಅವುಗಳನ್ನು ಬೇಕಾದವರಿಗೆ ತಲುಪಿಸುವ ವ್ಯವಸ್ಥೆಯನ್ನು ಉಪೇಂದ್ರ ಅವರ ತಂಡ ಮಾಡುತ್ತಿದೆ.

'ಎಲ್ಲರೂ ಕೈ ಜೋಡಿಸಿದ್ದಾರೆ. ಅದರಲ್ಲಿ ನನ್ನದೇನಿದೆ? ಕೈಲಾದಷ್ಟು ಅದನ್ನು ತಲುಪಿಸಬೇಕು. ಇದರಲ್ಲಿ ನಾನೊಂದು ಚಾನೆಲ್ ಅಷ್ಟೇ' ಎಂದು ವಿನಮ್ರರಾಗಿ ಹೇಳುತ್ತಾರೆ ಉಪೇಂದ್ರ.

ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್: ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಎಲ್ಲ ಬಗೆಯ ಟಿವಿ ಕಾರ್ಯಕ್ರಮ ನಿರ್ಮಾಣ ಸ್ಥಗಿತಗೊಳಿಸಲು ಆದೇಶಿಸಿದೆ. 'ಮೇ 24ರವರೆಗೆ ಪರಿಸ್ಥಿತಿಯನ್ನು ಅವಲೋಕಿಸಿ ನೆರವು ನೀಡಲು ಯೋಜನೆ ರೂಪಿಸಿದೆ' ಎಂದು ಅಸೋಸಿಯೇಷನ್ ಅಧ್ಯಕ್ಷ ಎಸ್.ವಿ. ಶಿವಕುಮಾರ್ ಹೇಳಿದರು.

'ಸಂಘದಲ್ಲಿ ಒಂದು ಆಂತರಿಕ ಸಮಿತಿ ಮಾಡಿದ್ದೇವೆ. ನಮ್ಮ ಕ್ಷೇತ್ರಗಳ 33 ವಲಯಗಳ ಸದಸ್ಯರು ತಮ್ಮ ವ್ಯಾಪ್ತಿಯಲ್ಲಿ ನೆರವಿನ ಅಗತ್ಯವುಳ್ಳವರನ್ನು ಗುರುತಿಸುತ್ತಾರೆ. ಅಥವಾ ಅಗತ್ಯವುಳ್ಳವರು ಅವರನ್ನು ಸಂಪರ್ಕಿಸಬಹುದು. ಹಾಗೆ ಏನಾದರೂ ಅಗತ್ಯ ವಸ್ತುಗಳನ್ನು ಖರೀದಿಸಿದಲ್ಲಿ ಅದರ ಬಿಲ್‌ನ್ನು ಆಯಾ ಅಂಗಡಿಗೆ ನಮ್ಮ ಸದಸ್ಯರು ಆನ್‌ಲೈನ್ (ಗೂಗಲ್ ಪೇ, ಪೇಟಿಎಂ, ಯುಪಿಐ) ಮೂಲಕ ಪಾವತಿಸುತ್ತಾರೆ. ಯಾರೂ ಗುಂಪು ಸೇರುವ ಅಗತ್ಯ ಇಲ್ಲ. ಆದ್ದರಿಂದ ಸದ್ಯದ ತುರ್ತಿಗೆ ಬೇಕಾದಷ್ಟು ಮೀಸಲು ನಿಧಿ ಇದೆ. ವೈಯಕ್ತಿಕವಾಗಿಯೂ ನೆರವು ನೀಡುತ್ತೇನೆ. ಇನ್ನೂ ಕೊರತೆ ಆದಲ್ಲಿ ದಾನಿಗಳ ಮೂಲಕವಾದರೂ ಕೊಡಿಸುತ್ತೇವೆ. ಯಾರೂ ಹಸಿದುಕೊಂಡಿರದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು' ಎಂದು ಶಿವಕುಮಾರ್ ಹೇಳಿದರು.

ಹೀಗೆ ಸಂಕಟದ ಕಾಲದಲ್ಲಿ ಸಿನಿಮಾ, ಟಿವಿ ಕ್ಷೇತ್ರ ಎಂಬ ಬೇಧ ಇಲ್ಲದೆ ಎಲ್ಲರೂ ಒಂದಾಗಿದ್ದಾರೆ. ನೆರವಿನ ಹರಿವು ಬರುತ್ತಲೇ ಇದೆ.

ಉಪೇಂದ್ರ

'90 ಹೊಡಿ ಮನೀಗ್ ನಡಿ'
ವೈಜನಾಥ್ ಬಿರಾದಾರ್, ನೀತಾ ಬಿಜಾಪುರ್

ಬರಲಿದೆ '90 ಹೊಡಿ ಮನೀಗ್ ನಡಿ'

ಹಾಸ್ಯ ನಟ ವೈಜನಾಥ ಬಿರಾದಾರ್ ಅಭಿನಯದ ಹಾಸ್ಯ ಪ್ರಧಾನ '90 ಹೊಡಿ ಮನೀಗ್ ನಡಿ' ಚಿತ್ರದ ಚಿತ್ರೀಕರಣ ಬಹುತೇಕ ಪೂರ್ಣಗೊಂಡಿದೆ. ಕೋವಿಡ್ ಕಾರಣದಿಂದಾಗಿ ಚಿತ್ರೀಕರಣದ ನಂತರದ ಕೆಲಸಗಳು ಸ್ವಲ್ಪ ವಿಳಂಬವಾಗಿವೆ.

'ಅಮ್ಮ ಟಾಕೀಸ್ ಬಾಗಲಕೋಟೆ' ಬ್ಯಾನರಿನಡಿ ತಯಾರಾಗುತ್ತಿರುವ ಈ ಸಿನಿಮಾಗೆ ಉಮೇಶ್ ಬಾದರದಿನ್ನಿ ಮತ್ತು ನಾಗರಾಜ್ ಅರೆಹೊಳೆ ಜಂಟಿ ನಿರ್ದೇಶನ ಮಾಡಿದ್ದಾರೆ. ರತ್ನಮಾಲಾ ಬಾದರದಿನ್ನಿ ನಿರ್ಮಿಸಿದ್ದಾರೆ. ಮಾತು, ಹಾಡು, ಸಾಹಸ ಸನ್ನಿವೇಶಗಳನ್ನು ಬೆಂಗಳೂರು, ಬಾಗಲಕೋಟೆ, ಬಿಡದಿಯಲ್ಲಿ ಚಿತ್ರೀಕರಣ ನಡೆಸಲಾಗಿತ್ತು. ಬೆಂಗಳೂರಿನ ಮಾಗಡಿ ರಸ್ತೆಯ ಸುತ್ತಮುತ್ತ ಹಾಸ್ಯ ಸನ್ನಿವೇಶಗಳನ್ನು ಚಿತ್ರೀಕರಿಸಲಾಗಿದೆ.

ಬಿರಾದಾರ್ ಅವರ ವೃತ್ತಿ ಜೀವನದ 500ನೇ ಚಿತ್ರ ಇದು. ಈ ಚಿತ್ರದಲ್ಲಿ ಬಿರಾದಾರ್ ನಾಯಕ. ಜತೆಗೆ ಹಿರಿಯ ನಟ ಕರಿಸುಬ್ಬು, ಡೇರಿಂಗ್ ಸ್ಟಾರ್ ಧರ್ಮ, ಪ್ರಶಾಂತ್ ಸಿದ್ದಿ, ಅಭಯ್ ವೀರ್, ಆರ್.ಡಿ ಬಾಬು, ವಿವೇಕ್ ಜಂಬಗಿ, ನೀತಾ, ಪ್ರೀತು ಪೂಜಾ, ರುದ್ರಗೌಡ ಬಾದರದಿನ್ನಿ, ಹೊಸ್ಕೋಟೆ ಮುರುಳಿ, ಎಲ್‌ಐಸಿ ಲೋಕೇಶ್ ತೆರೆ ಹಂಚಿಕೊಂಡಿದ್ದಾರೆ. ಇನ್ನು ಕವಿರತ್ನ ಡಾ.ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ, ಕಿರಣ್ ಶಂಕರ್ & ಶಿವು ಭೇರಗಿ ಸಂಗೀತ, ರಾಕಿರಮೇಶ್ ಸಾಹಸ, ಯುಡಿವಿ ವೆಂಕಿ ಸಂಕಲನ ಚಿತ್ರಕ್ಕಿದೆ.

ಒಟಿಟಿ

ರಾಧೆ, 'ಡಿ' ಕಂಪನಿ ಭರ್ಜರಿ ಎಂಟ್ರಿ

- **ರಾಧೆ (ಹಿಂದಿ)**
- **ತಾರಾಗಣ: ಸಲ್ಮಾನ್ ಖಾನ್, ದಿಶಾ ಪಟಾನಿ**
- **ನಿರ್ದೇಶನ: ಪ್ರಭು ದೇವ**
- **ಪ್ರಸಾರ: ಝೀ 5 (ಮೇ 13ರಿಂದ)**

ಸಲ್ಮಾನ್ ಖಾನ್

ಸಲ್ಮಾನ್ ಖಾನ್ ನಟನೆಯ ಬಹು ನಿರೀಕ್ಷಿತ ಚಿತ್ರವಿದು. ದಕ್ಷಿಣ ಕೊರಿಯಾದಲ್ಲಿ ನಿರ್ಮಾಣವಾದ 'ದಿ ಔಟ್‌ಲಾಸ್' ಚಿತ್ರದಿಂದ ಸ್ಫೂರ್ತಿ ಪಡೆದ ಕತೆ ಎಂದು ಹೇಳಲಾಗುತ್ತಿದೆ. ಕಥೆಯನ್ನು ಭಾರತೀಯ ಪ್ರಾದೇಶಿಕತೆಗೆ ಒಗ್ಗಿಸಲಾಗಿದೆ. ಅತಿಯಾಗಿ ಮಾದಕ ವಸ್ತುಗಳನ್ನು ಸೇವಿಸಿ ಯುವಜನತೆ ಹೇಗೆ ನಾಶವಾಗುತ್ತಾರೆ ಎಂಬುದನ್ನು ಚಿತ್ರ ಹೇಳಲು ಹೊರಟಿದೆ. ಇಲ್ಲಿ ನಾಯಕ ರಾಧೆ (ಸಲ್ಮಾನ್) ಒಬ್ಬ ಚತುರ ಪೊಲೀಸ್ ಅಧಿಕಾರಿ. ಅವನು ಶಾಂತಿ, ನ್ಯಾಯ ಕಾಪಾಡಲು ನಡೆಸುವ ಹೋರಾಟ ಕಥೆಯ ವಸ್ತು. ಎಂದಿನಂತೆ ಸಲ್ಮಾನ್ ಅವರ ಸಾಹಸ, ನವಿರು ಹಾಸ್ಯದ ಸರಕು ಈ ಚಿತ್ರದಲ್ಲಿ ಬೇಕಾದಷ್ಟಿದೆ. ಕುತೂಹಲ, ಥ್ರಿಲ್ಲರ್ ಅಂಶಗಳು ಸಾಕಷ್ಟಿವೆ. ತನ್ನ ಹೋರಾಟದಲ್ಲಿ ರಾಧೆ ಗೆಲ್ಲುತ್ತಾನೆಯೇ ಎಂಬುದು ಚಿತ್ರ ನೋಡಿಯೇ ಗೊತ್ತಾಗಬೇಕು.

- **ಡಿ ಕಂಪನಿ (ಹಿಂದಿ, ಕನ್ನಡ, ತಮಿಳು, ತೆಲುಗು, ಮಲಯಾಳಂ)**
- **ತಾರಾಗಣ: ಅಶ್ವತ್ ಕಾಂತ್, ನೈನಾ ಗಂಗೂಲಿ**
- **ನಿರ್ದೇಶನ: ರಾಂ ಗೋಪಾಲ್ ವರ್ಮಾ**
- **ಪ್ರಸಾರ: ಸ್ಪಾರ್ಕ್ ಒಟಿಟಿ (ಮೇ 15ರಿಂದ)**

ಅಶ್ವತ್ ಕಾಂತ್

ಭೂಗತ ಲೋಕದ ಕಥೆಯನ್ನು ಮತ್ತೆ ಹೇಳಲು ಹೊರಟಿದ್ದಾರೆ ನಿರ್ದೇಶಕ ರಾಂ ಗೋಪಾಲ್ ವರ್ಮಾ. ಭೂಗತ ಲೋಕದ 'ಉದ್ಯಮ'ವೊಂದು ತೆರೆದುಕೊಳ್ಳುವುದು ಅದು ದೇಶವನ್ನೇ ತಲ್ಲಣಗೊಳಿಸುವ ಮಟ್ಟಕ್ಕೆ ಬೆಳೆಯುವುದು ಕಥಾ ವಸ್ತು. ಡಿ ಕಂಪನಿ ಹೆಸರೇ ಹೇಳುವಂತೆ ಇದು ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಕಥೆ. ಈ ಚಿತ್ರದಲ್ಲಿ 1980ರ ಮುಂಬೈಯ ಚಿತ್ರಣವನ್ನು ತೋರಿಸಲಾಗಿದೆ. ಆದರೆ, ಕಥೆ ಹೆಚ್ಚು ಕರಾಚಿಯನ್ನು ಕೇಂದ್ರೀಕರಿಸಿಕೊಂಡಿದೆ. ಹೊಸಬರನ್ನೇ ಹಾಕಿಕೊಂಡು ಮಾಡಲಾದ ಚಿತ್ರ ಹೊಸದೇನನ್ನು ಹೇಳಲು ಹೊರಟಿದೆ ಎಂಬುದು ವೀಕ್ಷಕನ ಕುತೂಹಲ.

- **ನಿಝಲ್ (ಮಲಯಾಳಂ)**
- **ತಾರಾಗಣ: ಕುಂಚಾಕೋ ಬೋಬನ್, ನಯನತಾರಾ**
- **ನಿರ್ದೇಶನ: ಅಪ್ಪು ಎನ್. ಭಟ್ಟತಿರಿ**
- **ಪ್ರಸಾರ: ಅಮೆಝಾನ್ ಪ್ರೈಮ್ (ಮೇ 10ರಿಂದ)**

ತೀವ್ರ ಅಪಘಾತಕ್ಕೊಳಗಾಗಿ ಚೇತರಿಸಿಕೊಳ್ಳುತ್ತಿರುವ ನ್ಯಾಯಾಧೀಶ ಜಾನ್ ಬೇಬಿ ಒಮ್ಮೆ ಸುಮಾರು 8 ವರ್ಷದ ಬಾಲಕ ನಿತಿನ್‌ನನ್ನು ಭೇಟಿಯಾಗುತ್ತಾನೆ. ಅವನಿಗೆ ಕೊಲೆ ಕಥೆಗಳ ಬಗ್ಗೆ ತುಂಬಾ ಆಸಕ್ತಿ. ಬಾಲಕ ಹೇಳಿದ ಕಥೆಗಳ ಪ್ರಕಾರವೇ ನ್ಯಾಯಾಧೀಶ ಒಂದು ಘಟನಾವಳಿಗಳ ನಕಾಶೆ ರೂಪಿಸುತ್ತಾನೆ. ಆಗ ಕಥೆಗಳು ನಿಜ ಘಟನೆಗಳಿಗೆ ತಾಳೆಯಾಗುತ್ತವೆ. ಮುಂದೆ ಅವುಗಳ ತನಿಖೆ ಏನಾಯಿತು ಎಂಬ ಕುತೂಹಲ ಸಿನಿಮಾದಲ್ಲಿದೆ.

ಮತ್ತೆ ಅದೃಷ್ಟ ಪರೀಕ್ಷೆಗೆ ಅನಿಲ್ ಸಿದ್ದು

'ಗಾಡ್ ಕಿಸ್ ಯೂ' ಮೂಲಕ ಬೆಳ್ಳಿತೆರೆಗೆ ಬರುತ್ತಿದ್ದಾರೆ ಅನಿಲ್ ಸಿದ್ದು. ಯುವ ನಟ ಅನಿಲ್ ಸಿದ್ದು ಮೂಲತಃ ಮೈಸೂರಿನ ವಿಜಯನಗರದವರು. ನಟನೆ, ಮಾಡೆಲಿಂಗ್‌ನಲ್ಲಿ ಆಸಕ್ತಿ ಹೊಂದಿದ್ದ ಅವರು, ಸಣ್ಣಪುಟ್ಟ ಪಾತ್ರಗಳ ಮೂಲಕವೇ ಗುರುತಿಸಿಕೊಂಡವರು.

ಮಣಿರತ್ನಂ ನಿರ್ದೇಶನದ 'ಕಾರ್ಟ್ ವಿಲಯಾಡು', ಎ.ಆರ್. ಮುರಗದಾಸ್ ನಿರ್ದೇಶನದ 'ಕತ್ತಿ', ಶಂಕರ್ ನಿರ್ದೇಶನದ 'ಐ', ಶ್ರೀರಾಘವ ಮುರಳಿ ನಿರ್ದೇಶನದ 'ಮುಮ್ತಾಜ್' ಚಿತ್ರದಲ್ಲಿ ಖಳನಾಯಕನಾಗಿ ನಟಿಸಿದ್ದಾರೆ. ಗುರುದೇಶಪಾಂಡೆ ನಿರ್ದೇಶನದ 'ಪಡ್ಡೆಹುಲಿ'ಯಲ್ಲೂ ಅವರದ್ದು ಖಳ ಪಾತ್ರ. ಅವರು ನಾಯಕನಾಗಿ ಕಾಣಿಸಿಕೊಂಡದ್ದು ವಿಜಯ್ ಸೂರ್ಯ ನಿರ್ದೇಶನದ ಎ+ ಚಿತ್ರದಲ್ಲಿ. ಆ ಬಳಿಕ ಕೆಲಕಾಲ ಸಾಮಾಜಿಕ ಕೆಲಸಗಳಲ್ಲಿ ತೊಡಗಿದ್ದರು.

ಈಗ ಗಾಡ್ ಕಿಸ್ ಯೂ ಚಿತ್ರದ ಮೂಲಕ ಮತ್ತೆ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ ಅನಿಲ್.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಹೊಸ್ತಿಲಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
-ಬಸವಣ್ಣ

ಲಸಿಕೆ ನೀತಿಯಲ್ಲಿ ಗೊಂದಲ ಸರ್ಕಾರದ ಅಸಡ್ಡೆಗೆ ಪುರಾವೆ

ಅತ್ಯಂತ ಅಸಾಮಾನ್ಯವಾದ ಆರೋಗ್ಯ ಬಿಕ್ಕಟ್ಟನ್ನು ನಿಭಾಯಿಸಲು ನೇರ ನಡೆ-ನುಡಿ, ಕೈಗೊಳ್ಳುವ ಕ್ರಮಗಳಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಬೇಕು. ಗೊಂದಲಕ್ಕೆ ಆಸ್ಪದ ಇಲ್ಲದ ರೀತಿಯ ನೀತಿಗಳನ್ನು ರೂಪಿಸಬೇಕು. ತಪ್ಪು ಆದಾಗ ಅದನ್ನು ಒಪ್ಪಿಕೊಂಡು, ತಿದ್ದಿಕೊಳ್ಳುವ ವಿನಯ ಬೇಕು. ಕೋವಿಡ್-19 ರಂತಹ ಸಾಂಕ್ರಾಮಿಕದ ನಿರ್ವಹಣೆಯಲ್ಲಿ ಆಗುವ ತಪ್ಪುಗಳು ಜನರನ್ನು ಬಲಿ ಪಡೆಯಬಹುದು ಎಂಬ ಎಚ್ಚರ ಬೇಕು. ನಮ್ಮ ಆಡಳಿತಾರೂಢರು ಈ ಎಲ್ಲದರಲ್ಲೂ ಎಡವಿದ್ದಾರೆ ಎಂಬುದಕ್ಕೆ ದೇಶದ ಜನರ ಕಣ್ಣೀರು, ರೋದನವೇ ಸಾಕ್ಷಿ. ಕೋವಿಡ್ ನಿರ್ವಹಣೆಗೆ ಏನೇನು ಬೇಕೋ ಅವು ಯಾವುವೂ ಇಲ್ಲ ಎಂಬುದು ನಮ್ಮ ದೇಶದ ಈಗಿನ ಸ್ಥಿತಿ. ಆಸ್ಪತ್ರೆಗಳಲ್ಲಿ ಹಾಸಿಗೆ ಇಲ್ಲ, ಆಮ್ಲಜನಕ ಇಲ್ಲ, ವೆಂಟಿಲೇಟರ್ ಇಲ್ಲ, ಔಷಧ ಇಲ್ಲ, ಆಂಬುಲೆನ್ಸ್ ಇಲ್ಲ. ಎಲ್ಲೆಡೆಯೂ ರೋಗಿಗಳು ಮತ್ತು ಸಾವು ನೋವು ಮಾತ್ರ ಇದೆ. ಕೋವಿಡ್ ಎರಡನೇ ಅಲೆ ಬರಲಿದೆ ಎಂದು ತಜ್ಞರು ಮೊದಲೇ ಹೇಳಿದ್ದರೂ ಅಗತ್ಯ ಸಿದ್ಧತೆ ಮಾಡಿಕೊಳ್ಳದೆ ಅಸಡ್ಡೆ ತೋರಿದ ಅಧಿಕಾರಸ್ಥರು ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಸಂದರ್ಭ ಇದು. ದೇಶವನ್ನು ಈ ಸ್ಥಿತಿಗೆ ತಳ್ಳಿದ್ದರಲ್ಲಿ ಆಡಳಿತಾರೂಢರ ಪಾಲೇ ದೊಡ್ಡದು.

ಲಸಿಕೆ ನೀತಿಯಲ್ಲಿನ ಗೊಂದಲ ನಿವಾರಿಸಿ, ಜನರ ಬವಣೆ ತಪ್ಪಿಸಿ

ಕೋವಿಡ್‌ನಿಂದ ರಕ್ಷಣೆ ಪಡೆಯಲು ಇರುವ ಒಂದು ದಾರಿ ಲಸಿಕೆ ಹಾಕಿಸಿಕೊಳ್ಳುವುದು. ಆದರೆ, ಜಗತ್ತಿನಲ್ಲಿ ಅತ್ಯಂತ ಹೆಚ್ಚು ಲಸಿಕೆ ತಯಾರಿಸುವ ಸಾಮರ್ಥ್ಯದ ಭಾರತದಲ್ಲಿ ದೇಶದ ಪೌರರಿಗೆ ಪೂರೈಸಲು ಲಸಿಕೆ ಇಲ್ಲ ಎಂಬ ದಯನೀಯ ಸ್ಥಿತಿ ಈಗ ಸೃಷ್ಟಿಯಾಗಿದೆ. ಎಲ್ಲರಿಗೂ ತಕ್ಷಣಕ್ಕೆ ಲಸಿಕೆ ಪೂರೈಸಲು ಸಾಧ್ಯವಿಲ್ಲ ಎಂಬುದು ನಿಜ. ಇರುವ ಲಸಿಕೆಯನ್ನು ಗೊಂದಲವಿಲ್ಲದೆ ಪೂರೈಸುವ ನೀತಿಯನ್ನು ರೂಪಿಸಬಹುದಲ್ಲವೇ? ಜನವರಿ 16ರಂದು ಆರಂಭವಾದ ಲಸಿಕೆ ಅಭಿಯಾನವು ನಾಲ್ಕು ತಿಂಗಳು ಪೂರೈಸುವ ಈ ಹೊತ್ತಿನಲ್ಲಿಯೂ ಕುಂಟುತ್ತಲೇ ಸಾಗಿದೆ. ಗೊಂದಲ, ಅವ್ಯವಸ್ಥೆ ದಿನ ಕಳೆದಂತೆ ಹೆಚ್ಚುತ್ತಲೇ ಇದೆ. ಲಸಿಕೆ ಅಭಿಯಾನವನ್ನು ನಿರ್ವಹಿಸುವುದಕ್ಕಾಗಿ ಕೋವಿನ್ ಎಂಬ ಪೋರ್ಟಲ್ ಸಿದ್ಧಪಡಿಸಲಾಗಿದೆ; ಯಾವ ಗೊಂದಲವೂ ಇಲ್ಲದೆ ಅಭಿಯಾನ ನಡೆಯಲಿದೆ ಎಂದು ಸರ್ಕಾರ ಹೇಳಿತ್ತು. ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡ ಜನರು ಲಸಿಕೆ ಕೇಂದ್ರಕ್ಕೆ ಹೋದರೆ ಹಲವೆಡೆ 'ಲಸಿಕೆ ಇಲ್ಲ' ಎಂಬ ಫಲಕವಷ್ಟೇ ಕಾಣಿಸುತ್ತದೆ. ಎರಡನೇ ಡೋಸ್ ಹಾಕಿಸಿಕೊಳ್ಳುವವರಿಗೂ ಲಸಿಕೆ ಸಿಗುತ್ತಿಲ್ಲ. 70-80 ವರ್ಷ ವಯಸ್ಸಾಗಿರುವ ಹಿರಿಯ ನಾಗರಿಕರು ಲಸಿಕೆ ಕೇಂದ್ರದ ಮುಂದೆ ಇಡೀ ದಿನ ಕಾಯುವಂತಹ ಪರಿಸ್ಥಿತಿ ಇದೆ. ಅಲ್ಲಿ ಅಂತರ ಕಾಯ್ದುಕೊಳ್ಳುವಿಕೆಯೂ ಇಲ್ಲದೆ ಕೋವಿಡ್ ಹರಡುವ ಅಪಾಯವೂ ದಟ್ಟವಾಗಿದೆ. 45 ವರ್ಷ ದಾಟಿದವರಿಗೆ ಉಚಿತವಾಗಿ ಲಸಿಕೆ ಪೂರೈಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಈ ವರ್ಗದ ಎಲ್ಲರಿಗೆ ಲಸಿಕೆ ಪೂರೈಸುವುದಕ್ಕೂ ಮುನ್ನವೇ 18 ದಾಟಿದ ಎಲ್ಲರೂ ಲಸಿಕೆಗೆ ಅರ್ಹರು ಎಂದು ಘೋಷಿಸಲಾಗಿದೆ. ಈ ವರ್ಗದ ಕೆಲವರಿಗಷ್ಟೇ ಲಸಿಕೆ ನೀಡಿದ ಬಳಿಕ ಹೆಚ್ಚಿನ ರಾಜ್ಯಗಳು, '18 ದಾಟಿದವರಿಗೆ ಸದ್ಯಕ್ಕೆ ಲಸಿಕೆ ಇಲ್ಲ' ಎಂದು ಪ್ರಕಟಿಸಿವೆ. ಇದು ಸಾಲದು ಎಂಬಂತೆ, ಲಸಿಕೆ ನೀತಿಗೆ ಸಂಬಂಧಿಸಿ ಸರ್ಕಾರ ಆಗಾಗ ಹೊರಡಿಸುವ ಸೂಚನೆಗಳು ಜನರಲ್ಲಿ ಲಸಿಕೆ ಬಗ್ಗೆ ಇರುವ ನಂಬಿಕೆಯೇ ಕುಂದುವಂತೆ ಮಾಡಿವೆ. ಮೊದಲ ಡೋಸ್ ಪಡೆದುಕೊಂಡ 28 ದಿನಗಳ ಬಳಿಕ ಎರಡನೇ ಡೋಸ್ ಹಾಕಿಸಿಕೊಳ್ಳಬೇಕು ಎಂದು ಮೊದಲು ಹೇಳಲಾಗಿತ್ತು. ಬಳಿಕ, 6 ವಾರಗಳ ಅಂತರದಲ್ಲಿ ಎರಡನೇ ಡೋಸ್ ತೆಗೆದುಕೊಳ್ಳಬೇಕು ಎನ್ನಲಾಯಿತು. ಈಗ, ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಅನ್ನು 12ರಿಂದ 16 ವಾರಗಳ ಅಂತರದಲ್ಲಿ ತೆಗೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ. ಲಸಿಕೆ ಕೊರತೆಯನ್ನು ಮುಚ್ಚಿಡುವುದಕ್ಕಾಗಿಯೇ ಇಂತಹ ಬದಲಾವಣೆ ಮಾಡಲಾಗುತ್ತಿದೆ ಎಂಬ ಅನುಮಾನಕ್ಕೆ ಇದು ಕಾರಣವಾಗಿದೆ. ಕೋವಿಡ್‌ನಿಂದ ಚೇತರಿಸಿಕೊಂಡವರು ಆರು ತಿಂಗಳ ನಂತರವಷ್ಟೇ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಹೇಳಿದೆ. ಮೊದಲ ಡೋಸ್ ಹಾಕಿಸಿಕೊಂಡ ಬಳಿಕ ಕೋವಿಡ್‌ಗೆ ಒಳಗಾದವರು ಏನು ಮಾಡಬೇಕು? ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ, ಆರು ತಿಂಗಳ ಮೊದಲೇ ಎರಡೂ ಡೋಸ್ ಹಾಕಿಸಿಕೊಂಡವರ ಸ್ಥಿತಿ ಏನು? ದಿನಕ್ಕೊಂದು ನೀತಿ ಜಾರಿಗೆ ತರುವುದನ್ನು ನೋಡಿದರೆ ಸರ್ಕಾರವು ಜನರ ಜೀವದ ಜತೆ ಚೆಲ್ಲಾಟ ಆಡುತ್ತಿದೆ ಎಂದು ಅನಿಸದೇ? 'ಲಸಿಕೆ ನೀತಿಯನ್ನು ವಿಜ್ಞಾನಿಗಳು ಮತ್ತು ಪರಿಣತ ವೈದ್ಯರು ರೂಪಿಸಿದ್ದಾರೆ. ಹಾಗಾಗಿ ನ್ಯಾಯಾಂಗದ ಮಧ್ಯಪ್ರವೇಶ ಬೇಡ' ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರವು ಇತ್ತೀಚೆಗೆ ತಿಳಿಸಿದೆ. ಪರಿಣತರು ರೂಪಿಸಿದ ನೀತಿಯಲ್ಲಿ ಇಷ್ಟೊಂದು ಗೊಂದಲಗಳು ಇವೆ ಎಂದಾದರೆ ಅದಕ್ಕೆ ಅರ್ಥವೇನು? ತಮ್ಮನ್ನು ಆಳುವುದಕ್ಕಾಗಿ ಆರಿಸಿ ಕಳುಹಿಸಿದ ಪೌರರಿಗೆ ಉತ್ತರ ಹೇಳುವ ಹೊಣೆಗಾರಿಕೆಯನ್ನಾದರೂ ಸರ್ಕಾರ ನಿಭಾಯಿಸಬೇಕು.

ದಿನದ ಟ್ವೀಟ್

ಸುಳ್ಳು ಹೇಳಿದವರು...

ಚಾಮರಾಜನಗರದ 24 ಜನರ ದಾರುಣ ಸಾವಿಗೆ ಆಕ್ಸಿಜನ್ ಕೊರತೆಯೇ ಕಾರಣ ಎಂದು ಹೈಕೋರ್ಟ್ ನೇಮಿಸಿದ್ದ ಮೂವರು ಸದಸ್ಯರ ಸಮಿತಿ ವರದಿಯಲ್ಲಿ ಅಭಿಪ್ರಾಯಪಟ್ಟಿದೆ. ಯಾವುದೇ ರೀತಿಯ ತನಿಖೆ ಮಾಡದೆ, ಮೂರು ಜನ ಮಾತ್ರ ಆಕ್ಸಿಜನ್ ಕೊರತೆಯಿಂದ ಸತ್ತಿದ್ದಾರೆ ಮತ್ತು ಇತರರದು ಕೋವಿಡ್ ಸಹಜ ಸಾವೆಂದು ಘೋಷಿಸಿದ ಸರ್ಕಾರ ಮತ್ತು ಜಿಲ್ಲಾಡಳಿತ ಸುಳ್ಳು ಹೇಳಿವೆ ಎಂದಾಯಿತು. ಇವರಿಗೆ ಶಿಕ್ಷೆಯಾಗುವುದೇ?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 14-5-1996

- **ಪ್ರಧಾನಿ ಹುದ್ದೆಗೆ ಜ್ಯೋತಿ ಬಸು ರಾಷ್ಟ್ರೀಯ- ಎಡರಂಗದ ಅಭ್ಯರ್ಥಿ**

ನವದೆಹಲಿ, ಮೇ 13- ಕೇಂದ್ರದಲ್ಲಿ ಸರ್ಕಾರ ರಚಿಸಲು ಯತ್ನಿಸುತ್ತಿರುವ ರಾಷ್ಟ್ರೀಯ ರಂಗ- ಎಡರಂಗಗಳ ಕೂಟ ಇಂದು ರಾತ್ರಿ ತುರ್ತು ಸಭೆ ಸೇರಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು ಅವರನ್ನು ಪ್ರಧಾನಿ ಪದವಿಗೆ ಒಮ್ಮತದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದೆ.

ತುರ್ತಾಗಿ ಕರೆದ ಮೂರನೇ ರಂಗದ ಪ್ರಮುಖ ನಾಯಕರ ಸಭೆಯಲ್ಲಿ ಪ್ರಧಾನಿ ಪದವಿಗೆ ಜ್ಯೋತಿ ಬಸು ಅವರ ಹೆಸರನ್ನು ಮಾಜಿ ಪ್ರಧಾನಿ ವಿಶ್ವನಾಥ ಪ್ರತಾಪ್ ಸಿಂಗ್ ಅವರು ಸೂಚಿಸಿದರು. ಸೂಚನೆಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಜ್ಯೋತಿ ಬಸು ಅವರೂ ಈ ಸಭೆಯಲ್ಲಿ ಹಾಜರಿದ್ದರು.

- **ಬಿಜೆಪಿ ಸರ್ಕಾರ ಖಚಿತ: ಅಟಲ್**

ನವದೆಹಲಿ, ಮೇ 13 (ಪಿಟಿಐ)- ರಾಷ್ಟ್ರೀಯ ರಂಗ ಹಾಗೂ ಕಾಂಗ್ರೆಸ್ ಎಷ್ಟೇ ಪ್ರಯತ್ನಿಸಿದರೂ ಬಿಜೆಪಿ ಸರ್ಕಾರ ರಚಿಸುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ ಹೇಳಿದ್ದಾರೆ.

ಇಂದು ಬೆಳಿಗ್ಗೆ ಪ್ರಕಾಶ್‌ಸಿಂಗ್ ಬಾದಲ್ ನೇತೃತ್ವದ ಅಕಾಲಿದಳದ ನಿಯೋಗ ತಮ್ಮನ್ನು ಭೇಟಿ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

50 ವರ್ಷಗಳ ಹಿಂದೆ

ಶುಕ್ರವಾರ, 14-5-1971

- **ಸಾಮಾನ್ಯ ವಿಮೆ ರಾಷ್ಟ್ರೀಕರಣ- ರಾಷ್ಟ್ರಪತಿ ಸುಗ್ರೀವಾಜ್ಞೆ: 106 ಸಂಸ್ಥೆಗಳ ಆಡಳಿತಕ್ಕೆ ಕಾರ್ಪೊರೇಷನ್**

ನವದೆಹಲಿ, ಮೇ 13- ರಾಷ್ಟ್ರದ ಸಾಮಾನ್ಯ ವಿಮೆ ಉದ್ಯಮವನ್ನು ಕೇಂದ್ರ ಸರ್ಕಾರ ಇಂದು ರಾಷ್ಟ್ರೀಕರಿಸಿತು.

ಭಾರತದಲ್ಲಿ ಈಗ ಕಾರ್ಯ ನಿರತವಾಗಿರುವ ಸಾಮಾನ್ಯ ವಿಮೆ ಸಂಸ್ಥೆಗಳ ಆಡಳಿತವನ್ನು ತತ್‌ಕ್ಷಣದಿಂದ ಕೇಂದ್ರ ಸರ್ಕಾರ ವಹಿಸಿಕೊಂಡಿದೆ.

ಇದಕ್ಕೆ ಸಂಬಂಧಿಸಿದ ಸುಗ್ರೀವಾಜ್ಞೆಯೊಂದನ್ನು ರಾಷ್ಟ್ರಪತಿ ಇಂದು ಹೊರಡಿಸಿದರು. ಈ ಸುಗ್ರೀವಾಜ್ಞೆಯಿಂದ ರಾಷ್ಟ್ರದಲ್ಲಿನ ನಲವತ್ತೆರಡು ವಿದೇಶಿ ಸಾಮಾನ್ಯ ವಿಮೆ ಸಂಸ್ಥೆಗಳು ಹಾಗೂ ಅರವತ್ನಾಲ್ಕು ಭಾರತೀಯ ಸಾಮಾನ್ಯ ವಿಮೆ ಸಂಸ್ಥೆಗಳ ಆಡಳಿತವು ಸರ್ಕಾರದ ಹತೋಟಿಗೆ ಬಂದಿದೆ.

- **ಸಂಸ್ಥಾ ಕಾಂಗ್ರೆಸ್ ಹೊಸ ಅಧ್ಯಕ್ಷರ ಒಮ್ಮತದ ಆಯ್ಕೆ ಯತ್ನ ವಿಫಲ**

ಮುಂಬೈ, ಮೇ 13- ಸಂಸ್ಥಾ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯ ಆಯ್ಕೆ ವಿಚಾರದಲ್ಲಿ ಕಾರ್ಯಕಾರಿ ಸಮಿತಿಯು ಇಂದು ಸರ್ವಸಮ್ಮತ ನಿರ್ಧಾರಕ್ಕೆ ಬರಲಾಗದೆ ಹೊಸ ಅಧ್ಯಕ್ಷರ ಚುನಾವಣೆಯ ವಿಷಯವನ್ನು ಎಐಸಿಸಿಗೇ ಬಿಡಲು ನಿರ್ಧರಿಸಿತು.

ಪಕ್ಷದ ಹೊಸ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರಗಳನ್ನು ಆಹ್ವಾನಿಸಲೂ ಕಾರ್ಯಕಾರಿ ಸಮಿತಿಯು ನಿರ್ಧರಿಸಿತು.

ಧರ್ಮವನ್ನು ಒಂದು ಪದ್ಧತಿಯಂತೆ ಆಚರಿಸಿದರೆ ಬದುಕಿಗೆ ಬೇಕಾದ ಸ್ಫೂರ್ತಿ ಎಲ್ಲಿಂದ ಬರಬೇಕು?

ಕ್ರಾಂತಿಪಥ ಮತ್ತು ಪ್ರಗತಿಪಥ

ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆಂದೆನಬೇಡ,
ಮುಂದಣ ಫಲದೊಳಗರಸಿಕೋ!
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆಂದೆನಬೇಡ,
ಮುಂದಣ ಬಣ್ಣದೊಳಗರಸಿಕೋ!
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆಂದೆನಬೇಡ,
ಮುಂದಣ ಅಗ್ನಿಯೊಳಗರಸಿಕೋ!
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ.
ಇದು ಕಾರಣ, ಕೂಡಲ ಚೆನ್ನಸಂಗನ ಶರಣರ
ಪಾದ ಪ್ರತಿಬಿಂಬದೊಳಗರಸಿಕೋ!
ಸಂಗನ ಬಸವಣ್ಣಾ!

ಜಾಗತಿಕ ಮಟ್ಟವನ್ನು ತಲುಪುವಂತಹ ಸಿದ್ಧಾಂತಕ್ಕೆ ಸೇರಿದವರು ನಾವು. ಈ ಬಗ್ಗೆ ಒಂದು ಒಳನೋಟ- ಸಮುದ್ರ ಮತ್ತು ನದಿಯೊಂದರ ಪಾತ್ರ. ಸಮುದ್ರವು ಈ ಭೂಮಿಯ ಮುಕ್ಕಾಲು ಭಾಗವನ್ನು ವ್ಯಾಪಿಸಿದೆ. ಎಲ್ಲ ನದಿಗಳು ಹುಟ್ಟಿ ಸಮುದ್ರವನ್ನು ಸೇರುತ್ತವೆ. ಸಮುದ್ರಕ್ಕೆ ಎಷ್ಟು ನದಿಗಳ ನೀರಾದರೂ ಸಾಲದು. ಏಕೆಂದರೆ, ಅದರದು ಅಷ್ಟು ಆಳ, ವಿಶಾಲ. ಸಮುದ್ರವು ಎಲ್ಲ ನದಿಗಳ ನೀರನ್ನು ತನ್ನೊಳಗೆ ಅಡಗಿಸಿಕೊಳ್ಳುತ್ತ ಉಬ್ಬಿ ಅಲೆಯುತ್ತದೆ.

ಸಮುದ್ರಕ್ಕೆ ಕೇಳಿದೆ- 'ನೀನು ಇಷ್ಟೊಂದು ವಿಶಾಲವಾಗಿರುವೆ. ನಿನ್ನ ಆಳ ಅದೆಷ್ಟು ಗಹನವಾದುದು. ಎಲ್ಲ ನದಿಗಳ ನೀರನ್ನು ನಿನ್ನೊಳಗೆ ಗರ್ಭೀಕರಿಸಿಕೊಳ್ಳುವ ನೀನು, ಶ್ರೀಸಾಮಾನ್ಯನಿಗೆ ಅದೆಷ್ಟು ಉಪಕಾರಿ? ಹಲವು ದೇಶಗಳ, ಕೆಲವು ದೊರೆಗಳ ಮತ್ತು ಧಣಿಗಳ ಹಡಗುಗಳು ಹೋಗಲು ಬರಲು ಮಾತ್ರ ಅವಕಾಶ ಮಾಡಿಕೊಟ್ಟಿರುವೆ. ಮೀನುಗಾರರಿಗೆ ಒಂದಷ್ಟು ಆಧಾರವಾಗಿರುವೆ. ನಿನ್ನೊಳಗೆ ಲೆಕ್ಕವಿಲ್ಲದಷ್ಟು ಜಲಚರಗಳು. ಇಷ್ಟು ಹೊರತುಪಡಿಸಿದರೆ ನೀನೆಷ್ಟು ಪ್ರಯೋಜನಕಾರಿ?' ಹೀಗೆ ಸಮುದ್ರದ ಸ್ವಾಭಿಮಾನವನ್ನು ಕೆಣಕುತ್ತ ನದಿ ಅಥವಾ ಹೊಳೆಯೊಂದರ ಉದಾಹರಣೆಯನ್ನು ಕೊಡುತ್ತ ಹೋದೆ.

'ನೋಡು, ಆ ಹೊಳೆಯು ತನ್ನ ಉಗಮದಿಂದ ಹಿಡಿದು ನಿನ್ನನ್ನು ಸೇರುವವರೆಗೂ ಜುಳುಜುಳು ಹರಿಯುತ್ತ ಪ್ರಾಣಿ-ಪಕ್ಷಿಗಳಿಗೆ ಆಶ್ರಯವನ್ನು ಕೊಡುತ್ತ, ಅವುಗಳಿಗೆ ನೀರನ್ನು ಉಣಿಸುತ್ತ ಸಾಗುತ್ತದೆ. ಮಾತ್ರವಲ್ಲದೆ, ಅದೆಷ್ಟೋ ಹೊಲಗದ್ದೆಗಳನ್ನು ತೋಯಿಸುತ್ತ ಮಾನವನ ಹೊಟ್ಟೆಯನ್ನು ತುಂಬಿಸುತ್ತದೆ. ಹೊಳೆಯ ನೀರು ಎಲ್ಲ ದೃಷ್ಟಿಯಿಂದಲೂ ಸರ್ವೋಪಯೋಗಿ. ನಿನ್ನ ನೀರನ್ನು ಗುಬ್ಬಿಯು ಸಹ ಕುಡಿಯುವುದಿಲ್ಲ'. ನನ್ನ ಸಮರ್ಥನೆಗೆ ಇಷ್ಟು ಸಾಕು.

ಒಂದು ದಿನ ಜೋರಾಗಿ ಹರಿದು ನಿಧಾನವಾಗಿ ಸಮುದ್ರವನ್ನು ಸೇರುವಂತೆ, ಚಿಕ್ಕದಾಗಿ ಆರಂಭವಾಗುವ ಸಿದ್ಧಾಂತಗಳು ಆಯಾ ಧರ್ಮಗಳ ದಾರ್ಶನಿಕರ ಪ್ರಯತ್ನದಿಂದಾಗಿ ಜಾಗತಿಕ ಧರ್ಮಗಳಾಗಿ ಮಾರ್ಪಟ್ಟಿವೆ. ನಾನು ಪ್ರತಿನಿಧಿಸುವಂತಹ ಸಿದ್ಧಾಂತವು ಒಂದು ಹೊಳೆಯಂತೆ ಜೀವಸಂಕುಲವನ್ನು ತಣಿಸುತ್ತ ಹೋಗುತ್ತದೆ. ಒಂದು ಕ್ರಾಂತಿ ಆಧಾರಿತ ಸಿದ್ಧಾಂತವು ಜಾಗತಿಕ ಮಟ್ಟದಲ್ಲಿ ಗುರುತಿಸಲಾಗದಿದ್ದರೂ ಜಾಗತಿಕ ಧರ್ಮ ಅನಿಸಿಕೊಳ್ಳುವ ಎಲ್ಲ ಅರ್ಹತೆಗಳು ಅದಕ್ಕಿವೆ. ಹೀಗಿರುವಾಗ ಕೀಳರಿಮೆಗೆ ಯಾಕೆ ಒಳಗಾಗಬೇಕು?

ದೊಡ್ಡ ನದಿಗಳು ಸಮುದ್ರವನ್ನು ಸೇರುತ್ತ ತೃಪ್ತಿಪಟ್ಟುಕೊಂಡರೆ, ಒಂದು ಹೊಳೆಯು ನಿತ್ಯೋಪಯೋಗಿ ಆಗುತ್ತ ಧನ್ಯತೆಯನ್ನು ಅನುಭವಿಸುತ್ತದೆ. ಶರಣ ಅಥವಾ ಬಸವ ಸಿದ್ಧಾಂತವು ಹೊಳೆಯಂತೆ ಅಥವಾ ನದಿಯಂತೆ. ನಾವುಗಳು ಅಂಥ ಕ್ರಾಂತಿ ಗಂಗೋತ್ರಿಗೆ ಸೇರಿದವರು. ಬಸವಾದಿ ಶರಣರು ನಡೆಸಿದಂತಹ ಕ್ರಾಂತಿ. ನದಿಯೊಂದು ಸಮುದ್ರವನ್ನು ಸೇರುತ್ತಲೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಹೊಳೆಯು ಸಮುದ್ರವನ್ನು ಸೇರದೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ.

ಜಾಗತಿಕ ಧರ್ಮದ ಜೊತೆಯಲ್ಲಿ ಗುರುತಿಸಿಕೊಳ್ಳಲು ಬಹುತೇಕರು ಹಾತೊರೆಯುತ್ತಾರೆ. ಅಸ್ತಿತ್ವವನ್ನು ತೋರಿಸಲು ಜಾಗತಿಕ ಮಟ್ಟದ ಧರ್ಮವೇ ಆಗಬೇಕೆಂದು ಅನಿಸುವುದಿಲ್ಲ. ಕ್ರಾಂತಿಯ ಹಿನ್ನೆಲೆ ಸಾಕು. ಅಷ್ಟರಿಂದಲೇ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು; ಬೇರೆಯವರನ್ನು ಉಳಿಸಬಹುದು.

ಜಾಗತಿಕ ಧರ್ಮಗಳು ಜಗತ್ತಿನಾದ್ಯಂತ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಹೋರಾಡಲಿ. ವಿರಳಾತಿ ವಿರಳವಾದ ಬಸವತತ್ವವು ರಾಜ್ಯ ಮತ್ತು ರಾಷ್ಟ್ರವನ್ನು ದಾಟಿ ಹೊರರಾಷ್ಟ್ರಗಳಿಗೆ ತಲುಪಬೇಕು. ಬಸವಣ್ಣ ಮತ್ತವರ ಸಮಕಾಲೀನ ಶರಣರ ಮಾನವೀಯತೆ ಹಾಗೂ ಸಮಾನತೆಗಾಗಿ ನಡೆಸಿದ ಹೋರಾಟವನ್ನು ಜನ ಅರಿಯುವಂತಾಗಬೇಕು. ಅಸಂಖ್ಯಾತ ಹೃದಯಗಳನ್ನು ಬಡಿದೆಬ್ಬಿಸುವ ಶಕ್ತಿಯು ಶರಣರ ಕ್ರಾಂತಿಗಿದೆ. ಜಗತ್ತಿನಲ್ಲಿ ಶೋಷಣೆ, ಅಸಮಾನತೆ ಮತ್ತು ಅಸ್ಪೃಶ್ಯತೆ ಎನ್ನುವ ಶಬ್ದಗಳು ಕೇಳಿಬರುವವರೆಗೂ ಕ್ರಾಂತಿಗಳು ಪ್ರಸ್ತುತ. ಹೌದು, ನಾವೊಂದು ಕ್ರಾಂತಿಯಾಗಬೇಕು, ನಾವೊಂದು ಪಥವಾಗಬೇಕು, ನಾವು ಚಲನಶೀಲ ಆಗಬೇಕು, ನಾವು ಕ್ರಿಯಾಶೀಲ ಆಗಬೇಕು.

ಹೊಟ್ಟೆ ತುಂಬಿದವರು ಶಾಂತಿ ಶಾಂತಿಯೆಂದು ಜಪಿಸುತ್ತಾರೆ. ಅಂಥವರು ಮಾತೆತ್ತಿದರೆ ಟೆನ್ಶನ್ ಎನ್ನುತ್ತಾರೆ. ಎಮೋಷನ್‌ಗೆ ಒಳಗಾಗುತ್ತಾರೆ. ಪ್ರೆಶರ್... ಪ್ರೆಶರ್... ಎಂದು ಪರಿತಪಿಸುತ್ತಾರೆ. ಬಹಿರಂಗದ ಬದುಕನ್ನು ರಣರಂಗವಾಗಿಸಿಕೊಂಡು ಅಂತರಂಗದಲ್ಲಿ ಶಾಂತಿಗೆ ಭಂಗ ತಂದುಕೊಳ್ಳುತ್ತಾರೆ. ತಮ್ಮ ಬದುಕಿನ ಸಮಸ್ಯೆಗಳೇ ತಮಗೆ ಭಾರವಾಗಿರುವಾಗ ಸಮಾಜವನ್ನು, ನೆರೆಹೊರೆಯವರನ್ನು, ಅನಾಥರನ್ನು, ದುಃಖಿತರನ್ನು, ಶೋಷಿತರನ್ನು ಎಲ್ಲಿ ನೋಡುತ್ತಾರೆ?

ಜಗತ್ತಿನಲ್ಲಿ ಅದೆಷ್ಟೋ ಹೋರಾಟಗಳು ನಡೆದಿವೆ. ಪರಿವರ್ತನಾಮುಖಿ ಕ್ರಾಂತಿಗಳು ನಡೆಯುತ್ತಲೇ ಇವೆ. ಅವು ನಿರಂತರ. ಜಾಗತಿಕ ಧರ್ಮದ ಪಟ್ಟಿಯಲ್ಲಿ ಇವುಗಳಿಗೆ ಸ್ಥಾನ ಇಲ್ಲದಿರಬಹುದು. ಆದರೆ ಹೋರಾಟಗಳೇ ಇಲ್ಲವೆಂದು ಹೇಳಲು ಬರುವುದಿಲ್ಲ. ಹೋರಾಟಗಳು ಮಾನವ ಬದುಕಿನಲ್ಲಿ ಸ್ವಂತಿಕೆಯನ್ನು ಮೂಡಿಸುತ್ತವೆ. ಸ್ವತಂತ್ರ ವಿವೇಚನೆಯನ್ನು ಜಾಗೃತಗೊಳಿಸುತ್ತವೆ. ತನ್ಮೂಲಕ ಸ್ವಾಭಿಮಾನಪೂರ್ಣವಾದ ಬದುಕನ್ನು ಕಟ್ಟಿಕೊಡುತ್ತವೆ.

ಬಸವಧರ್ಮವು ಕ್ರಾಂತಿಯೂ ಹೌದು; ಒಂದು ಸಿದ್ಧಾಂತವೂ ಹೌದು. ಧರ್ಮವು ಅನೇಕ ಸಲ ಕ್ರಾಂತಿಯಾಗದಿರಬಹುದು; ಇಲ್ಲಿ ಕ್ರಾಂತಿಯು ಧರ್ಮವಾಗಿದೆ; ಸಿದ್ಧಾಂತವಾಗಿದೆ. ಧರ್ಮವನ್ನು ಒಂದು ಪದ್ಧತಿಯಂತೆ ಆಚರಿಸಿದರೆ ಬದುಕಿಗೆ ಬೇಕಾದ ಸ್ಫೂರ್ತಿ ಎಲ್ಲಿಂದ ಬರಬೇಕು? ಬದುಕನ್ನು ನಿರಂತರ ಕ್ರಿಯೆಗೆ ಒಡ್ಡಿಕೊಂಡಾಗ ಸ್ಫೂರ್ತಿಯ ಸೆಲೆ ಸದಾ ಚಿಮ್ಮುತ್ತ ಹೋಗುತ್ತದೆ. ಕ್ರಾಂತಿಯು ಮತ್ತೆಮತ್ತೆ ಹೊಸಹೊಸ ವಿಚಾರಗಳಿಗೆ, ಹೊಸ ಅನ್ವೇಷಣೆಗೆ ನಮ್ಮನ್ನು ತೊಡಗಿಸುತ್ತದೆ.

ಧರ್ಮವು ಮತಾಂಧತೆಗೆ ಒಳಗಾಗಬಾರದು. ಜಾಗತಿಕ ಧರ್ಮಗಳು ಜಗತ್ತಿನಾದ್ಯಂತ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ. ಎಲ್ಲೆಡೆ ಅವುಗಳ ಪ್ರಭಾವ. ಧರ್ಮಗಳ ಹಿಡಿತದಿಂದಾಗಿ, ಸಣ್ಣಪುಟ್ಟ ಕ್ರಾಂತಿಗಳು ಗೌಣ ಆಗುತ್ತವೆ. ಧರ್ಮವು ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾಗುತ್ತದೆ. ಕ್ರಾಂತಿಯು ಇತಿಹಾಸವನ್ನು ಸೇರುತ್ತದೆ. ಏಕೆಂದರೆ, ಕ್ರಾಂತಿಯು ಇತಿಹಾಸವನ್ನು ನಿರ್ಮಿಸುತ್ತದೆ. ಧರ್ಮಗಳು ಸಂಪ್ರದಾಯಗಳಾಗಿ ಮಾರ್ಪಡುವುದರಿಂದ ಕ್ರಾಂತಿಯನ್ನು ಹುಟ್ಟುಹಾಕುವ ಗೋಜಿಗೆ ಹೋಗಲಾರವು. ಆಯಾ ದಾರ್ಶನಿಕರು ಪ್ರತಿಪಾದಿಸಿದ ವಿಚಾರಗಳು ಬಳಿಕ ಧರ್ಮದ ಸ್ವರೂಪವನ್ನು ಪಡೆದುಕೊಳ್ಳುತ್ತವೆ.

ಹೆಮ್ಮೆಯಿಂದ ನಾವು ಹೇಳೋಣ- ಸಂಪ್ರದಾಯವಾದಕ್ಕೆ ಸೇರಿದವರು ನಾವಲ್ಲ; ಪರಿವರ್ತನಾಪರವಾದ ಕ್ರಾಂತಿಗೆ ಸೇರಿದವರು ನಾವು ಎಂದು. ಬಸವಾದಿ ಶರಣರ ತತ್ವಗಳೇ ಇಲ್ಲಿ ಸಂವಿಧಾನ. ಇದಕ್ಕೆ ಪೂರಕವಾಗಿವೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದ ಆಶಯಗಳು.

ನಾವೆಂದಿಗೂ ಕೀಳರಿಮೆಯಿಂದ ಬಳಲಬಾರದು. ಏಕೆಂದರೆ, ಕ್ರಾಂತಿಯೊಂದಕ್ಕೆ ಕೀಳರಿಮೆ-ಮೇಲರಿಮೆಯನ್ನು ಕಿತ್ತುಹಾಕುವ ಶಕ್ತಿಯಿದೆ. ಶೋಷಣೆಯನ್ನು ವಿಮೋಚಿಸಲೆಂದೇ ಶರಣರು ಬಸವತತ್ವವೆಂಬ ಹರಿತವಾದ ಖಡ್ಗವನ್ನು ಕೊಟ್ಟಿದ್ದಾರೆ.

110 ವರ್ಷಗಳ ಹಿಂದೆ ದಾವಣಗೆರೆ ವಿರಕ್ತಮಠದ ಪೂಜ್ಯ ಮೃತ್ಯುಂಜಯಪ್ಪಗಳು ಮತ್ತು ಹರ್ಡೇಕರ್ ಮಂಜಪ್ಪನವರು ಕೂಡಿಕೊಂಡು ಜಯದೇವ ಶ್ರೀಗಳ ಆಶಯದಂತೆ ಬಸವ ಜಯಂತಿ ಆಚರಣೆಗೆ ಚಾಲನೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಚುರುಮುರಿ

ಏಟು ತಿರುಗೇಟು!

• ಬಿ.ಎನ್.ಮಲ್ಲೇಶ್

'**ಹಲೋ...** ಮಿನಿಸ್ಟ್ರು ಸಾಹೇಬ್ರಿಗೆ ನಮಸ್ಕಾರ. ನಾನ್ಸಾ ಟಿ.ವಿ ರಿಪೋರ್ಟ್ರು ತೆಪರೇಸಿ ಮಾತಾಡ್ತಿರೋದು, ಕೊರೊನಾ ಕಂಟ್ರೋಲ್ ಎಲ್ಲಿಗೆ ಬಂತು ಸಾ...'

'ಸತ್ತೋರಿಗೆ ಫ್ರೀ ಆಂಬುಲೆನ್ಸ್ ಮಾಡೀವಿ, ನೂರು ಹೆಣ ಒಟ್ಟಿಗೇ ಸುಡೋ ಅಷ್ಟು ದೊಡ್ಡ ಸ್ಮಶಾನ ಮಾಡೀವಿ, ಕಟ್ಟಿಗೆ ಫ್ರೀ ಕೊಡ್ತೀವಿ... ಸ್ಮಶಾನಕ್ಕೆ ಬಂದೋರಿಗೆ ತಿಂಡಿ, ಚಾ ವ್ಯವಸ್ಥೆ ಮಾಡೀವಿ...'

'ಅದು ಸತ್ತೋರಿಗಾತು, ಬದುಕಿರೋರಿಗೆ ಏನ್ಮಾಡಿದೀರಿ?'

'ಬದುಕಿರೋರಿಗೆ ಲಾಕ್‌ಡೌನ್ ಮಾಡೀವಿ, ಆಸ್ಪತ್ರೆಗೆ ಬಂದರೆ ಬೆಡ್ಡು, ಆಕ್ಸಿಜನ್ನು ನಮ್ ಕೈಲಾದಷ್ಟು ಕೊಡುಸ್ತಿದೀವಿ...'

'ಆದ್ರೂ ಜನ ಸಾಯ್ತದಾರಲ್ಲ ಸಾ?'

'ಸಾಯೋರಿಗೆ ನಾ ಏನ್ಮಾಡೋದೈತಪ? ಎದಿ ಒಡೀಬಾರದು. ಅವರಿಗೆ ಪಂಪ್ ಹೊಡೆದು ಧೈರ್ಯ ತುಂಬಾಕೆ ನಮ್ ಕೈಯಾಗೆ ಆಗಲ್ಲ. ಮೊದ್ಲು ನಾವು ಉಳಿದ್ರೆ ಸಾಕಾಗೇತಿ...'

'ಅಲ್ಲ ನೀವೇ ಹಿಂಗಂದ್ರೆ ಹೆಂಗೆ ಸಾ... ಬದುಕಿರೋರಿಗೆ ಲಸಿಕೆ ಕೊಡ್ರಿ ಅಂದ್ರೆ ಸತ್ತೋರ ಸುಡಾಕೆ ಕಟ್ಟಿಗೆ ಕೊಡ್ತೀವಿ ಅಂತೀರಲ್ಲ?'

'ಲಸಿಕೆ ನಮ್ ಕೈಯಾಗಿಲ್ಲ, ಸೆಂಟ್ರಲ್‌ನೋರು ಕೊಡಬೇಕು...'

'ಅಲ್ಲೀತಂಕ ಜನ ಸಾಯ್ತಾನೇ ಇರಬೇಕಾ? ಲಾಕ್‌ಡೌನ್ ಮಾಡ್ತೀರಿ, ನಡಕಂಡು ಓಡಾಡ್ರಿ ಅಂತೀರಿ. ಅರ್ಜೆಂಟ್ ಕೆಲ್ಸಕ್ಕೆ ಅಂತ ಹೊರಗೆ ಬಂದ್ರೆ ಪೊಲೀಸ್ರ ಕೈಯಾಗ ಹೊಡೆಸ್ತೀರಿ... ಒದ್ರೆ ಕೊರೊನಾ ಹೋಕ್ಕತಾ?'

'ಲೇ ತಮಾ, ಟೀವಿ ರಿಪೋರ್ಟ್ರು... ಒಳ್ಳೆ ವಿರೋಧ ಪಕ್ಷದೋರಂಗೆ ಮಾತಾಡ್ತಿಯಲ್ಲೋ... ಎಲ್ಲ ಕಡಿ ಜನ ಬೇಕಾಬಿಟ್ಟಿ ಓಡಾಡ್ತಾರೆ ಲಾಕ್‌ಡೌನ್ ಮಾಡ್ರಿ ಅನ್ನೋರೂ ನೀವಾ, ಬೀದಿಗೆ ಬಂದ ಜನಾನ ಒದ್ರೆ, ಒದೆಯೋಕೆ ನಿಮಗೆ ಅಧಿಕಾರ ಕೊಟ್ಟೋರ್ಯಾರು ಅಂತ ಕೇಳೋರೂ ನೀವಾ... ಈ ಎಲ್ಲ ಸಮಸ್ಯೆಗೆ ಒಂದು ಪರಿಹಾರ ಐತಿ, ಮಾಡ್ತೀರೇನು?'

'ಹೇಳ್ರಿ ಅದೇನ್ ನೋಡೋಣು...'

'ನಿಮ್ ಮೈಕ್ ನಮ್ ಕೈಯಾಗೆ ಕೊಡ್ರಿ, ನಮ್ ಸರ್ಕಾರನ ನಿಮ್ ಕೈಯಾಗ ಕೊಡ್ತೀವಿ, ನೀವಾ ಸರ್ಕಾರ ನಡೆಸ್ರಿ... ಒಪ್ಪಿಗೀನಾ?'

ತೆಪರೇಸಿ ಪಿಟಿಕ್ಕೆನ್ನಲಿಲ್ಲ.

ಸಂಗತ

ಆರ್ಥಿಕತೆಗೆ ಬರ: ಆರೋಗ್ಯಕ್ಕೆ ಬರೆ

ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಗುರಿ ಸಾಧನೆಗೆ ಸಾಮೂಹಿಕ ಪ್ರಯತ್ನ ಅವಶ್ಯಕ

• ಡಾ. ಆರ್.ಆರ್.ಬಿರಾದಾರ

ಕೊರೊನಾ ಮಹಾಸೋಂಕಿನ ಕಾರಣದಿಂದ ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಮತ್ತೆ ಕಟ್ಟುನಿಟ್ಟಿನ ಮತ್ತು ಭಾಗಶಃ ಲಾಕ್‌ಡೌನ್ ಮಾಡಲಾಗಿದೆ. ಇದರಿಂದ, ದೇಶದ ಆರ್ಥಿಕ ಪರಿಸ್ಥಿತಿಯು ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಒಟ್ಟು ಸ್ವದೇಶಿ ಉತ್ಪನ್ನದ ಪ್ರಮಾಣ ಪುನಃ ಕುಸಿಯಲಿದೆ. ಆದ್ದರಿಂದ ಕೊರೊನಾದಂಥ ಸೋಂಕುಗಳನ್ನು ಸೂಕ್ತವಾಗಿ ನಿಯಂತ್ರಿಸಲು ಮತ್ತು ನಿರ್ವಹಣೆ ಮಾಡಲು ಅವಶ್ಯವಾಗಿ ಬೇಕಾದ ಆರೋಗ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಆ ಮೂಲಕ ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಗುರಿಯನ್ನು ನಿಗದಿತ ಅವಧಿಯಲ್ಲಿ ಸಾಧಿಸುವ ಅಗತ್ಯ ಹೆಚ್ಚಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಪ್ರಕಾರ, ಆರೋಗ್ಯವೆಂದರೆ ಕೇವಲ ರೋಗ ಅಥವಾ ಅಶಕ್ತತೆ ಇಲ್ಲದೇ ಇರುವುದಲ್ಲ. ಬದಲಿಗೆ, ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಆರೋಗ್ಯವಾಗಿರುವ ಸ್ಥಿತಿ. ಉತ್ತಮ ಆರೋಗ್ಯವು ಅಭಿವೃದ್ಧಿಯ ಒಂದು ಸಾಧನ ಮತ್ತು ಗುರಿಯಾಗಿದೆ. ಸಾರ್ವತ್ರಿಕ ಆರೋಗ್ಯವೆಂದರೆ ಎಲ್ಲರಿಗೂ ಎಲ್ಲೆಡೆಯೂ ಅಗತ್ಯ ಆರೋಗ್ಯ ಸೇವೆಗಳು ಸಿಗುವಂತೆ ಮಾಡುವುದು ಹಾಗೂ ಕೈಗೆಟಕುವ ದರದಲ್ಲಿ ಅಗತ್ಯ ಔಷಧಿಗಳು, ಲಸಿಕೆಗಳು ಲಭ್ಯವಾಗುವಂತೆ ಕ್ರಮ ಕೈಗೊಳ್ಳುವುದೇ ಆಗಿದೆ. ಸಾರ್ವತ್ರಿಕ ಆರೋಗ್ಯ ರಕ್ಷಣೆಯಿಂದ ಸ್ವಚ್ಛ- ಸ್ವಸ್ಥ ಭಾರತವನ್ನು ಕಟ್ಟಲು ಸಾಧ್ಯ.

ಭಾರತದಲ್ಲಿ ಆರೋಗ್ಯ ಕ್ಷೇತ್ರದಲ್ಲಿನ ಮೂಲ ಸೌಕರ್ಯಗಳು ಮತ್ತು ಉತ್ತಮ ಆರೋಗ್ಯಕ್ಕೆ ಸಂಬಂಧಿಸಿದ ಆರೋಗ್ಯ ಸೂಚಿಗಳು ಬಹಳಷ್ಟು ಕೆಳಮಟ್ಟದಲ್ಲಿವೆ. ವಿಶ್ವಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳಿಗೆ ನಿಗದಿಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಮೂರನೇ ಗುರಿಯು 2030ರೊಳಗೆ ಸಾಧಿಸಬೇಕಾದ ಸಾರ್ವತ್ರಿಕ ಆರೋಗ್ಯ ರಕ್ಷಣಾ ಕ್ರಮಗಳಿಗೆ ಸಂಬಂಧಿಸಿದ್ದಾಗಿದೆ. ಇದಲ್ಲದೆ ದೇಶದ ನೀತಿ ಆಯೋಗ ರಚಿಸಿದ ಉನ್ನತ ಮಟ್ಟದ ತಜ್ಞರ ಸಮಿತಿಯು 2022ರೊಳಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಗುರಿ ಸಾಧನೆಗೆ ಶಿಫಾರಸು ಮಾಡಿದೆ.

ಸುಸ್ಥಿರ ಅಭಿವೃದ್ಧಿ ಗುರಿಯ ಪ್ರಕಾರ, 2030ರೊಳಗೆ ತಾಯಂದಿರು ಹಾಗೂ ಶಿಶುಗಳ ಮರಣ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಬೇಕು. ಜನರ ಜೀವನಾಯುಷ್ಯವೂ 2025ರೊಳಗೆ 67.5 ವರ್ಷಗಳಿಂದ 70 ವರ್ಷಗಳಿಗೆ ಹೆಚ್ಚಬೇಕು. ಆದರೆ ಕೊರೊನಾದಂತಹ ಮಹಾಸೋಂಕು ಅರ್ಥವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದರಿಂದ, ಈ ಗುರಿಗಳನ್ನು ನಿಗದಿತ ಅವಧಿಯಲ್ಲಿ ಸಾಧಿಸಲು ಸಾಧ್ಯವಾಗುವುದಿಲ್ಲ.

ಡಬ್ಲ್ಯುಎಚ್‌ಒ ಪ್ರಕಾರ, ಪ್ರತೀ ಒಂದು ಸಾವಿರ ಜನರಿಗೆ ಒಬ್ಬ ವೈದ್ಯ, 3 ಹಾಸಿಗೆಗಳು ಮತ್ತು ಮೂವರು ದಾದಿಯರು/ಸೂಲಗಿತ್ತಿಯರು ಇರಬೇಕಾಗುತ್ತದೆ. ಆದರೆ ಭಾರತದಲ್ಲಿ ಪ್ರತೀ ಒಂದು ಸಾವಿರ ಜನರಿಗೆ 0.66 ವೈದ್ಯರು, 1.5ರಷ್ಟು ದಾದಿಯರು/ಸೂಲಗಿತ್ತಿಯರು ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ.

ಜಗತ್ತಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಬಹಳಷ್ಟು ಕಡಿಮೆ ಸಂಖ್ಯೆಯಲ್ಲಿ ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಗಳನ್ನು ಹೊಂದಿದೆ. ಪ್ರತೀ ಒಂದು ಲಕ್ಷ ಜನರಿಗೆ ಭಾರತವು 2.3 ಐಸಿಯು ಹಾಸಿಗೆಗಳನ್ನು ಹೊಂದಿದ್ದರೆ, ಈ ಸಂಖ್ಯೆಯು ಜರ್ಮನಿ 34, ಅಮೆರಿಕ 26, ಯು.ಕೆ 10.5, ಫ್ರಾನ್ಸ್ 16 ಮತ್ತು ಚೀನಾದಲ್ಲಿ 3.6ರಷ್ಟಿದೆ.

ಸಾರ್ವಜನಿಕ ಆರೋಗ್ಯ ಮಾನದಂಡದ ಪ್ರಕಾರ, ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿ, ನಿಯಮಾನುಸಾರ ಆರೋಗ್ಯ ಸಿಬ್ಬಂದಿಯನ್ನು ನೇಮಕ ಮಾಡುವುದು ಅವಶ್ಯಕ. ದುರ್ದೈವದ ಸಂಗತಿ ಎಂದರೆ, 2020ರ ಜುಲೈ ವೇಳೆಗೆ ಶೇ 24ರಷ್ಟು ಉಪ ಆರೋಗ್ಯ ಕೇಂದ್ರಗಳು, ಶೇ 29ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಶೇ 38ರಷ್ಟು ಸಮುದಾಯ ಆರೋಗ್ಯ ಕೇಂದ್ರಗಳ ಕೊರತೆಯಿರುವುದು ಕಂಡುಬಂದಿದೆ.

ಭಾರತವು ಆರೋಗ್ಯ ಕ್ಷೇತ್ರದ ಮೇಲೆ ಮಾಡುವ ವೆಚ್ಚ ತುಂಬಾ ಕಡಿಮೆ. ಇದರಿಂದಾಗಿ ಆರೋಗ್ಯದ ಮೂಲಸೌಕರ್ಯಗಳು ಮತ್ತು ಸೇವೆಗಳನ್ನು ಅಗತ್ಯಾನುಸಾರ ಪೂರೈಸಲು ಸಾಧ್ಯವಾಗುತ್ತಿಲ್ಲ. ಇದು ಮುಂಬರುವ ದಿನಗಳಲ್ಲಿ ದೇಶದ ಸುಸ್ಥಿರ ಆರ್ಥಿಕ ಅಭಿವೃದ್ಧಿಯ ಮೇಲೆ ತೀವ್ರ ದುಷ್ಪರಿಣಾಮ ಬೀರಲಿದೆ. ರಾಷ್ಟ್ರೀಯ ಆರೋಗ್ಯ ನೀತಿಯು 2025ರೊಳಗೆ ಆರೋಗ್ಯ ಕ್ಷೇತ್ರದ ಮೇಲಿನ ವೆಚ್ಚವನ್ನು ಜಿಡಿಪಿಯ ಶೇ 2.5ರಷ್ಟಕ್ಕೆ ಹೆಚ್ಚಿಸಲು ಶಿಫಾರಸು ಮಾಡಿದೆ.



ಕೊರೊನಾ ಸೋಂಕಿನ ಎರಡನೇ ಅಲೆಯಿಂದ ಬಳಲುತ್ತಿರುವ ಮತ್ತು ಅದರಿಂದ ಸಾವಿಗೀಡಾಗುವವರ ಸಂಖ್ಯೆ ದಿನೇ ದಿನೇ ವಿಪರೀತವಾಗಿ ಹೆಚ್ಚುತ್ತಿರುವುದರಿಂದ ಸರ್ಕಾರವು ಅಗತ್ಯವಾದ ಆರೋಗ್ಯ ಮೂಲ ಸೌಕರ್ಯ ಮತ್ತು ಸೇವೆಗಳ ಪೂರೈಕೆಯನ್ನು ತ್ವರಿತಗತಿಯಲ್ಲಿ ಮಾಡಬೇಕಿದೆ.

ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ವೇಗ ಮತ್ತು ಜನರ ಜೀವನದ ಗುಣಮಟ್ಟವು ಉತ್ತಮ ಆರೋಗ್ಯ ಮೂಲಸೌಕರ್ಯ, ಆರೋಗ್ಯ ಸೇವೆಗಳ ಲಭ್ಯತೆಯ ಮೇಲೆ ಅವಲಂಬಿತವಾಗಿವೆ. ಆದ್ದರಿಂದ ಇವುಗಳ ಪೂರೈಕೆಯ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರದ ಮೇಲಷ್ಟೇ ಹಾಕುವುದರ ಬದಲು ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಗುರಿ ಸಾಧಿಸುವಲ್ಲಿ ಸಾಮೂಹಿಕ ಪ್ರಯತ್ನ ಮಾಡಬೇಕಾಗಿದೆ. ಖಾಸಗಿ ಆಸ್ಪತ್ರೆಗಳು, ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು, ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆಗಳು ಈ ದಿಸೆಯಲ್ಲಿ ಕೈಜೋಡಿಸಬೇಕಿದೆ. ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆ ಸಹ ಅಷ್ಟೇ ಮುಖ್ಯವಾದುದು.

ವಾಚಕರ ವಾಣಿ

ಸತ್ಯ ಸಾಬೀತು ಮಾಡಿದ ತನಿಖಾ ವರದಿ

ಚಾಮರಾಜನಗರದಲ್ಲಿ ಇತ್ತೀಚೆಗೆ ಒಂದೇ ದಿನ 24 ಕೋವಿಡ್ ರೋಗಿಗಳು ಮೃತಪಟ್ಟ ದುರಂತಕ್ಕೆ ಆಮ್ಲಜನಕದ ಕೊರತೆಯೇ ಕಾರಣ ಎಂದು, ಹೈಕೋರ್ಟ್ ನೇಮಿಸಿದ್ದ ನಿವೃತ್ತ ನ್ಯಾಯಮೂರ್ತಿ ಎ.ಎನ್.ವೇಣುಗೋಪಾಲಗೌಡ ನೇತೃತ್ವದ ಸಮಿತಿಯು ವರದಿ ನೀಡಿದೆ (ಪ್ರ.ವಾ., ಮೇ 13). ಇದರಿಂದ, ಸತ್ಯಕ್ಕೆ ಸಾವಿಲ್ಲ ಎಂಬುದು ತಿಳಿಯುತ್ತದೆ. ಆಮ್ಲಜನಕದ ಕೊರತೆಯಿಂದ ಕೇವಲ ಮೂವರು ವ್ಯಕ್ತಿಗಳು ಮೃತಪಟ್ಟಿದ್ದಾಗಿ ಈ ಮೊದಲು ಆರೋಗ್ಯ ಸಚಿವರು ಹೇಳಿದ್ದರು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಅಧಿಕಾರಿಗಳು, ಶಾಸಕರು ಹಾಗೂ ಸಚಿವರ ವಿಭಿನ್ನ ಹೇಳಿಕೆಗಳು ಗೊಂದಲ ಮೂಡಿಸುತ್ತವೆ. ಆದ್ದರಿಂದ ಹೇಳಿಕೆಗಳನ್ನು ಕೊಡುವಾಗ ಎಲ್ಲರೂ ಜಾಗೃತರಾಗಿದ್ದರೆ ಇಂತಹ ಗೊಂದಲವನ್ನು ತಪ್ಪಿಸಲು ಸಾಧ್ಯ.

ರಾ.ಬಾ.ವರದರಾಜನ್, ಬೆಂಗಳೂರು

ಆಸ್ಪತ್ರೆಗಳಲ್ಲಿ ನಿರ್ಲಕ್ಷ್ಯ ಸಲ್ಲದು

ಆಸ್ಪತ್ರೆಗಳ ವೈದ್ಯಕೀಯ ಸೇವೆಯಲ್ಲಿ ಬೇಜವಾಬ್ದಾರಿತನ ಕಂಡುಬರುತ್ತಿರುವುದು ವಿಷಾದಕರ. ಬೆಂಗಳೂರಿನ ಕೆಲವು ಆಸ್ಪತ್ರೆಗಳಲ್ಲಿ ಕೋವಿಡ್‌ನಿಂದ ಮೃತರಾದವರ ಶವಗಳನ್ನು ನಿರ್ಲಕ್ಷ್ಯದಿಂದಾಗಿ ಅದಲು-ಬದಲು ಮಾಡಿಕೊಡುತ್ತಿರುವುದು ನೋವಿನ ಸಂಗತಿ. ಇದರಿಂದ ಮೃತರ ಕುಟುಂಬ ವರ್ಗದವರಿಗೆ ಎಷ್ಟು ನೋವಾಗಬಹುದು ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸಿಬ್ಬಂದಿ ಕರ್ತವ್ಯ ನಿರ್ವಹಿಸಬೇಕು. ಇಂತಹ ವ್ಯವಸ್ಥೆ ಸರಿಪಡಿಸುವ ಬಗ್ಗೆ ಆಸ್ಪತ್ರೆ ಅಧಿಕಾರಿಗಳು ಗಮನ ಕೊಡಬೇಕು.

ಲಾಕ್‌ಡೌನ್ ಹೇರಿದ್ದರೂ ಕೋವಿಡ್ ಸೋಂಕು ನಿಯಂತ್ರಣಕ್ಕೆ ಬಂದಿಲ್ಲದೇ ಇರುವುದನ್ನು ಜನ ಗಂಭೀರವಾಗಿ ಪರಿಗಣಿಸಬೇಕು. ಸೋಂಕು ನಿಯಂತ್ರಣಕ್ಕೆ ಪೂರಕವಾಗಿ ಸ್ಪಂದಿಸಬೇಕು. ವೈದ್ಯಕೀಯ ಸೇವೆಯಲ್ಲಿ ನಿರ್ಲಕ್ಷ್ಯ ಕಂಡುಬಂದರೆ ಅಂತಹ ಆಸ್ಪತ್ರೆಗಳ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ, ಮುಂದೆ ಇಂತಹ ತಪ್ಪುಗಳಾಗದಂತೆ ಕ್ರಮ ಕೈಗೊಳ್ಳುವ ವ್ಯವಸ್ಥೆ ಆಗಬೇಕು. ವೈದ್ಯರು ದೇವರ ಸಮಾನ, ಆಸ್ಪತ್ರೆಯು ದೇವಮಂದಿರ ಇದ್ದಂತೆ ಎಂಬ ಭಾವನೆ ಜನಸಾಮಾನ್ಯರಲ್ಲಿದೆ. ಇದನ್ನು ಅರಿತು ನಡೆದರೆ ಇಂತಹ ನಿರ್ಲಕ್ಷ್ಯದ ಘಟನೆಗಳು ಮರುಕಳಿಸುವುದಿಲ್ಲ.

ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

ಬೇಕಾಗಿದೆ ವಿಶೇಷ ಪ್ಯಾಕೇಜ್

ಕೋವಿಡ್ -19 ಎರಡನೇ ಅಲೆ ತಡೆಯಲು ಸರ್ಕಾರ ಘೋಷಿಸಿರುವ ಲಾಕ್‌ಡೌನ್‌ನಿಂದಾಗಿ ತೊಂದರೆ ಅನುಭವಿಸುತ್ತಿರುವ ದಿನಗೂಲಿ ಕಾರ್ಮಿಕರ ಕಷ್ಟಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕಾಗಿದೆ. ಇಂತಹ ಕಠಿಣ ಲಾಕ್‌ಡೌನ್ ಸಮಯದಲ್ಲಿ ದಿನಗೂಲಿ ಕಾರ್ಮಿಕರು ಕೆಲಸವಿಲ್ಲದೆ ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನೂ (ನರೇಗಾ) ಲಾಕ್‌ಡೌನ್ ಕಾರಣದಿಂದ ಸ್ಥಗಿತಗೊಳಿಸಿರುವುದು ಖಂಡನೀಯ.

ಲಾಕ್‌ಡೌನ್‌ನಂತಹ ಕಠಿಣ ಸಮಯದಲ್ಲಿ ಉದ್ಯೋಗ ಖಾತರಿ ಯೋಜನೆಯು ಬಡಜನರ ನೆರವಿಗೆ ಬರುತ್ತದೆ. ಆದ್ದರಿಂದ ಸರ್ಕಾರವು ಈ ಯೋಜನೆಯನ್ನು ಕೂಡಲೇ ಪುನರಾರಂಭಿಸಬೇಕು. ಇಲ್ಲವಾದಲ್ಲಿ ದಿನಗೂಲಿ ಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ಘೋಷಿಸಿ, ಪ್ರತೀ ಕೂಲಿ ಕಾರ್ಮಿಕರ ಖಾತೆಗೆ ಕನಿಷ್ಠ ₹ 10 ಸಾವಿರ ಹಾಕಬೇಕು.

ಫಕ್ರುದ್ದೀನ್ ಚನಗ್ಲೇರ್, ಸುಲೇಪೇಟ

ನಿಗದಿತ ಅವಧಿ ಬದಲಾಗಲಿ

ಲಾಕ್‌ಡೌನ್ ಸಂದರ್ಭದಲ್ಲಿ ಸಾರ್ವಜನಿಕರ ಅಗತ್ಯ ವಸ್ತುಗಳ ಖರೀದಿಗಾಗಿ ಸರ್ಕಾರ ಬೆಳಿಗ್ಗೆ 6ರಿಂದ 10ರ ವರೆಗೆ ಸಮಯವನ್ನು ನಿಗದಿ ಮಾಡಿದೆ. ಇದು ಹೆಚ್ಚು ಅನುಕೂಲಕರವಲ್ಲ. ಈ ಸಮಯವನ್ನು ಮಹಾರಾಷ್ಟ್ರದಲ್ಲಿ ಇರುವಂತೆ ಬೆಳಿಗ್ಗೆ 7ರಿಂದ 11 ಗಂಟೆಯವರೆಗೆ ನಿಗದಿಪಡಿಸುವುದು ಒಳ್ಳೆಯದು. ಇದರಿಂದ ಬೀದಿ ಮಾರಾಟಗಾರರಿಗೆ, ಮೀನು- ಮಾಂಸ ವ್ಯಾಪಾರಿಗಳಿಗೆ, ಅಂಗಡಿಕಾರರಿಗೆ ಹೆಚ್ಚು ಉಪಯೋಗವಾದೀತು. ಸಾರ್ವಜನಿಕರಿಗೂ ಅನುಕೂಲವಾದೀತು.

ಚಂದ್ರಕಾಂತ ನಾಮಧಾರಿ, ಅಂಕೋಲಾ

ಬೊಬ್ಬೆ ಹಾಕಿದ್ದು ಯಾರು?

'ಎರಡನೇ ಡೋಸ್‌ಗೆ ಲಸಿಕೆ ಬರಲು ಆರಂಭವಾಗಿದೆ. ಅದಕ್ಕಾಗಿ ಗಾಬರಿ ಬಿದ್ದು ರಾತ್ರಿ ವೇಳೆ ಸರದಿಯಲ್ಲಿ ನಿಂತು ಬೊಬ್ಬೆ ಹೊಡೆಯುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ (ಪ್ರ.ವಾ., ಮೇ 12). ರಾಜ್ಯದಲ್ಲಿ ಲಾಕ್‌ಡೌನ್ ಹೇರಲಾಗಿದೆ. ಹೀಗಾಗಿ ಜನ ರಾತ್ರಿ ವೇಳೆ ಹೊರ ಹೋಗಲು ಸಾಧ್ಯವೇ? ಇನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮಾತ್ರ ಲಸಿಕೆ ನೀಡಲಾಗುತ್ತದೆ. ಹೀಗಾಗಿ ಯಾರೂ ರಾತ್ರಿ ವೇಳೆ ಆಸ್ಪತ್ರೆಗಳಿಗೆ ಬಂದು ಬೊಬ್ಬೆ ಹಾಕುತ್ತಿಲ್ಲ. ಆದರೆ ಲಸಿಕೆ ಪಡೆಯುವ ಸಲುವಾಗಿ ಬೆಳಿಗ್ಗೆ ಬೇಗ ಆಸ್ಪತ್ರೆಗೆ ಓಡುತ್ತಿದ್ದಾರೆ ಅಷ್ಟೆ.

ನನ್ನ ಪರಿಚಯದ 71 ವರ್ಷದ ಹಿರಿಯರು ದಾವಣಗೆರೆಯಲ್ಲಿ ಎರಡನೇ ಡೋಸ್ ಲಸಿಕೆಗಾಗಿ ಕಳೆದ ಐದು ದಿನಗಳಿಂದ ಮುಂಜಾವು 5 ಗಂಟೆಗೆ ಆಸ್ಪತ್ರೆಗೆ ತೆರಳಿ ಸರದಿಯಲ್ಲಿ ನಿಲ್ಲುತ್ತಿದ್ದಾರೆ. ಆದರೆ 9 ಗಂಟೆ ಹೊತ್ತಿಗೆ 'ಲಸಿಕೆ ಇಂದು ಇಲ್ಲ, ಸ್ವಲ್ಪ ಇದೆ' ಎಂದೆಲ್ಲ ಹೇಳಿ ಕಳುಹಿಸುತ್ತಿದ್ದಾರಂತೆ. ತಮ್ಮ ಅನುಭವವನ್ನು ಅವರು ಸ್ಥಳೀಯ ದಿನಪತ್ರಿಕೆಯಲ್ಲಿ ಹಂಚಿಕೊಂಡಿದ್ದರೂ ಏನೂ ಪ್ರಯೋಜನವಾಗಿಲ್ಲ. ಆದರೂ ಅವರು ಛಲ ಬಿಡದ ತ್ರಿವಿಕ್ರಮನಂತೆ ದಿನವೂ ಲಸಿಕೆಗಾಗಿ ಆಸ್ಪತ್ರೆಗೆ ಎಡತಾಕುತ್ತಿದ್ದಾರೆ. 18-44 ವರ್ಷದವರಿಗೆ ಸರ್ಕಾರವು ಲಸಿಕೆಗೆ ದಿನಾಂಕ ನಿಗದಿಪಡಿಸಿ ಮಾಧ್ಯಮಗಳಲ್ಲಿ ಈ ಕುರಿತು ಘೋಷಿಸಿದರೂ ಪದೇ ಪದೇ ನಿಗದಿತ ದಿನಾಂಕವನ್ನು ಮುಂದೂಡುತ್ತಿರುವುದು ಯಾತಕ್ಕೆ? ವ್ಯವಸ್ಥಿತವಾಗಿ ಲಸಿಕೆ ಸರಬರಾಜು ಮತ್ತು ನೀಡಿಕೆ ಆಗಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಲಸಿಕೆ ನೀಡಿಕೆ ಬಗ್ಗೆ ಸರ್ಕಾರ ಪದೇ ಪದೇ 'ಬೊಬ್ಬೆ ಹಾಕಿದ್ದೇ' ಇದಕ್ಕೆಲ್ಲಾ ಕಾರಣ. ಮೊದಲು ಸರ್ಕಾರದ ಕಡೆಯಿಂದ ಇಂತಹ ಬೊಬ್ಬೆ ನಿಲ್ಲಲಿ. ಸರ್ಕಾರದ ಈ ಬೊಬ್ಬೆಯೇ ಜನರ ಮೂಲಕ ಪ್ರತಿಧ್ವನಿಸುತ್ತಿದೆ ಎಂಬುದನ್ನು ಅರಿಯಲಿ. ವ್ಯವಸ್ಥೆ ಮೊದಲು ಸುಧಾರಿಸಲಿ.

ನಿಖಿತಾ ಶಶಾಂಕ್ ಭಟ್, ಹೊಸನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಸ್ರೇಲ್–ಪ್ಯಾಲೆಸ್ಟೀನ್ ಮತ್ತೆ ಹೆಚ್ಚಿದ ಕಿಚ್ಚು

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಸಂಘರ್ಷ ಮತ್ತೆ ತೀವ್ರಗೊಂಡಿದೆ. ರಂಜಾನ್ ಮಾಸ ಆರಂಭವಾಗುತ್ತಿದ್ದಂತೆ, ಏಪ್ರಿಲ್ ಮಧ್ಯ ಭಾಗದಲ್ಲಿ ಗಾಜಾ ಹಾಗೂ ವೆಸ್ಟ್ ಬ್ಯಾಂಕ್‌ಗಳಲ್ಲಿ ರಾತ್ರಿವೇಳೆಯಲ್ಲಿ ನಾಗರಿಕರು ಹಾಗೂ ಪೊಲೀಸರ ನಡುವೆ ಸಂಘರ್ಷಗಳು ನಡೆದಿವೆ.

ಈಗ ಪರಿಸ್ಥಿತಿ ಇನ್ನೂ ಬಿಗಡಾಯಿಸಿದೆ. ಗಾಜಾದ ಮೇಲೆ ಇಸ್ರೇಲ್ ಸೇನೆಯು ಸತತ ದಾಳಿ ನಡೆಸಿದೆ. ಇನ್ನೊಂದೆಡೆ, ಇಸ್ರೇಲ್‌ನ ಬೀದಿಗಳಲ್ಲಿ ಅರಬರು ಮತ್ತು ಯಹೂದಿಗಳ ಸಂಘರ್ಷ ಆರಂಭವಾಗಿದೆ. ಈವರೆಗೆ 17 ಮಕ್ಕಳೂ ಸೇರಿ 60ಕ್ಕೂ ಹೆಚ್ಚು ಜನರು ಸತ್ತಿದ್ದಾರೆ. 400ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ಸೌಮ್ಯಾ ಸಂತೋಷ್ ಎಂಬ ಮಹಿಳೆಯೂ ಪ್ಯಾಲೆಸ್ಟೀನ್ ದಾಳಿಗೆ ಬಲಿಯಾಗಿದ್ದಾರೆ. ಹಲವು ವರ್ಷಗಳ ನಂತರ, ಗಾಜಾ ಮೇಲೆ ಇಸ್ರೇಲ್ ವಾಯು ದಾಳಿ ನಡೆಸಿದೆ. ಗಾಜಾವನ್ನು ನಿಯಂತ್ರಿಸುತ್ತಿರುವುದು ಹಮಸ್ ಎಂಬ ಸಂಘಟನೆ.

ಅದರ ಕಮಾಂಡರ್ ಇಯಾದ್ ತಯೀಲ್ ಅವರ ಮನೆಯ ಮೇಲೆ ದಾಳಿ ನಡೆಸಲಾಗಿದೆ ಎಂದು ಹೇಳಲಾಗಿದೆ. ತಮ್ಮ ಸೇನಾ ಮುಖ್ಯಸ್ಥರೊಬ್ಬರು ದಾಳಿಯಲ್ಲಿ ಹತರಾಗಿದ್ದಾರೆ ಎಂದು ಹಮಸ್ ಹೇಳಿದೆ. ಆದರೆ, ಹಮಸ್‌ನ ಇನ್ನೂ ಮೂವರು ಉನ್ನತ ನಾಯಕರನ್ನು ಕೊಂದಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

ಹಮಸ್ ಸ್ವಾಧೀನದ ಅಲ್ ಅಕ್ಸ ಸುದ್ದಿ ವಾಹಿನಿಯ ಗೋಪುರ ಹೊಂದಿರುವ ಸ್ಥಳವನ್ನು ಇಸ್ರೇಲ್ ಬುಧವಾರ ನಾಶಪಡಿಸಿದೆ. 'ಸೋಮವಾರದಿಂದೀಚೆಗೆ ಪ್ಯಾಲೆಸ್ಟೀನಿಯನ್ನರು ನಮ್ಮ ಪ್ರದೇಶದ ಮೇಲೆ 1,600ಕ್ಕೂ ಹೆಚ್ಚು ರಾಕೆಟ್ ದಾಳಿ ಮಾಡಿದ್ದಾರೆ. ಈ ದಾಳಿಯಲ್ಲಿ ಎರಡು ವರ್ಷದ ಒಂದು ಮಗುವೂ ಸೇರಿದಂತೆ ಏಳು ಮಂದಿ ಪ್ರಾಣ ತೆತ್ತಿದ್ದಾರೆ' ಎಂದು ಇಸ್ರೇಲ್ ಹೇಳಿದೆ.

ಎರಡು ಸೇನೆಗಳ ನಡುವಿನ ಸಂಘರ್ಷದ ಜತೆಗೆ ಆಂತರಿಕವಾಗಿ ಜನರು ಸಹ ಬೀದಿಗಳಲ್ಲಿ ದಂಗೆ ಇಳಿದಿರುವುದು ಆತಂಕಕ್ಕೆ ಕಾರಣವಾಗಿದೆ. ಜನರು ವಿರೋಧಿ ಗುಂಪುಗಳ ಜತೆ ಮಾತ್ರವಲ್ಲದೆ ಭದ್ರತಾ ಪಡೆಗಳ ಜತೆಗೂ ಸಂಘರ್ಷಕ್ಕೆ ಇಳಿಯುತ್ತಿದ್ದಾರೆ. ಇಂಥ ಬೀದಿ ಸಂಘರ್ಷದಲ್ಲಿ ಕೆಲವರು ಪ್ರಾಣ ಬಿಟ್ಟಿದ್ದಾರೆ.

'ಅರಬರು ಯಹೂದಿಗಳನ್ನಾಗಲಿ, ಯಹೂದಿಗಳು ಅರಬರನ್ನಾಗಲಿ ಹತ್ಯೆ ಮಾಡುವುದನ್ನು ಸಮರ್ಥಿಸಲಾಗದು. ಇಸ್ರೇಲ್ ಈಗ ಎರಡು ನೆಲೆಗಳಲ್ಲಿ ಹೋರಾಡಲು ತೊಡಗಿದೆ' ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಗಾಜಾ ನಗರದ ಕಟ್ಟಡವೊಂದರ ಮೇಲೆ ಇಸ್ರೇಲ್ ನಡೆಸಿದ ವಾಯು ದಾಳಿ ಸೃಷ್ಟಿಸಿದ ಬೆಂಕಿಯ ಉಂಡೆ — ಎಎಫ್‌ಪಿ ಚಿತ್ರ

ಪ್ಯಾಲೆಸ್ಟೀನ್– ಇಸ್ರೇಲ್ ವಾದವೇನು?

ಗಾಜಾ ಪಟ್ಟಿಯು ಪ್ಯಾಲೆಸ್ಟೀನ್‌ನ ಸಂಘಟನೆಯಾದ ಹಮಸ್‌ನ ನಿಯಂತ್ರಣದಲ್ಲಿದೆ. ಈ ಸಂಘಟನೆಯು ಹಲವು ಬಾರಿ ಇಸ್ರೇಲ್ ಜತೆ ಸಂಘರ್ಷ ನಡೆಸಿದೆ. ಹಮಸ್‌ಗೆ ಶಸ್ತ್ರಾಸ್ತ್ರ ಸರಬರಾಜಾಗುವುದನ್ನು ತಡೆಯಲು, ಗಾಜಾದ ಗಡಿಯುದ್ದಕ್ಕೂ ಇಸ್ರೇಲ್ ಹಾಗೂ ಈಜಿಪ್ಟ್ ಬಿಗಿ ಭದ್ರತಾ ವ್ಯವಸ್ಥೆಯನ್ನು ಮಾಡಿವೆ. ಇದು ಇಸ್ರೇಲ್–ಪ್ಯಾಲೆಸ್ಟೀನ್ ನಡುವಿನ ಹೊಸ ಸಂಘರ್ಷಕ್ಕೆ ಕಾರಣ ಎನ್ನಲಾಗುತ್ತಿದೆ.

'ಇಸ್ರೇಲ್‌ನ ಕ್ರಮ ಹಾಗೂ ನಿರ್ಬಂಧಗಳಿಂದಾಗಿ ನಾವು ತುಂಬಾ ಸಂಕಷ್ಟಗಳನ್ನು ಎದುರಿಸುವಂತಾಗಿದೆ' ಎಂದು ಗಾಜಾ ಹಾಗೂ ವೆಸ್ಟ್‌ಬ್ಯಾಂಕ್‌ನಲ್ಲಿರುವ ಪ್ಯಾಲೆಸ್ಟೀನಿಯನ್ನರು ಹೇಳುತ್ತಿದ್ದಾರೆ.

ಆದರೆ, 'ಪ್ಯಾಲೆಸ್ಟೀನಿಯನ್ನರ ಹಿಂಸೆಯಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಈ ಕ್ರಮವನ್ನು ಕೈಗೊಂಡಿದ್ದೇವೆ' ಎಂದು ಇಸ್ರೇಲ್ ಹೇಳಿದೆ.

ಇನ್ನೊಂದೆಡೆ, ಪೂರ್ವ ಜೆರುಸಲೇಂನ ಶೇಖ್ ಜರ್ರಾ ನಗರದಿಂದ ಪ್ಯಾಲೆಸ್ಟೀನಿಯನ್ನರ ಕುಟುಂಬಗಳನ್ನು ಹೊರದಬ್ಬುತ್ತಿರುವ ಇಸ್ರೇಲ್‌ನ ನೀತಿಯು ಪ್ಯಾಲೆಸ್ಟೀನಿಯನ್ನರ ಆಕ್ರೋಶಕ್ಕೆ ಕಾರಣವಾಗಿದೆ. ಈಗಿನ ಸಂಘರ್ಷಕ್ಕೆ ಅದೇ ಕಾರಣ ಎಂದೂ ಹೇಳಲಾಗುತ್ತಿದೆ. 'ಗಾಜಾದ ಮೇಲಿನ ದಾಳಿಯನ್ನು ನಿಲ್ಲಿಸುವುದಿಲ್ಲ' ಎಂದು ಇಸ್ರೇಲ್ ಹೇಳಿದ್ದರೆ, 'ಇಸ್ರೇಲ್ ಬಯಸುವುದಾದರೆ ಸಂಘರ್ಷವನ್ನು ಮುಂದುವರಿಸಲು ನಾವೂ ಸಿದ್ಧರಿದ್ದೇವೆ' ಎಂದು ಪ್ಯಾಲೆಸ್ಟೀನ್ ಹೇಳಿದೆ.

ಫಲನೀಡದ ಶಾಂತಿ ಪ್ರಕ್ರಿಯೆ

ಇಸ್ರೇಲ್– ಪ್ಯಾಲೆಸ್ಟೀನ್ ನಡುವೆ ಮತ್ತೆ ಆರಂಭವಾಗಿರುವ ಸಂಘರ್ಷಕ್ಕೆ ತಡೆಯೊಡ್ಡುವ ಪ್ರಯತ್ನವನ್ನು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ಮಾಡಿದ್ದರೂ ಅದು ಫಲ ನೀಡಿಲ್ಲ.

ಈ ವಿಚಾರವಾಗಿ ಮಂಡಳಿಯು ಈವರೆಗೆ ಎರಡು ವಿಡಿಯೊ ಕಾನ್ಫರೆನ್ಸ್‌ಗಳನ್ನು ನಡೆಸಿದೆ. ಆದರೆ ಇಸ್ರೇಲ್‌ನ ಸಹಯೋಗಿ ರಾಷ್ಟ್ರವೆನಿಸಿರುವ ಅಮೆರಿಕವು ಈ ವಿಚಾರದಲ್ಲಿ ಜಂಟಿ ಘೋಷಣೆ ಮಾಡಲು ನಿರಾಕರಿಸಿದ್ದರಿಂದ ಮಾತುಕತೆ ಫಲ ನೀಡಿಲ್ಲ. ಇಂಥ ಘೋಷಣೆಗಳಿಂದ ಪರಿಸ್ಥಿತಿ ನಿಯಂತ್ರಣಕ್ಕೆ ಬರಲಾರದು ಎಂಬುದು ಅಮೆರಿಕದ ನಿಲುವಾಗಿದೆ.

ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಜತೆ ಬುಧವಾರ ಸಂಜೆ ಮಾತುಕತೆ ನಡೆಸಿದ್ದಾರೆ. 'ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕು ಇಸ್ರೇಲ್‌ಗೆ ಇದೆ' ಎಂದು ಬೈಡನ್ ಪ್ರತಿಪಾದಿಸಿದ್ದಾರೆ. 'ನಾವು ಪ್ಯಾಲೆಸ್ಟೀನ್ ಜತೆ ಮಾತನಾಡಿದ್ದೇವೆ. ಶೀಘ್ರದಲ್ಲೇ ದಾಳಿಯನ್ನು ನಿಲ್ಲಿಸುವಂತೆ ಅಧ್ಯಕ್ಷ ಮಹಮೂದ್ ಅಬ್ಬಾಸ್ ಅವರಲ್ಲಿ ಮನವಿ ಮಾಡಿದ್ದೇವೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಹೇಳಿದ್ದಾರೆ.

ಈನಡುವೆ, 'ಇದು ಆರಂಭ ಮಾತ್ರ, ನಾವು ಯಾವುದೇ ಸನ್ನಿವೇಶ ಎದುರಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಗಾಜಾದ ಮೇಲಿನ ದಾಳಿ ಮುಂದುವರಿಯುವುದು' ಎಂದು ಇಸ್ರೇಲ್‌ನ ಸೇನಾ ವಕ್ತಾರ ಜೊನಾಥನ್ ಕಾನ್ರಿಕಸ್ ಹೇಳಿದ್ದಾರೆ. ಇದರಿಂದಾಗಿ, ಸದ್ಯಕ್ಕೆ ಈ ಸಮಸ್ಯೆಗೆ ಪರಿಹಾರ ಸಿಗಲಾರದೇನೋ ಎಂಬ ಆತಂಕ ಮೂಡಿದೆ.

ಎರಡು ಶತಮಾನದ ಸಂಘರ್ಷ

- ಒಟ್ಟೋಮನ್ ಸಾಮ್ರಾಜ್ಯದ ಉತ್ತುಂಗದ ಕಾಲದಲ್ಲಿ ಈ ಪ್ರದೇಶದಲ್ಲಿ ಅರಬ್ ಮುಸ್ಲಿಮರು ಬಹುಸಂಖ್ಯಾತರಾಗಿದ್ದರು. ಜೆರುಸಲೇಂನ ಕೆಲವು ಭಾಗದಲ್ಲಿ ಮಾತ್ರವೇ ಯಹೂದಿಗಳು ಮತ್ತು ಕ್ರೈಸ್ತರು ಇದ್ದರು. ಈಗಿನ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಪ್ರದೇಶವು ಸಂಪೂರ್ಣವಾಗಿ ಪ್ಯಾಲೆಸ್ಟೀನ್ ಆಗಿತ್ತು. ಇಲ್ಲಿ ಅರಬ್ ಮುಸ್ಲಿಮರ ಪ್ರಾಬಲ್ಯವಿತ್ತು
- 19ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಯಹೂದಿಗಳ ಮೇಲೆ ಕಿರುಕುಳ ಆರಂಭವಾಗಿತ್ತು. 1799ರಲ್ಲಿ ಚಕ್ರವರ್ತಿ ನೆಪೋಲಿಯನ್ ಬೋನಾಪಾರ್ಟ್, ಯಹೂದಿಗಳ ಮೂಲ ನೆಲೆಯಾದ ಪ್ಯಾಲೆಸ್ಟೀನ್‌ನಲ್ಲಿ ಯಹೂದಿಗಳಿಗೆ ಆಶ್ರಯ ಕಲ್ಪಿಸುವುದಾಗಿ ಘೋಷಿಸಿದನು. ಪ್ಯಾಲೆಸ್ಟೀನ್ ಅರಬರ ವಿರೋಧದಿಂದಾಗಿ ಈ ಘೋಷಣೆ ಕಾರ್ಯರೂಪಕ್ಕೆ ಬರಲಿಲ್ಲ. ಆದರೆ ಯೂರೋಪ್‌ನಿಂದ ಬಂದಿದ್ದ ಕೆಲವು ಯಹೂದಿಗಳು ಇಲ್ಲಿ ನೆಲೆಸಿದರು
- 1880ರ ನಂತರ ಪ್ಯಾಲೆಸ್ಟೀನ್‌ನಲ್ಲಿ ಯಹೂದಿಗಳಿಗೆ ಆಶ್ರಯ ಕಲ್ಪಿಸುವ ಉದ್ದೇಶದಿಂದ ಫ್ರಾನ್ಸ್‌ನ ನೇತೃತ್ವದಲ್ಲಿ ಐರೋಪ್ಯ ರಾಷ್ಟ್ರಗಳು ಒಂದಾದವು. ಯಹೂದಿಗಳಿಗೆ ಆಶ್ರಯ ಕಲ್ಪಿಸಲು ದೇಣಿಗೆ ಒದಗಿಸಿದವು. 1897ರಲ್ಲಿ ಗಣನೀಯ ಸಂಖ್ಯೆಯ ಯಹೂದಿಗಳು ಪ್ಯಾಲೆಸ್ಟೀನ್‌ಗೆ ಬಂದರು. ಪ್ಯಾಲೆಸ್ಟೀನ್ ಅರಬರ ವಿರೋಧ ನಡೆಯುತ್ತಲೇ ಇತ್ತು. 1907ರಲ್ಲಿ ಬ್ರಿಟಿಷ್ ಕಂಪನಿಯು ಯಹೂದಿಗಳಿಗಾಗಿ ಪ್ಯಾಲೆಸ್ಟೀನ್‌ನಲ್ಲಿ ಭೂಮಿ ಖರೀದಿಸಿತು. ಇದರ ಪರಿಣಾಮವಾಗಿ ಅಲ್ಲಿಂದ 60 ಸಾವಿರಕ್ಕೂ ಹೆಚ್ಚು ಅರಬರನ್ನು ಹೊರಗಟ್ಟಲಾಯಿತು
- ಕಾಲಕ್ರಮೇಣ ಪ್ಯಾಲೆಸ್ಟೀನ್‌ಗೆ ಬಂದು ನೆಲೆಸುವ ಯಹೂದಿಗಳ ಸಂಖ್ಯೆ ಹೆಚ್ಚಾಯಿತು. ಯಹೂದಿಗಳ ವಸತಿ ಪ್ರದೇಶದ ರಕ್ಷಣೆಗೆ ಹಶ್ಮೋರ್ ಎಂಬ ಅರೆಸೇನಾಪಡೆಯನ್ನು ಸ್ಥಾಪಿಸಲಾಯಿತು. ಯಹೂದಿ ವಿರೋಧಿ ಪ್ಯಾಲೆಸ್ಟೀನ್ ಅರಬರನ್ನು ನಿಯಂತ್ರಣದಲ್ಲಿ ಇಡಲು ಈ ಪಡೆಯು ಶಸ್ತ್ರಾಸ್ತ್ರ ಕಾರ್ಯಾಚರಣೆ ನಡೆಸುತ್ತಿತ್ತು. ಲಕ್ಷಾಂತರ ಸಂಖ್ಯೆಯ ಪ್ಯಾಲೆಸ್ಟೀನ್ ಅರಬರು ದೇಶ ತೊರೆದರು. ಇಂದಿಗೂ ಇವರು ಪ್ಯಾಲೆಸ್ಟೀನ್‌ಗೆ ವಾಪಸಾಗಲು ಇಸ್ರೇಲ್ ಬಿಡುತ್ತಿಲ್ಲ
- ಎರಡನೇ ವಿಶ್ವಯುದ್ಧದ ನಂತರ 1948ರಲ್ಲಿ ಬ್ರಿಟಿಷರು ಪ್ಯಾಲೆಸ್ಟೀನ್ ಮೇಲಿನ ನಿಯಂತ್ರಣವನ್ನು ಬಿಟ್ಟುಕೊಟ್ಟರು. ಆಗ ಯಹೂದಿಗಳು ತಮ್ಮ ನಿಯಂತ್ರಣದಲ್ಲಿ ಇದ್ದ ಜಾಗವನ್ನು ಇಸ್ರೇಲ್ ಎಂದು ಘೋಷಿಸಿದರು. ಪ್ಯಾಲೆಸ್ಟೀನ್‌ನ ಬಹುಭಾಗವನ್ನು ಯಹೂದಿಗಳು ನಿಯಂತ್ರಣಕ್ಕೆ ತೆಗೆದುಕೊಂಡರು. ಮೆಡಿಟರೇನಿಯನ್ ಸಮುದ್ರದ ದಂಡೆಯಲ್ಲಿದ್ದ ಗಾಜಾಪಟ್ಟಿಯನ್ನು, ಸೇನಾ ಕಾರ್ಯಾಚರಣೆ ಮೂಲಕ ಈಜಿಪ್ಟ್ ವಶಪಡಿಸಿಕೊಂಡಿತು. ಜೋರ್ಡನ್ ಸಾಮ್ರಾಜ್ಯವು ಜೋರ್ಡನ್ ನದಿಯ ಪಶ್ಚಿಮ ದಂಡೆಯ ಪ್ರದೇಶವನ್ನು (ವೆಸ್ಟ್ ಬ್ಯಾಂಕ್) ವಶಪಡಿಸಿಕೊಂಡಿತು. ಇಸ್ರೇಲ್ ಮತ್ತು ಜೋರ್ಡನ್ ಮಧ್ಯೆ ಜೆರುಸಲೇಂ ಹಂಚಿಹೋಯಿತು
- ಜೋರ್ಡನ್‌ನ ವಶದಲ್ಲಿದ್ದ ಜೆರುಸಲೇಂನ ಭಾಗವನ್ನು 1967ರಲ್ಲಿ ಸೇನಾ ಕಾರ್ಯಾಚರಣೆಯ ಮೂಲಕ ಇಸ್ರೇಲ್ ವಶಪಡಿಸಿಕೊಂಡಿತು. ಆದರೆ ವೆಸ್ಟ್ ಬ್ಯಾಂಕ್‌ನಲ್ಲಿ ಪ್ಯಾಲೆಸ್ಟೀನ್ ಅರಬರ ಪ್ರಾಬಲ್ಯವಿದ್ದ ಕಾರಣ, ಸಂಪೂರ್ಣ ನಿಯಂತ್ರಣ ಸಾಧ್ಯವಾಗಲಿಲ್ಲ. ಇಲ್ಲಿನ ಅರಬರು ಇದನ್ನು ಪ್ಯಾಲೆಸ್ಟೀನ್ ಎಂದು ಘೋಷಿಸಿಕೊಂಡಿದ್ದಾರೆ
- ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಒಳಗೊಂಡ ಪ್ರದೇಶವನ್ನು ಎರಡು ಅಧಿಕೃತ ದೇಶಗಳನ್ನಾಗಿ ಘೋಷಿಸುವ ವಿಶ್ವಸಂಸ್ಥೆ, ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ಪ್ರಯತ್ನಗಳು ಈವರೆಗೆ ಫಲಪ್ರದವಾಗಿಲ್ಲ. ವೆಸ್ಟ್‌ಬ್ಯಾಂಕ್ ಮತ್ತು ಗಾಜಾವನ್ನು ನಿಯಂತ್ರಣದಲ್ಲಿ ಇರಿಸಿಕೊಂಡಿರುವ ಹಮಸ್ ಬಂಡುಕೋರರು ಇಸ್ರೇಲ್‌ನ ಮೇಲೆ ಶಸ್ತ್ರಾಸ್ತ್ರ ದಾಳಿ ನಡೆಸುತ್ತಲೇ ಇದ್ದಾರೆ. ಇವರ ಮೇಲೆ ಇಸ್ರೇಲ್ ಸಹ ದಾಳಿ ನಡೆಸುತ್ತಲೇ ಇದೆ

ಆಧಾರ: ರಾಯಿಟರ್ಸ್, ಎಎಫ್‌ಪಿ, ಬಿಬಿಸಿ, ಇಂಡಿಪೆಂಡೆಂಟ್

ಗಾಜಾ ನಗರದತ್ತ ಇಸ್ರೇಲ್‌ನ ಫಿರಂಗಿ ದಾಳಿ — ಎಎಫ್‌ಪಿ ಚಿತ್ರ

ನದಿಗಳಲ್ಲಿ ಶವ ಬಂಗಾಳದಲ್ಲಿ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಉತ್ತರ ಪ್ರದೇಶ ಮತ್ತು ಬಿಹಾರದಿಂದ ಗಂಗಾ ನದಿಯಲ್ಲಿ ತೇಲಿಬರುವ ಶವಗಳು ಮಾಲ್ಡಾ ಜಿಲ್ಲೆಯ ಮೂಲಕ ಪಶ್ಚಿಮ ಬಂಗಾಳದೊಳಕ್ಕೆ ಬರುವ ಸಾಧ್ಯತೆ ಇದೆ. ಹಾಗೇನಾದರೂ ಶವಗಳು ಬಂದರೆ ಅವುಗಳನ್ನು ಸಂಗ್ರಹಿಸಿ, ಕೋವಿಡ್ ಪರೀಕ್ಷೆ ನಡೆಸಿ, ಬಳಿಕ ಗೌರವಯುತವಾಗಿ ಅಂತಿಮ ಸಂಸ್ಕಾರ ನೆರವೇರಿಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.

ಮಾಲ್ಡಾದ ಮಾನಿಕಚಕ ಪ್ರದೇಶದ ಮೂಲಕ ಗಂಗಾನದಿಯು ರಾಜ್ಯವನ್ನು ಪ್ರವೇಶಿಸುತ್ತದೆ. ಇಲ್ಲಿ ನದಿಯ ಹರಿವಿನ ಮೇಲೆ ನಿಗಾ ಇಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಅಲ್ಲದೆ, ಕಾಲಿಚಕ್ ಎರಡು ಮತ್ತು ಮೂರನೇ ಬ್ಲಾಕ್‌ನ ಪೊಲೀಸರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಈ ಸೂಚನೆ ನೀಡಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸ್ಥಳೀಯವಾಗಿ ದೋಣಿಗಳನ್ನು ನಡೆಸುವವರಿಗೆ ಪಿಪಿಇ ಕಿಟ್ ಹಾಗೂ ಇತರ ಸೌಲಭ್ಯಗಳೊಂದಿಗೆ ಅಗತ್ಯ ತರಬೇತಿ ನೀಡಲಾಗಿದೆ. ಅವರು ನದಿಯ ಹರಿವಿನ ಮೇಲೆ ನಿಗಾ ಇಟ್ಟಿದ್ದಾರೆ. ಸರ್ಕಾರವು ಕೇಂದ್ರದ ಗುಪ್ತಚರ ಸಂಸ್ಥೆಗಳ ಜತೆಗೆ ನಿರಂತರ ಸಂಪರ್ಕದಲ್ಲಿದೆ. ಶವಗಳು ಇರುವ ಸ್ಥಳದ ಬಗ್ಗೆ ನಿರಂತರ ಮಾಹಿತಿಯನ್ನು ಪಡೆಯಲಾಗುತ್ತಿದೆ ಎಂದು ಸರ್ಕಾರ ಹೇಳಿದೆ. ವಿಪತ್ತು ನಿರ್ವಹಣಾ ಪಡೆಗಳ ಸ್ಪೀಡ್ ಬೋಟ್‌ಗಳನ್ನು ಸಹ ಈ ಕಾರ್ಯಕ್ಕೆ ಬಳಸಲಾಗುವುದು ಎಂದು ಸರ್ಕಾರ ಹೇಳಿದೆ.

ನದಿ ದಂಡೆಯಲ್ಲಿ ಕಣ್ಗಾವಲು: (ಲಖನೌ ವರದಿ) ಉತ್ತರಪ್ರದೇಶದ ಕೆಲವು ನಗರಗಳಲ್ಲಿ ಕೋವಿಡ್‌ನಿಂದ ಸತ್ತವರ ಮೃತದೇಹಗಳನ್ನು ನದಿದಂಡೆಯಲ್ಲಿ ಹೂತುಹಾಕಲಾಗಿದೆ ಎಂಬ ಆರೋಪವನ್ನು ನಿರಾಕರಿಸಿರುವ ಸರ್ಕಾರವು, ಶವಗಳನ್ನು ನದಿಗೆ ಎಸೆಯುವುದನ್ನು ತಪ್ಪಿಸಲು ನದಿ ದಂಡೆಯಲ್ಲಿ ಕಣ್ಗಾವಲು ಇಡಲಾಗಿದೆ ಎಂದು ತಿಳಿಸಿದೆ.

ಬಿಹಾರದ ಬಕ್ಸರ್ ಹಾಗೂ ಉತ್ತರಪ್ರದೇಶ ಗಾಜಿಪುರ ಜಿಲ್ಲೆಯ ಬಲಿಯಾದಲ್ಲಿ ಗಂಗಾನದಿಯಲ್ಲಿ ನೂರಾರು ಶವಗಳು ಹರಿದು ಬಂದಿರುವುದು ಪತ್ತೆಯಾದ ಬಳಿಕ ನದಿ ದಂಡೆಯಲ್ಲಿ ಕಣ್ಗಾವಲಿಡಲು ಸರ್ಕಾರ ತೀರ್ಮಾನಿಸಿದೆ.

'ಇದು (ಶವಗಳನ್ನು ನದಿಯಲ್ಲಿ ಹರಿಬಿಡುವುದು) ನಮ್ಮ ಸಂಪ್ರದಾಯವಲ್ಲ. ಸತ್ತವರ ಅಂತ್ಯ ಸಂಸ್ಕಾರವನ್ನು ಸಂಪ್ರದಾಯದಂತೆ ಮಾಡಬೇಕು. ಅವರನ್ನು ನದಿದಂಡೆಯಲ್ಲಿ ಹೂಳಬಾರದು' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

'ನದಿ ದಂಡೆಯಲ್ಲಿ ಮೂರರಿಂದ ನಾಲ್ಕು ಅಡಿ ಆಳದ ಗುಂಡಿಗಳನ್ನು ತೋಡಿ, ನೂರಾರು ಶವಗಳನ್ನು ಹೂಳಲಾಗಿದೆ. ಮಳೆಗಾಲ ಆರಂಭವಾಗಿ, ನದಿಯು ಉಕ್ಕಿ ಹರಿಯುವಾಗ ಈ ಶವಗಳು ನದಿಯಲ್ಲಿ ತೇಲಿಬರುವ ಸಾಧ್ಯತೆ ಇದೆ' ಎಂದು ನದಿ ಸಮೀಪದ ನಿವಾಸಿಯೊಬ್ಬರು ಹೇಳಿದ್ದಾರೆ.

ಈಮಧ್ಯೆ, ಉನ್ನಾವ್ ಜಿಲ್ಲೆಯಲ್ಲೂ ಗಂಗಾನದಿಯಲ್ಲಿ ನೂರಾರು ಶವಗಳು ಹರಿದು ಬಂದಿವೆ ಎಂಬ ವರದಿಯನ್ನು ಅಧಿಕಾರಿಗಳು ನಿರಾಕರಿಸಿದ್ದಾರೆ. ಕೋವಿಡ್‌ನಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಸತ್ತಿದ್ದಾರೆ ಎಂಬ ವರದಿಯನ್ನೂ ಅವರು ಅಲ್ಲಗಳೆದಿದ್ದಾರೆ.

ಯೋಗಿ ಸರ್ಕಾರವು ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿದೆ. ಸಾವಿನ ಮಾಹಿತಿಯನ್ನು ಮುಚ್ಚಿಡುತ್ತಿದೆ. ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಆಗಲೇಬೇಕಾಗಿದೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಾನವ ಹಕ್ಕು ಆಯೋಗದ ನೋಟಿಸ್

ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಗಂಗಾ ನದಿಯಲ್ಲಿ ಹೆಣಗಳು ತೇಲಿಕೊಂಡು ಬಂದಿವೆ ಎಂಬುದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಗಮನ ಸೆಳೆದಿದೆ. ಈ ಬಗ್ಗೆ ವರದಿ ಸಲ್ಲಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ಎರಡೂ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿಗೆ ನೋಟಿಸ್ ನೀಡಲಾಗಿದೆ. ಕ್ರಮ ಕೈಗೊಂಡ ವರದಿಯನ್ನು ನಾಲ್ಕು ವಾರಗಳಲ್ಲಿ ಸಲ್ಲಿಸುವಂತೆ ತಿಳಿಸಲಾಗಿದೆ.

'ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮತ್ತು ಅರೆ ಸುಟ್ಟ ಅಥವಾ ಸುಡದ ದೇಹಗಳನ್ನು ಗಂಗಾ ನದಿಗೆ ಹಾಕುವುದನ್ನು ತಡೆಯುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ' ಎಂದೂ ಆಯೋಗವು ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **'ಕೋವಿಡ್ ಅನ್ನು** ನಿಯಂತ್ರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಕಷ್ಟಪಟ್ಟು ದುಡಿಯುತ್ತಿದ್ದಾರೆ. ವಿರೋಧ ಪಕ್ಷಗಳ ಸುಳ್ಳಿನ ಮಾತಿನ ಬಲೆಗೆ ಬೀಳಬೇಡಿ ಎಂದು ದಿ ಡೈಲಿ ಗಾರ್ಡಿಯನ್ ವರದಿ ಮಾಡಿದೆ. ಮೋದಿ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ವರದಿ ಪ್ರಕಟಿಸಿದ್ದ ವಿದೇಶಿ ಮಾಧ್ಯಮಗಳು, ಈಗ ಮೋದಿ ಪರವಾಗಿಯೇ ವರದಿ ಮಾಡುತ್ತಿವೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. 'ಫಿಲಿಪ್ಪೀನ್ಸ್‌ನ ದಿ ಡೈಲಿ ಗಾರ್ಡಿಯನ್ ಮಾಧ್ಯಮವು ಮೋದಿ ಅವರನ್ನು ಹೊಗಳಿ ವರದಿ ಮಾಡಿದೆ' ಎಂದು ಆಜ್‌ತಕ್ ಟ್ವೀಟ್ ಮಾಡಿತ್ತು. ಈ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಹ ವೈರಲ್ ಆಗಿದೆ.

✓ **'ದಿ ಡೈಲಿ ಗಾರ್ಡಿಯನ್'** ವಿದೇಶಿ ಮಾಧ್ಯಮ ಅಲ್ಲ. ಈ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ನ್ಯೂಸ್‌ಎಕ್ಸ್ ವಾಹಿನಿಯ ಮಾತೃಸಂಸ್ಥೆ ಐಟಿವಿ ನೆಟ್‌ವರ್ಕ್ 2021ರ ಜನವರಿಯಲ್ಲಿ ದಿ ಡೈಲಿ ಗಾರ್ಡಿಯನ್ ಎಂಬ ಸುದ್ದಿತಾಣ ಆರಂಭಿಸಿದೆ. ಇದನ್ನು ಫಿಲಿಪ್ಪೀನ್ಸ್‌ನ ದಿ ಡೈಲಿ ಗಾರ್ಡಿಯನ್ ಪತ್ರಿಕೆ ಎಂದು ತಪ್ಪಾಗಿ ಅರ್ಥೈಸಿಕೊಂಡು ಆಜ್‌ತಕ್ ಟ್ವೀಟ್ ಮಾಡಿತ್ತು. ಈಗ ಆ ಟ್ವೀಟ್ ಅನ್ನು ಅಳಿಸಲಾಗಿದೆ. ದಿ ಡೈಲಿ ಗಾರ್ಡಿಯನ್ ಆರಂಭವಾದಾಗಿನಿಂದ ತನ್ನ ಸಂಪಾದಕೀಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಪರವಾಗಿಯೇ ಬರೆದಿದೆ. ಇಂಥದ್ದೇ ಒಂದು ಲೇಖನವನ್ನು ಈಗ ವಿದೇಶಿ ಮಾಧ್ಯಮದ ವರದಿ ಎಂದು ಹಂಚಿಕೊಳ್ಳಲಾಗುತ್ತಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಸ್ಪರ ಪೂರಕವಾದ ವೈರುಧ್ಯಗಳು

ಹೇಮಕುಂಭದಿ ಕೊಳಚೆರೊಚ್ಚುನೀರ್ಗಳ ತುಂಬಿ |
ರಾಮಣೀಯಕದೊಳಿಟ್ಟಾಮಗಂಧವನು ||
ಪ್ರೇಮಪುಷ್ಪಕೆ ಮೊನಚು ಗರಗಸವನಂಚಿರಿಸಿ |
ಏಂ ಮಾಡಿದನೊ ಬೊಮ್ಮ! – ಮಂಕುತಿಮ್ಮ
|| 417 ||

ಪದ-ಅರ್ಥ: ಹೇಮಕುಂಭ = ಬಂಗಾರದ ಕೊಡ, ಕೊಳಚೆರೊಚ್ಚು ನೀರ್ಗಳ = ಕೊಳಚೆ + ರೊಚ್ಚು + ನೀರ್ಗಳ(ನೀರುಗಳನ್ನು), ರಾಮಣೀಯಕದೊಳಿಟ್ಟಾಮಗಂಧವನು = ರಾಮಣೀಯಕದೊಳು(ರಮಣೀಯವಾದ ಪಾತ್ರೆಯಲ್ಲಿ) + ಇಟ್ಟು + ಆಮಗಂಧವನು(ಹಸಿಮಾಂಸದ, ಕೀವಿನ, ಹೆಣದ ವಾಸನೆಯ), ಮೊನಚು = ಹರಿತವಾದ, ಗರಗಸವನಂಚಿರಿಸಿ = ಗರಗಸದಂತಹ ಅಂಚನ್ನು ಇರಿಸಿ.

ವಾಚ್ಯಾರ್ಥ: ಬಂಗಾರದ ಕೊಡದಲ್ಲಿ ಕೊಳಕು ರಾಡಿಯ ನೀರನ್ನು ತುಂಬಿ, ತುಂಬ ಆಕರ್ಷಕವಾದ ವಸ್ತುವಿನಲ್ಲಿ ಅಸಹನೀಯವಾದ ಕೊಳಕು ವಾಸನೆಯನ್ನಿಟ್ಟು, ಸೊಗಸಾದ ಹೂವಿಗೆ ಗರಗಸದಂತಹ ಮೊನಚಾದ ಅಂಚುಗಳನ್ನಿಟ್ಟು, ಪರಬ್ರಹ್ಮ ಅದೇನು ಸೃಷ್ಟಿ ಮಾಡಿದನೊ?

ವಿವರಣೆ: ಭಗವಂತನ ರೀತಿಯೇ ವಿಚಿತ್ರ. ಪರಸ್ಪರ ವಿರುದ್ಧವಾದ ವಸ್ತುಗಳನ್ನು ಜೊತೆಗೇ ಇಟ್ಟು ತಮಾಷೆ ನೋಡುತ್ತಾನೆ. ಬಂಗಾರದ ಕೊಡದಲ್ಲಿ ಕೊಳಚೆ ರೊಚ್ಚಿನ ರಾಡಿಯನ್ನು ತುಂಬುತ್ತಾನೆ, ಅತ್ಯಂತ ರಮಣೀಯವಾದ ವಸ್ತುವಿಗೆ ತಡೆದುಕೊಳ್ಳಲಾರದಂತಹ ಕೊಳಕುವಾಸನೆಯನ್ನು ಜೋಡಿಸುತ್ತಾನೆ. ಪ್ರೇಮದ ಪ್ರತೀಕವಾದ ಕೋಮಲವಾದ ಹೂವಿಗೆ ಗರಗಸದಂತಹ ಅಂಚನ್ನು ಇಟ್ಟು, ಮುಟ್ಟುವ ಕೈಯನ್ನು ಕೊರೆಯುವಂತೆ ಮಾಡುತ್ತಾನೆ. ಏನು ಅವನ ಯೋಜನೆಯೋ ತಿಳಿಯದು ಎನ್ನಿಸುತ್ತದೆ. ಸರಸ, ಸುಂದರವಾದವುಗಳನ್ನು ಅಸಹ್ಯ, ವಿಕಾರಗಳೊಡನೆ ಇಡುವುದರ ಉದ್ದೇಶವೇನಿರಬಹುದು? ಬಹುಶ: ಪ್ರಪಂಚದಲ್ಲಿ ಎಲ್ಲವೂ ಸುಂದರವಲ್ಲ, ಎಲ್ಲವೂ ಕೊಳಕಲ್ಲ, ಅವೆರಡೂ ನಮ್ಮಲ್ಲಿಯೇ ಇವೆ ಎಂಬ ಅರಿವು ನಮಗೆ ಇರುವುದು ಒಳ್ಳೆಯದು ಎಂದಿರಬಹುದು. ಒಳ್ಳೆಯದರ ಹಿಂದೆಯೇ ಕೆಟ್ಟದ್ದು ಇದೆ.

ಹದಿನಾರನೇ ಶತಮಾನದಲ್ಲಿ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯಲ್ಲಿ ಹುಟ್ಟಿ ಬೆಳೆದು ವಚನ ಸಂಸ್ಕೃತಿಯನ್ನು ಬೆಳೆಸಿದ ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನ ಹೀಗಿದೆ.

ಹಾಲೋಗರವನುಂಡು ಬಾಲೆಯರ
ತೋಳಮೇಲೊರಗಿದೊಡೆ.
ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಿರಣ್ಣಾ.
ಅಲ್ಲಿಯ ಆಲಿಂಗನ ವಿಷ, ಚುಂಬನ ನಂಜು,
ನೋಟ ಸರಳು, ಸವಿನುಡಿ ಕಠಾರಿ ನೋಡಾ
ಅಲ್ಲಿಯ ನೆನಹು ಅಜ್ಞಾನ ನೋಡಾ
ಅದು ತನ್ನ ಹಿತಶತ್ರುತನದಿಂದ ಭ್ರಾಂತುಭಾವನೆಯ
ಹುಟ್ಟಿಸಿ ಕೊಲುವುದಾಗಿ,
ಈ ಸಂಸಾರ, ನಿನಗೆ ಹಗೆಯೆಂದು ತಿಳಿಯಾ,
ಮರುಳುಮಾನವಾ

ಇದೇ ಪ್ರಪಂಚದ ಹಿತಶತ್ರುತನ. ಹಿತವೂ ಇದೆ, ಪಕ್ಕದಲ್ಲೇ ಶತೃತ್ವವೂ ಇದೆ. ಆಲಿಂಗನದ ಹಿತವಿದೆ. ಆದರೊಂದಿಗೇ ಕಠಿಣವಾದ ವಿಷವೂ ಇದೆ. ಚುಂಬನದೊಂದಿಗೆ ನಂಜು, ಪ್ರೀತಿಯ ನೋಟದಲ್ಲಿ ಬಿರುಸಾದ ಸರಳಿದೆ, ಸವಿನುಡಿಯ ಹಿಂದೆ ಹರಿತವಾದ ಕಠಾರಿಯಿದೆ. ಜ್ಞಾನವೆಂದು ತಿಳಿದಿದ್ದ ನೆನಪು, ಅಜ್ಞಾನವೂ ಆದೀತು. ಇದೇ ಪ್ರಪಂಚ ಹುಟ್ಟಿಸುವ ಭ್ರಾಂತಿಯ ಭಾವನೆ.

ಈ ಮಾತನ್ನೇ ಕಗ್ಗ ಹೇಳುತ್ತದೆ. ವೈರುಧ್ಯಗಳೆಂದು ತೋರುವವು, ನಿಜವಾಗಿ ನೋಡಿದರೆ, ಪರಸ್ಪರ ಪೂರಕವಾದವುಗಳು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಮೇ 14, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ತೃತೀಯ ಗಂ. 56-42 (ರಾ. 4-43) ಶುಕ್ರವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 59-38 (ಬೆ.ಝಾ. 5-53) ಸುಕರ್ಮ ನಾಮ ಯೋಗ ಗಂ 43-53 ತೈತಲ ಕರಣ ಗಂ. 24-33 ವಿಷ ಗಂ. 9-8 ಅಮೃತ ಗಂ. 35-22 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 1, 4

ಮೇಷ: ಹಳೆಯ ಸ್ನೇಹಿತರಿಂದ ಮತ್ತು ಉದ್ಯಮಿಗಳಿಂದ ನೆರವು. ಆಪ್ತ ಬಂಧುಗಳಿಂದ ಉಪಯುಕ್ತ ಸಲಹೆ ದೊರೆಯಲಿದೆ. ಆರೋಗ್ಯದಲ್ಲಿ ಉತ್ತಮ. ಆರ್ಥಿಕ ಸಮಸ್ಯೆಗಳು ನಿವಾರಣೆಯಾಗಲಿವೆ.

ವೃಷಭ: ವೈಯಕ್ತಿಕ ಕೆಲಸಗಳು ಸಮರ್ಪಕವಾಗಿ ನಡೆಯಲಿವೆ. ಹಗಲುಗನಸು ಕಾಣುವುದು ಬೇಡ. ಆಲಸ್ಯದಿಂದ ದೂರವಿರಿ. ಉತ್ತಮ ಯೋಜನೆಯನ್ನು ರೂಪಿಸಿ. ದೀನರಿಗೆ ಸಹಾಯ ಹಸ್ತ ನೀಡಿ.

ಮಿಥುನ: ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಸು ಒಳಿತನ್ನು ಕೊಡಲಿದೆ. ಕೆಲಸದ ಒತ್ತಡದ ನಡುವೆಯೂ ಖುಷಿಯ ಅನುಭವ ನಿಮ್ಮ ಪಾಲಿಗೆ. ಕಿರಿಯರ ಮೇಲೆ ಜಾಗ್ರತೆ ಇರಲಿ. ಪ್ರಯಾಣದಲ್ಲಿ ಸುಖಾನುಭವವನ್ನು ಹೊಂದಲಿದ್ದೀರಿ.

ಕರ್ಕಾಟಕ: ಅನಿವಾರ್ಯ ಕೆಲಸಗಳನ್ನು ಪೂರ್ಣಗೊಳಿಸಲು ಸಕಾಲ. ವಿದ್ಯಾರ್ಥಿಗಳಿಗೆ ಸಂತಸದ ದಿನವಾಗಲಿದೆ. ಆರ್ಥಿಕ ದೃಢೀಕರಣಕ್ಕಾಗಿ ಹೊಸ ರೂಪ ರೇಷೆಯನ್ನು ನೆರವೇರಿಸುತ್ತೀರಿ. ಹಿರಿಯರ ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಸಿಂಹ: ಉದ್ಯೋಗದಲ್ಲಿ ಪ್ರಗತಿ. ಕ್ರೀಡಾಸ್ಪರ್ಧಿಗಳಿಗೆ ಉತ್ತಮ ಅವಕಾಶ ದೊರೆಯಲಿದೆ. ಕಳೆದುಕೊಂಡ ಸಂಪತ್ತು ಪುನಃ ಸಿಗಲಿದೆ. ಸರ್ಕಾರಿ ನೌಕರರಿಗೆ ನೆಮ್ಮದಿ. ಮಕ್ಕಳಿಂದ ನೆಮ್ಮದಿ ಮೂಡಿಬರಲಿದೆ.

ಕನ್ಯಾ: ಎಷ್ಟೇ ಸಂಕಷ್ಟಗಳು ಬಂದರೂ ಜಾಣ್ಮೆಯಿಂದ ಬದಲಾಯಿಸುವಲ್ಲಿ ಸಫಲರಾಗುತ್ತೀರಿ. ರಕ್ತ ಸಂಬಂಧ ಬಂಧುಗಳು ಸಹಕಾರ ನೀಡಲಿದ್ದಾರೆ. ಮಕ್ಕಳ ನಡವಳಿಕೆಗಳ ಬಗ್ಗೆ ಗಮನವಿರಲಿ.

ತುಲಾ: ನಿಮ್ಮ ಸಮಸ್ಯೆಗಳನ್ನು ಸಮಾಧಾನವಾಗಿ ತೆಗೆದುಕೊಳ್ಳಿ. ಆರ್ಥಿಕ ಸ್ಥಿರತೆಯನ್ನು ಸಾಧಿಸಲಿದ್ದೀರಿ. ಸಾಮಾಜಿಕ ಕಾರ್ಯಕರ್ತರಿಗೆ ಮನ್ನಣೆ. ಸರ್ಕಾರದಿಂದ ಸಹಾಯ ದೊರಯಲಿದೆ. ಮನೆಯಲ್ಲಿ ಶಾಂತಿ ದೊರಕಲಿದೆ.

ವೃಶ್ಚಿಕ: ಬಹುದಿನಗಳ ವೃತ್ತಿಯಲ್ಲಿನ ಉದ್ವಿಘ್ನತೆ ದೂರವಾಗಲಿದೆ. ಸಂಗಾತಿಯೊಂದಿಗೆ ವಿಶ್ರಾಂತ ಸ್ಥಳಕ್ಕೆ ತೆರಳಲಿದ್ದೀರಿ. ಉನ್ನತ ಸ್ಥಾನ ಲಭ್ಯವಾಗುವ ಸಾಧ್ಯತೆ. ದಿನದ ಕೊನೆಯಲ್ಲಿ ಶುಭ ಸೂಚನೆ.

ಧನು: ಖಾಸಗಿ ಉದ್ಯೋಗಿಗಳಿಗೆ ಯಶಸ್ಸು. ನಿಮ್ಮ ವೃತ್ತಿ ಅನುಭವ ಮತ್ತು ಸಾಮರ್ಥ್ಯದ ಫಲದಿಂದಾಗಿ ಸಾಮಾಜಿಕ ಮನ್ನಣೆ. ರಾಜಕೀಯದಲ್ಲಿ ಅತಂತ್ರ ಸ್ಥಿತಿಯನ್ನು ಅನುಭವಿಸಬೇಕಾದೀತು. ಮಾನಸಿಕ ಚಂಚಲತೆ.

ಮಕರ: ಸಾಮಾಜಿಕ ಕಾರ್ಯಗಳ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಜಂಜಾಟ ಪರಿಸ್ಥಿತಿ ನಿವಾರಣೆಯಾಗಿ ಮನಸ್ಸಿಗೆ ನೆಮ್ಮದಿ. ಧೃತಿಗೆಡಬೇಕಾದ ಅಗತ್ಯವಿಲ್ಲ. ಈ ದಿನವನ್ನು ಖುಷಿಯಾಗಿ ಕಳೆಯಲು ಸ್ನೇಹಿತರು ಜೊತೆಯಲ್ಲಿರುತ್ತಾರೆ.

ಕುಂಭ: ವೈಯಕ್ತಿಕ ಕೆಲಸಗಳಲ್ಲಿ ಯಶಸ್ಸು. ಉದ್ಯೋಗ ಬದಲಾವಣೆಯ ಬಗ್ಗೆ ಆಲೋಚನೆ ಬೇಡ. ಆತುರದ ನಿರ್ಧಾರ ಸಲ್ಲದು. ಆಂಜನೇಯನ ದರ್ಶನ ಮಾಡಿ.

ಮೀನ: ಸಮಾಜದ ಒಳಿತಿಗಾಗಿ ತೆಗೆದುಕೊಂಡ ನಿರ್ಧಾರಗಳು ಫಲ ಕೊಡಲಿವೆ. ಹೃದಯಸ್ಪರ್ಶಿ ಕ್ಷಣಗಳು ನಿಮಗಾಗಿ ಕಾದಿವೆ. ಅಪರೂಪದ ನೆಮ್ಮದಿ ನಿಮ್ಮನ್ನರಸಿ ಬರಲಿದೆ. ಮಾಡುವ ಕೆಲಸದ ಬಗ್ಗೆ ಅವಲೋಕನ ಅಗತ್ಯ.

ನಿಮ್ಮ ಜನ್ಮದಿನ 14-ಮೇ: ಈ ದಿನ ಅತ್ಯಂತ ಶುಭಕರ. ಈ ದಿನದ ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಹೊಸ ಉದ್ಯಮಗಳನ್ನು ಸ್ಥಾಪಿಸುವ ನಿಮ್ಮ ಚಿಂತನೆ ಸಾಕಾರಗೊಳ್ಳಲಿದೆ. ಕೃಷಿಕರಿಗೆ ಭರವಸೆಯ ದಿನಗಳು ಎದುರಾಗಲಿವೆ. ನವವಿವಾಹಿತರಿಗೆ ಸಂತಾನ ಭಾಗ್ಯ ಕಂಡುಬರುವುದು.

ಪದಬಂಧ 4596 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನಸ್ಸಿನ ಬಯಕೆ (4)
3.ಓಲಗದ ಸದ್ದಿರುವ ರಾಜನ ದರ್ಬಾರು (4)
5.ಕಮ್ಮಾರನ ಒಲೆ (3)
6.ಅಶ್ವವನ್ನೇರಲು ಬಳಸುವ ಬಳೆ (3)
8.ಮರುಳನ ಬಳಿಯಲ್ಲಿರುವ ನೀಚವ್ಯಕ್ತಿ (3)
9.ಒಂದು ಗಂಟೆಯ ಅರವತ್ತನೆ ಒಂದು ಭಾಗದಷ್ಟು ಕಾಲ (3)
10.ನಗ ಖರೀದಿಸಿದಾಗ ಕೈಯ್ಯಲ್ಲಿರುವ ಹಣ (3)
12.ಅರ್ಹವಾಗಿದ್ದು, ಒದಗಬಹುದಾದದ್ದು (3)
14.ಯುದ್ಧದ ನಗಾರಿ (4)
15.ಅದೃಷ್ಟವೇ ಇಲ್ಲದವ (4)

ಮೇಲಿಂದ ಕೆಳಕ್ಕೆ

1.ಕೊಬ್ಬೇರಿದ ಆನೆಯಿದು (4)
2.ಹೊಳಪು ಅಥವಾ ಕಾಂತಿ (3)
3.ಜುಲುಮೆಯಿಂದ ಮೂಡಿತೇ ಈ ಪ್ರೀತಿ? (3)
4.ಕುಳ್ಳನಲ್ಲ ಭಾರೀ ಶ್ರೀಮಂತ (4)
7.ಹರುಷಪಡುತ್ತಿರುವ ಗಂಡು ವ್ಯಕ್ತಿ! (3)
8.ಸನ್ಮಾನ ಮಾಡಿದರೂ ಹೀಗೆ ದುಗುಡವೇ? (3)
9.ಉತ್ತರವೇ ಇಲ್ಲದ ಮೌನ! (4)
11.ಕೆಟ್ಟ ಅದೃಷ್ಟವಿದು (4)
12.ತಿರುಗುತ್ತಲೇ ಇರುವವನು (3)
13.ವ್ಯವಸಾಯಗಾರನ ದುಃಖ (3)



4595ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಮಪದ 4.ಪರೋಕ್ಷ 5.ನಿಷ್ಠುರ 6.ಸರಸ 10.ವಿನಿಯೋಗ 11.ಜೀವಚ್ಛವ 12.ಸುದಿನ 14.ಷಡ್ಡಕ 16.ಬುದ್ಬುದ 17.ವಿಧಾನಸೌಧ

ಮೇಲಿಂದ ಕೆಳಕ್ಕೆ: 1.ಪಕ್ಷ 2.ಮತ್ಸರ 3.ದನಿ 6.ಸವಿಗನಸು 7.ಸಹಜೀವನ 8.ಹವಿಸ್ಸು 9.ಬವಣೆ 13.ದಿವಾನ 15.ಕವಿ 16.ಬುಧ

ಸುಡೊಕು 4982

7				1			8	
		6	8		9	5	1	7
4		8	7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4981 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಗಂಟೆಯೊಳಗೆ ವೈದ್ಯಕೀಯ ಕಿಟ್: ಡಿಸಿಎಂ

ಬೆಂಗಳೂರು: 'ಕೊರೊನಾ ಸೋಂಕಿತರು ಹೋಮ್ ಐಸೋಲೇಷನ್ ಆದ ಒಂದು ಗಂಟೆಯೊಳಗೆ ವೈದ್ಯಕೀಯ ಕಿಟ್ ತಲುಪಿಸಲಾಗುವುದು' ಎಂದು ರಾಜ್ಯ ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಕಿಟ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಹೀಗಾಗಿ, ತಕ್ಷಣವೇ 5 ಲಕ್ಷ ಕಿಟ್ ಖರೀದಿಸಲು ನಿರ್ಧರಿಸಲಾಗಿದೆ' ಎಂದರು.

'10 ದಿನಕ್ಕೆ ಸಾಕಾಗುವಷ್ಟು ರೋಗ ಮತ್ತು ಸೋಂಕು ನಿರೋಧಕ ಔಷಧಗಳು, ವೈರಸ್ ನಿರೋಧಕ, ವಿಟಮಿನ್ ಮತ್ತು ಕಾಲ್ಶಿಸಿನ್ ಮಾತ್ರೆ, ರೋಗ ಉಲ್ಬಣ ಆಗುವುದನ್ನು ತಡೆಯುವ ಔಷಧಗಳು ಈ ಕಿಟ್‌ನಲ್ಲಿ ಇರುತ್ತವೆ. ಜತೆಗೆ ಟೆಲಿ ಕನ್ಸಲ್‌ಟೆನ್ಸಿ ಸೌಲಭ್ಯವೂ ಇರುತ್ತದೆ' ಎಂದರು.

'ರಾಜ್ಯದೆಲ್ಲಡೆ ಈ ಕಿಟ್ ಕೊಡುತ್ತಿದ್ದರೂ ವಿಳಂಬವಾಗುತ್ತಿದೆ. ಮೇ 15ರಿಂದ ಒಂದು ಗಂಟೆಯಲ್ಲೇ ಕಿಟ್ ತಲುಪಿಸಲಾಗುವುದು. ಪ್ರತಿ ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 24X7 ಇವು ಲಭ್ಯ ಇರುತ್ತವೆ' ಎಂದು ತಿಳಿಸಿದರು.

ಪುಣ್ಯ ಸ್ಮರಣೆ

ದಿನಾಂಕ 14-05-2021

ಶ್ರೀ ರಾಮಕೃಷ್ಣಯ್ಯ ಪಿ. ಎಂ.
ನಿ. ಕಂದಾಯ ನಿರೀಕ್ಷಕರು.
ಗೋವಿಂದರಾಜನಗರ, ಬೆಂಗಳೂರು
ನಿಧನ ದಿನಾಂಕ 04-05-2021

ಇಂತಿ ದುಃಖತಪ್ತರು: ಮಗಳು, ಅಳಿಯ ಮತ್ತು ಮೊಮ್ಮಕ್ಕಳು.

ವೈಕುಂಠ ಸಮಾರಾಧನೆ



ಕನ್ನಡ ಪ್ರಾಧ್ಯಾಪಕರು, ಕನ್ನಡ ಸಂಘರ್ಷ ಸಮಿತಿ ಹಾಗೂ ಬೆಂಗಳೂರು ವಿ ವಿ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟದ ಅಧ್ಯಕ್ಷರಾಗಿ ಮತ್ತು ಸದಾ ಕನ್ನಡದ ಸೇವೆಯಲ್ಲಿ ನಿರತರಾಗಿದ್ದ
ಡಾ. ಕೋ. ವೆಂ. ರಾಮಕೃಷ್ಣೇಗೌಡರು
03-05-2021 ಸೋಮವಾರದಂದು ನಮ್ಮನ್ನು ಅಗಲಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಇವರ 11ನೇ ದಿನದ ಪುಣ್ಯ ತಿಥಿಯನ್ನು 14-05-2021ರಂದು ಚನ್ನಪಟ್ಟಣದ ಕೋಡಿಹೊಸಹಳ್ಳಿಯಲ್ಲಿ ಏರ್ಪಡಿಸಲಾಗಿದೆ.

ದುಃಖತಪ್ತರು: ಕುಟುಂಬದವರು, ಬಂಧುವರ್ಗದವರು ಮತ್ತು ಸ್ನೇಹಿತರು.

'ಲೋಕದ ಡೊಂಕ ನೀವೇಕೆ ತಿದ್ದುವಿರಿ'

• ಮಂಜುನಾಥ ಕೊಳ್ಳೇಗಾಲ



ಬಸವಣ್ಣ

ಇಂದು ಬಸವ ಜಯಂತಿ

ಈಗ ಎಲ್ಲೆಲ್ಲೂ ಚಿಂತೆಯೋ ಚಿಂತೆ. ಇಡಿಯ ಜಗತ್ತಿನ ಬಗ್ಗೆ ನಮಗೆ ಚಿಂತೆ. ಇನ್ನೊಬ್ಬರ ಬಗ್ಗೆ ಚಿಂತಿಸುವ ಮೊದಲು ನಮ್ಮ ಬಗ್ಗೆ ನಾವು ಚಿಂತನೆ ಮಾಡಬೇಕಲ್ಲವೆ? ಈ ವಿಷಯವಾಗಿ ಬಸವಣ್ಣನವರ ಚಿಂತನೆಯ ಬಗ್ಗೆ ಮನನ ಮಾಡುತ್ತದೆ ಈ ಲೇಖನ...

ಬಸವಣ್ಣನವರ ಈ ವಚನವನ್ನು ಕೇಳದವರಿಲ್ಲ:

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಯವರ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ

ಈ ವಚನವನ್ನು ಕೇಳಿದಾಗ ಕೊನೆಯ ಸಾಲು ಪಕ್ಕನೆ ಗಮನಸೆಳೆಯುತ್ತದೆ! ನೆರೆಯವರ ದುಃಖಕ್ಕೆ ಮರುಗುವುದು ತಪ್ಪೇ? 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ' ಅಣ್ಣನವರು ಹೀಗೆ ಹೇಳಿದ್ದಾದರೂ ಏತಕ್ಕೆ?

ವಚನದ ಸ್ವಾರಸ್ಯವಿರುವುದೇ ಇಲ್ಲಿ. ನೆರೆಯವರ ದುಃಖಕ್ಕೆ ಮರುಗುವುದಕ್ಕೂ ನೆರೆಯವರ ದುಃಖಕ್ಕೆ ಅಳುವುದಕ್ಕೂ ಬೆಟ್ಟದಷ್ಟು ವ್ಯತ್ಯಾಸ. ಮರುಕದಲ್ಲೊಂದು ಕ್ರಿಯಾಶೀಲತೆಯಿದೆ, ಸಾಂತ್ವನವಿದೆ. ಆದರೆ, ಅಳುವುದರಲ್ಲಿರುವುದು ನಿಸ್ಸಹಾಯಕತೆ ಮಾತ್ರ. ಅದರಿಂದ ಉಪಯೋಗವಾದರೂ ಏನು? ಇದು ಒಂದು. ಅದರ ಹಿಂದಿನ ಮಾತನ್ನು ಈ ಹಿನ್ನೆಲೆಯಲ್ಲಿ ನೋಡಿ- 'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' ಆ ನೆರೆಯವರ ದುಃಖ ನಮ್ಮ ಡೊಂಕಿನಿಂದಾದದ್ದೂ ಇರಬಹುದು, ನಮ್ಮಂತಹ ಹಲವರ ಡೊಂಕಿನಿಂದಾದದ್ದೂ ಇರಬಹುದು. ಅದನ್ನು ನಾವು ನೇರ್ಪಡಿಸಿಕೊಂಡು ಸಮಾಜಕ್ಕೆ ಎಡವಟ್ಟಾಗದಂತಿದ್ದರೆ ಎಷ್ಟೋ ಒಳ್ಳೆತಲ್ಲವೇ ಎಂಬುದು ಅಣ್ಣನವರ ಆಶಯ.

ಈ ಡೊಂಕಿನ ಮಾತು ಬಂದಾಗ ಅಣ್ಣನವರ, ಅಷ್ಟೇನು ಪ್ರಸಿದ್ಧವಲ್ಲದ ಮತ್ತೊಂದು ಸೊಗಸಾದ ವಚನ ನೆನಪಾಗುತ್ತದೆ:

ಹಾವಿನ ಡೊಂಕು ಹುತ್ತಕ್ಕೆ ಸಸಿನ,
ನದಿಯ ಡೊಂಕು ಸಮುದ್ರಕ್ಕೆ ಸಸಿನ,
ನಮ್ಮ ಕೂಡಲಸಂಗನ ಶರಣರ ಡೊಂಕು
ಲಿಂಗಕ್ಕೆ ಸಸಿನ

ಇಲ್ಲಿ ಸಸಿನ ಎಂಬ ಪದಕ್ಕೆ ವಚನಕಾರರು ಇಟ್ಟಿರುವ ವ್ಯಂಗ್ಯಾರ್ಥ ಗಮನಿಸಲೇಬೇಕಾದ್ದು. ಸಸಿನ ಎಂದರೆ 'ನೇರ' ಎಂಬ ಅರ್ಥವನ್ನು ನಿಘಂಟು ಸೂಚಿಸುತ್ತದೆ. ಆದರೆ ನಿಘಂಟುವಿನ ಮಾತೊಂದನ್ನೇ ಹಿಡಿದರೆ ವಚನದ ಸ್ವಾರಸ್ಯ ದಕ್ಕಲಾರದು. ಸಸಿನ ಎಂಬುದು ನೇರ/ಯುಕ್ತ, ಸರಿಯೇ. ಆದರೆ 'ನೇರ' ಎಂಬುದು ಯಾವುದಕ್ಕೆ? ನೆಲಕ್ಕೆ ನೆಟ್ಟ ಕೋಲು ನೆಲಕ್ಕೆ ನೇರ ಎಂದರೆ ಆದೀತು, ಗೋಡೆಗೆ ಹೊಡೆದ ಮೊಳೆ ಗೋಡೆಗೆ. ಆದರೆ ಗೋಡೆಗೆ ಹೊಡೆದ ಮೊಳೆ ನೆಲಕ್ಕೆ ನೇರವಾಗಲಾರದು, ನೆಲಕ್ಕೆ ಬಡಿದ ಗೂಟ ಗೋಡೆಗೆ ನೇರವಾಗಲಾರದಷ್ಟೇ? ಹಾಗೆಯೇ ಅಂಕುಡೊಂಕಾದ ಹುತ್ತದಲ್ಲಿ ಮಲಗುವ ಹಾವಿಗೆ, ಕಡಲಿಟ್ಟು ಕುಣಿಯುವ ಸಮುದ್ರಕ್ಕೆ ಸೇರುವ ನದಿಗೆ ಯಾವುದು ನೇರ? ಯಾವುದು ಯುಕ್ತ? ನೆಲದ ಗೂಟದಂತೆ ಹಾವಿರಲಾರದು, ಹುತ್ತದ ಡೊಂಕಿನಂತೆ ಗೂಟವೂ ಇರಲಾರದು. ಹುತ್ತಕ್ಕೆ ತಕ್ಕಂತೆ ಹಾವಿದೆ, ಕಡಲಿಗೆ ತಕ್ಕಂತೆ ನದಿಯಿದೆ. ಅವಕ್ಕೆ ಹಾಗಿರುವುದೇ ನೇರ, ಅದೇ ಯುಕ್ತ. ಶಿವಶರಣ ಹೀಗಿರಬೇಕೆಂದು ಹೇಳಲು ನಾವು ಯಾರು? ಅವನು ಲಿಂಗಕ್ಕೆ ತಕ್ಕಂತಿರುತ್ತಾನೆ, ಅವನಿಗೆ ಅದೇ ನೇರ - ಇದು ವಚನದ ಆಶಯ. ಆದ್ದರಿಂದ ಸಸಿನ (ಅಥವಾ ನೇರ/ಯುಕ್ತ) ಎನ್ನುವ ಪರಿಕಲ್ಪನೆ ಎಷ್ಟು ವೈಯಕ್ತಿಕ, ಎಷ್ಟು ಸಾಂದರ್ಭಿಕ! ಲೋಕಚಿಂತನೆ ಮಾಡುವವನಿಗೆ ಈ ಅರಿವು, ಎಚ್ಚರ ಬಹಳ ಅತ್ಯಗತ್ಯ.

'ಮೂಗಿನ ನೇರಕ್ಕೆ ಮಾತಾಡುವುದು' ಎನ್ನುವ ಗಾದೆಯಿದೆಯಲ್ಲ, ಅದರ ಆಶಯವೂ ಇದೇ. ನಮ್ಮ ಮೂಗಿನ ನೇರವೇ ಇನ್ನೊಬ್ಬರದೂ ಇರಬೇಕಿಲ್ಲವಷ್ಟೇ, ಅಲ್ಲದೇ ನಮ್ಮ ಮೂಗೇ ಡೊಂಕಿರಬಹುದು. ಆದ್ದರಿಂದ ಒಂದು ಅಳತೆ ಪಟ್ಟಿ ಹಿಡಿದು ಲೋಕದ ಡೊಂಕನ್ನು ತಿದ್ದುವುದಾದರೂ ಹೇಗೆ? ಏಕೆ? ನಮ್ಮ ನೇರವನ್ನೇ ನಾವರಿಯದಿರಲು ಲೋಕದ ಡೊಂಕು ತಿದ್ದುವ ಉಪದ್ವ್ಯಾಪವಾದರೂ ಏಕೆ? ಪ್ರತಿಯೊಬ್ಬರೂ ಅವರವರನ್ನು ಅವರವರು ಸಂತೈಸಿಕೊಂಡು ಅವರವರ 'ನೇರ'ವನ್ನು ಕಂಡುಕೊಂಡರೆ, ನಮ್ಮ ಡೊಂಕಿನಿಂದಾದ ನೆರೆಯವರ ದುಃಖ ಎಷ್ಟೋ ಹಗುರವಾಗಬಹುದಲ್ಲವೇ ಎನ್ನುವ ಚಿಂತನೆ ಬಸವಣ್ಣನವರದ್ದು.

ಶರಣನೆಂದುಕೊಳ್ಳುವವನಿಗೆ ಕೆಲವು 'ಛಲ'ಗಳು ಅಗತ್ಯವಂತೆ - ಛಲ ಬೇಕು ಶರಣಂಗೆ, ಪರಧನವನೊಲ್ಲೆನೆಂಬ; ಪರಸತಿಯನೊಲ್ಲೆನೆಂಬ; ಪರದೈವವನೊಲ್ಲೆನೆಂಬ - ಈ 'ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ' ಎನ್ನುತ್ತಾರೆ. ಈ ಛಲಕ್ಕೆರವಾದ ಸಾಧಕ ಕೆಟ್ಟ. ಆದರೆ ಆ ಬಗೆಯ ಛಲ ದಕ್ಕುವುದು ಸುಲಭವಲ್ಲ, ಅದು ದಕ್ಕುವವರೆಗೂ ಕೂಡಿದಮಟ್ಟಿಗೂ ಗಮನವನ್ನು ಅತ್ತಿತ್ತ ಹರಿಯದಂತೆ ಕಟ್ಟಿಟ್ಟುಕೊಳ್ಳುವುದು ಸಾಧಕನಿಗೆ ಎಷ್ಟೋ ಕ್ಷೇಮ.

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು
ಕೂಡಲಸಂಗಮದೇವಾ

ಎನ್ನುವ ಆರ್ತತೆಯಲ್ಲಿ ಈ ಭಾವ ಬಸವಣ್ಣನವರನ್ನು ಬಹುವಾಗಿಯೇ ಕಾಡಿರಬೇಕು. ಅದಕ್ಕೆ ಬೇಕಾದ 'ಚಿತ್ತನಿವೃತ್ತಿ'ಗೆ ದಾರಿ? 'ಪರಚಿಂತೆ ಎಮಗೇಕಯ್ಯಾ ನಮ್ಮ ಚಿಂತೆ ನಮಗೆ ಸಾಲದೆ' ಎಂದು ಇದ್ದುಬಿಡುವುದು - ನಮಗೆ 'ಕೂಡಲಸಂಗಯ್ಯ ಒಲಿದಾನೊ ಒಲ್ಲನೊ ಎಂಬ ಚಿಂತೆ - ಹಾಸಲುಂಟು, ಹೊದೆಯಲುಂಟು' ಹೀಗಿರುವಾಗ ನೆರೆಯವರ ದುಃಖಕ್ಕೆ ಅಳುವುದಾದರೂ ಏಕೆ?

ಭುವನದ ಬೆಳಕು ಬಸವಣ್ಣನವರ ಜನ್ಮದಿನದಂದು ಈ ವಿವೇಕವಾಣಿ ನಮ್ಮೆಲ್ಲರ ಕೈಹಿಡಿದು ನಡೆಸಲಿ.

ಅಕ್ಷಯವಾಗಲಿ ಆರೋಗ್ಯಭಾಗ್ಯ

ಇಂದು ಅಕ್ಷಯ ತೃತೀಯಾ

ಅಕ್ಷಯ ತೃತೀಯಾ ಎಂದ ಕೂಡಲೇ ಇತ್ತೀಚಿನ ವರ್ಷಗಳಲ್ಲಿ ಬಂಗಾರ, ಚಿನ್ನಾಭರಣದ ಅಂಗಡಿಗಳೇ ಕಣ್ಣಮುಂದೆ ಬರುತ್ತಿದ್ದವು. ಆದರೆ ಕಳೆದ ವರ್ಷದಿಂದ ಈ ಚಿತ್ರಣ ಬದಲಾದಂತಿದೆ. ಇದಕ್ಕೆ ಕಾರಣ ಚಿನ್ನವಾಗಲೀ ಅಂಗಡಿಗಳಾಗಲೀ ಅಲ್ಲ; ಕೋವಿಡ್‌ನ ಉಪಟಳ. ಲಾಕ್‌ಡೌನ್‌ನ ಕಾರಣದಿಂದಾಗಿ ಈ ಸಲವೂ ಜನರಿಗೆ ಬಂಗಾರವನ್ನು ಕೊಳ್ಳಲಾಗದಿರಬಹುದು! ಆದರೆ ಅಕ್ಷಯ ತೃತೀಯಕ್ಕೂ ಬಂಗಾರಕ್ಕೂ ನೇರ ಸಂಬಂಧವೇನೂ ಇಲ್ಲ. ಈ ದಿನ ನಾವು ಏನನ್ನೂ ಮಾಡಿದರೂ ಅದು ಅಕ್ಷಯವಾಗುತ್ತದೆ ಎಂಬ ನಂಬಿಕೆಯ ಮೇಲೆ ಚಿನ್ನದ ನಂಟು ಗಟ್ಟಿಯಾದದ್ದಷ್ಟೆ. ಚಿನ್ನ ನಮ್ಮ ಭಾಗ್ಯಕ್ಕೆ ಸಂಕೇತ. ನಮ್ಮ ಸಂಪತ್ತು ಅಕ್ಷಯವಾಗಿರಲಿ ಎಂಬುದು ಇದರ ಹಿಂದಿರುವ ಮನೋಭಾವ.

ಇಂದು ನಮಗೆ ಬೇಕಾದ ದಿಟವಾದ ಭಾಗ್ಯ ಎಂದರೆ ಅದು ಆರೋಗ್ಯಭಾಗ್ಯವೇ ಹೌದು ಎಂಬುದು ಸ್ಪಷ್ಟವಾಗುತ್ತಿದೆ. ಇಂಥ ಸಂದರ್ಭದಲ್ಲಿ ನಾವು ಅಕ್ಷಯ ತೃತೀಯಾದ ನಿಜವಾದ ತಾತ್ವಿಕತೆಯನ್ನು ಅನುಸಂಧಾನಿಸಬಹುದು.

ವೈಶಾಖಮಾಸದ ಶುಕ್ಲಪಕ್ಷದ ತೃತೀಯಾದಿನವೇ 'ಅಕ್ಷಯ ತೃತೀಯಾ'. ಸತ್ಯಯುಗ ಆರಂಭವಾದದ್ದು 'ಅಕ್ಷಯ ತೃತೀಯಾ'ದಂದು ಎನ್ನುವ ನಂಬಿಕೆ ಉಂಟು. ಅಂದು ಆಚರಿಸುವ ಆಚರಣೆಗಳು ಅಕ್ಷಯವಾದ, ಎಂದರೆ ಮಿತಿಯೇ ಇಲ್ಲದಷ್ಟು ಫಲವನ್ನು ಕೊಡುತ್ತದೆ ಎನ್ನುವುದು ಇದರ ಹೆಗ್ಗಳಿಕೆ. ಆದುದರಿಂದ ಈ ದಿನ ದೇವತಾಪೂಜೆಯನ್ನು ಆಚರಿಸಬೇಕು; ದಾನವನ್ನು ಕೊಡಬೇಕು; ಜಪವನ್ನು ಮಾಡಬೇಕು; ತೀರ್ಥಸ್ನಾನವನ್ನು ಮಾಡಬೇಕು; ಅಧ್ಯಯನವನ್ನು ಆಚರಿಸಬೇಕು – ಎನ್ನುವುದು ಸಂಪ್ರದಾಯದ ನಿಲುವು. ನಮ್ಮ ಆರೋಗ್ಯ ಅಕ್ಷಯವಾಗಿರಲಿ ಎಂಬ ಸಂಕಲ್ಪವನ್ನು ನಾವಿಂದು ಮಾಡೋಣ; ಅದಕ್ಕಾಗಿ ಅಗತ್ಯವಾಗಿರುವ ಸಕಾರಾತ್ಮಕ ನಿರ್ಧಾರಗಳನ್ನು ಕೈಗೊಳ್ಳೋಣ. ಅವುಗಳನ್ನು ಅನುಷ್ಠಾನಕ್ಕೂ ತರೋಣ. ಇವೇ ಈ ಸಲದ ಅಕ್ಷಯ ತೃತೀಯಾ ಆಚರಣೆಗಳಾಗಲಿ.

ಸ್ಟೆರಲೈಟ್‌ನಲ್ಲಿ ಆಮ್ಲಜನಕ ಉತ್ಪಾದನೆ ಆರಂಭ

ಚೆನ್ನೈ (ಪಿಟಿಐ): ತೂತುಕುಡಿಯಲ್ಲಿರುವ ವೇದಾಂತ ಕಂಪನಿಯ ಸ್ಟೆರಲೈಟ್ ತಾಮ್ರದ ಕಾರ್ಖಾನೆಯಲ್ಲಿ ಆಮ್ಲಜನಕ ಉತ್ಪಾದನೆ ಆರಂಭವಾಗಿದ್ದು, ಉತ್ಪಾದನೆಗೊಂಡ ಆಮ್ಲಜನಕ ಹೊತ್ತ ಮೊದಲ ಟ್ಯಾಂಕರ್ ಅನ್ನು ಗುರುವಾರ ಕಳುಹಿಸಿಕೊಡಲಾಯಿತು.

ಆಮ್ಲಜನಕ್ಕೆ ತೀವ್ರ ಅಭಾವ ಉಂಟಾದ ಕಾರಣ ಏಪ್ರಿಲ್ 26 ರಂದು ಎಐಎಡಿಎಂಕೆ ಸರ್ಕಾರ ನಾಲ್ಕು ತಿಂಗಳ ಅವಧಿಗೆ ಆಮ್ಲಜನಕ ಉತ್ಪಾದನೆಗೆ ಅನುಮತಿ ನೀಡಿತ್ತು. ಹೀಗಾಗಿ 2018ರಿಂದ ಮುಚ್ಚಲಾಗಿದ್ದ ಕಾರ್ಖಾನೆಯನ್ನು ಪುನರಾರಂಭಿಸಲಾಗಿತ್ತು.

ಗುರುವಾರ 4.8 ಟನ್ ಹೊತ್ತ ಟ್ಯಾಂಕರ್ ಕಾರ್ಖಾನೆಯಿಂದ ನಿರ್ಗಮಿಸಿತು.

ರಾಜ್ಯದ 27 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಮರಣ ಪ್ರಕರಣ

ಕೋವಿಡ್ ಸೋಂಕಿತರ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಮೂರು ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಕಂಡಿದ್ದು, 24 ಗಂಟೆಗಳ ಅವಧಿಯಲ್ಲಿ 35,297 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.27 ಲಕ್ಷ ಮಾದರಿಗಳ ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 27.64ರಷ್ಟಿದೆ. ಈ ತಿಂಗಳು 13 ದಿನಗಳಲ್ಲಿ 5.65 ಲಕ್ಷ ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 20.88 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 161 ಮಂದಿ ಸೇರಿದಂತೆ ರಾಜ್ಯದಲ್ಲಿ 344 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 20,712ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ ಚೇತರಿಸಿಕೊಳ್ಳುವವರ ಸಂಖ್ಯೆ ಏರಿಕೆ ಕಂಡಿದ್ದು, ಮತ್ತೆ 34,057 ಮಂದಿ ಗುಣಮುಖರಾಗಿದ್ದಾರೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 14.74 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಯಾಗಿದ್ದು, 5.93 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರು (15,191), ಮೈಸೂರು (1,260) ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಇಳಿಕೆ ಕಂಡಿದೆ. ತುಮಕೂರು (1,798), ಬಳ್ಳಾರಿ (1,865), ಮಂಡ್ಯ (1,153), ಬೆಂಗಳೂರು ಗ್ರಾಮಾಂತರ (1,073) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ರಾಜ್ಯದ 27 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಮರಣ ಪ್ರಕರಣಗಳು ದೃಢಪಟ್ಟಿವೆ. ಬಹುತೇಕರು ಗಂಭೀರ ಉಸಿರಾಟದ ಸಮಸ್ಯೆ ಹಾಗೂ ತೀವ್ರ ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆಯನ್ನು ಎದುರಿಸಿದ್ದಾರೆ. ಮೈಸೂರಿನಲ್ಲಿ 15 ಮಂದಿ, ಉತ್ತರ ಕನ್ನಡ ಹಾಗೂ ಬಳ್ಳಾರಿಯಲ್ಲಿ ತಲಾ 14 ಮಂದಿ, ಬೆಂಗಳೂರು ಗ್ರಾಮಾಂತರದಲ್ಲಿ 13 ಮಂದಿ, ತುಮಕೂರು ಹಾಗೂ ಮಂಡ್ಯದಲ್ಲಿ ತಲಾ 11 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಸಚಿವರ ವರ್ಷದ ವೇತನ ಕೋವಿಡ್ ನಿಧಿಗೆ ದೇಣಿಗೆ

ಬೆಂಗಳೂರು: ಎಲ್ಲ ಸಚಿವರ ಒಂದು ವರ್ಷದ ವೇತನವನ್ನು ಕೋವಿಡ್ ಪರಿಹಾರ ನಿಧಿಗೆ ದೇಣಿಗೆಯಾಗಿ ಪಾವತಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ, ನಿಧಿಗೆ ವೇತನವನ್ನು ದೇಣಿಗೆ ನೀಡುವ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ (ಡಿಪಿಎಆರ್) ಮೇ 3ರಂದು ಸೂಚಿಸಿದ್ದರು.

ಈ ಮೇ 1ರಿಂದ ಅನ್ವಯಿಸುವಂತೆ ಸಚಿವರ ವೇತನವನ್ನು ಕೋವಿಡ್ ಪರಿಹಾರ ನಿಧಿಗೆ ಪಾವತಿಸಿ ಆದೇಶ ಹೊರಡಿಸಲಾಗಿದೆ.

ಗೃಹ ಸಚಿವರ ಮನೆ ಆವರಣದಲ್ಲಿ ಆರೈಕೆ ಕೇಂದ್ರ

ಶಿಗ್ಗಾವಿ: ಕೋವಿಡ್ ಪೀಡಿತರ ಪ್ರಾಥಮಿಕ ಚಿಕಿತ್ಸೆಗಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರ ಇಲ್ಲಿನ ಮನೆಯ ಆವರಣದಲ್ಲಿ 50 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರ ಸ್ಥಾಪಿಸಲಾಗಿದೆ.

'ಚಿಕಿತ್ಸೆ ನೀಡಲು ಈಗಾಗಲೇ ವೈದ್ಯರನ್ನೂ ನಿಯೋಜಿಸಲಾಗಿದೆ. ರೋಗಿಗಳು ಬಂದ ತಕ್ಷಣ ಚಿಕಿತ್ಸೆ ಆರಂಭಿಸುವ ಎಲ್ಲ ವ್ಯವಸ್ಥೆ ಮಾಡಲಾಗಿದೆ' ಎಂದು ಗುರುವಾರ ಈ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು ತಿಳಿಸಿದರು.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ದರ್ಶನ್ ಪುನರ್ಜನ್ಮದ 'ಸಾರಥಿ'

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3w47J3G

ಕಾಳಸಂತೆಯಲ್ಲಿ ರೆಮ್‌ಡಿಸಿವಿರ್: ಶುಶ್ರೂಷಕರಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಾಟ ಮಾಡುತ್ತಿದ್ದ, ಮತ್ತಿಬ್ಬರು ಶುಶ್ರೂಷಕರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕೆಆರ್‌ಎಸ್ ರಸ್ತೆಯಲ್ಲಿರುವ ಚಂದ್ರೋದಯ ಐ ಜನರಲ್ ಆಸ್ಪತ್ರೆ (ಸಿ.ಇ.ಜಿ.)ಯ ಡೇವಿಡ್ ಇನೋಸ್ ಮತ್ತು ಅಜೇಯ್ ಬಂಧಿತರು.

ಇಬ್ಬರನ್ನು ಬುಧವಾರ ರಾತ್ರಿ ಬಂಧಿಸಲಾಗಿದ್ದು, ಎರಡು ಚುಚ್ಚುಮದ್ದು ವಶಪಡಿಸಿಕೊಳ್ಳಲಾಗಿದೆ ಎಂದು ಮೈಸೂರು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ. ಬುಧವಾರ ಸಂಜೆ ಐವರು ಶುಶ್ರೂಷಕರನ್ನು ಬಂಧಿಸಲಾಗಿತ್ತು.

ಸಿಂಡಿಕೇಟ್ ಸದಸ್ಯ ಬಂಧನ

ಬಳ್ಳಾರಿ: ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಲಸಿಕೆ ಮಾರಾಟ ಆರೋಪದಡಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಮಲ್ಲಿಕಾರ್ಜುನ ಗೌಡ ಸೇರಿ ಮೂವರನ್ನು ಕೌಲ್‌ಬಜಾರ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಮಂಜುನಾಥ ಮೆಡಿಕಲ್ ಏಜೆನ್ಸಿ ಮಾಲೀಕ ವೆಂಕಟೇಶ ಬಾಬು, ವರ್ತಕ ಪೋಲಾ ಪ್ರವೀಣ್ ಬಂಧಿತ ಇನ್ನಿಬ್ಬರು.

ಮಲ್ಲಿಕಾರ್ಜುನ ಗೌಡ

'ಈಗ ಮೂವರ ಬಂಧನದ ಬಳಿಕ ತನಿಖೆ ಇನ್ನಷ್ಟು ಚುರುಕುಗೊಳಿಸಿದ್ದು, ಇನ್ನಷ್ಟು ಆರೋಪಿಗಳನ್ನೂ ಶೀಘ್ರ ಬಂಧಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಸಿ.ಟಿ.ರವಿ, ಸದಾನಂದಗೌಡ ಹೇಳಿಕೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ನೀಡುತ್ತಿರುವ ಆದೇಶಗಳಿಗೆ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಮತ್ತು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೀಡಿರುವ ಹೇಳಿಕೆಗಳಿಗೆ ನಿವೃತ್ತ ನ್ಯಾಯಾಧೀಶರ ಪ್ರತಿಕ್ರಿಯೆಗಳು ಹೀಗಿವೆ.

ಬೇಜವಾಬ್ದಾರಿ ಮಾತುಗಳು



ಗೋಪಾಲಗೌಡ

ನ್ಯಾಯಾಧೀಶರು ಸರ್ವಜ್ಞರೇ ಎಂದು ಸಿ.ಟಿ. ರವಿ ಅವರು ಅಸಂಬದ್ಧವಾಗಿ ಮಾತನಾಡುವುದು ತರವಲ್ಲ. ಕಾನೂನು ಮಂತ್ರಿ ಆಗಿದ್ದ ಡಿ.ವಿ. ಸದಾನಂದಗೌಡ ಅವರು ಸಂವಿಧಾನ ಅಡಿಯಲ್ಲಿ ನ್ಯಾಯಾಂಗ ಕಾರ್ಯವ್ಯಾಪ್ತಿ ಏನು ಎಂಬುದನ್ನು ತಿಳಿದುಕೊಂಡಿದ್ದರೆ ಈ ರೀತಿ ಮಾತನಾಡುತ್ತಿರಲಿಲ್ಲ. ಜನರಿಗೆ ಮೂಲಭೂತ ಹಕ್ಕು ನೀಡಲು ಸರ್ಕಾರ ವಿಫಲವಾದಾಗ ನ್ಯಾಯಾಂಗ ಮಧ್ಯಪ್ರವೇಶ ಮಾಡಬೇಕಾಗುತ್ತದೆ. ಹೈಕೋರ್ಟ್ ತನ್ನ ಕಾರ್ಯ ವ್ಯಾಪ್ತಿಯಲ್ಲೇ ಕೆಲಸ ಮಾಡುತ್ತಿದೆ. ನ್ಯಾಯಾಂಗದ ಬಗ್ಗೆ ಈ ರೀತಿ ಬೇಜವಾಬ್ದಾರಿತನದಿಂದ ಮಾತನಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣಗಳನ್ನು ಅವರು ಎದುರಿಸಬೇಕಾಗುತ್ತದೆ

–**ವಿ.ಗೋಪಾಲಗೌಡ**, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

ನ್ಯಾಯಾಂಗ ಕೈಕಟ್ಟಿ ಕೂರಲಾಗದು

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಒಬ್ಬರ ಮೇಲೊಬ್ಬರು ಅಧಿಕಾರ ಚಲಾಯಿಸಬಾರದು. ಆದರೆ, ಜನರ ಸಮಸ್ಯೆಗಳಿಗೆ ಶಾಸಕಾಂಗ ಮತ್ತು ಕಾರ್ಯಾಂಗ ಸ್ಪಂದಿಸದಿದ್ದಾಗ ಜನ ಸಾಮಾನ್ಯರು ಅನಿವಾರ್ಯವಾಗಿ ನ್ಯಾಯಾಂಗದ ಕದ ತಟ್ಟುತ್ತಾರೆ. ಆಗ ನ್ಯಾಯಾಂಗ ಕೈಕಟ್ಟಿ ಕೂರಲು ಆಗುವುದಿಲ್ಲ. ನ್ಯಾಯಾಂಗವೂ ಸ್ಪಂದಿಸದಿದ್ದರೆ ಅರಾಜಕತೆ ಉಂಟಾಗುತ್ತದೆ. ಆಮ್ಲಜನಕ ಕೊರತೆಯಿಂದ ಸಾವುಗಳು ಸಂಭವಿಸುತ್ತಿವೆ. ಲಸಿಕೆಗಾಗಿ ಜನ ಅಲೆದಾಡುವ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ನ್ಯಾಯಾಂಗದ ಮಧ್ಯಪ್ರವೇಶ ಆಗಿರುವುದು ಸಮಯೋಚಿತ. ಸರ್ಕಾರ ಅದನ್ನು ಗೌರವದಿಂದ ಸ್ವೀಕರಿಸಬೇಕು. ಲಭ್ಯತೆ ಬಗ್ಗೆ ಮಾಹಿತಿ ನೀಡಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು. ಅದನ್ನು ಬಿಟ್ಟು ನ್ಯಾಯಾಂಗದ ವಿರುದ್ಧ ಉಡಾಫೆ ಮಾಡುವುದು ಸರಿಯಲ್ಲ.

– **ಎಚ್.ಎನ್.ನಾಗಮೋಹನದಾಸ್**, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಕೆಟ್ಟ ಪರಂಪರೆಗೆ ನಾಂದಿ

ಕೋವಿಡ್ ಎರಡನೇ ಅಲೆ ಇಡೀ ದೇಶದ ನಾಗರಿಕರನ್ನು ಕಂಗೆಡಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತನ್ನ ಪಾಲಿನ ಕೆಲಸ ಅರಿಯದೆ ಮೈಮರೆತಿವೆ. ನಾಗರಿಕರಿಗೆ ಸಾಂವಿಧಾನಿಕವಾಗಿ ಲಭ್ಯವಾಗಿರುವ ಹಕ್ಕುಗಳ ರಕ್ಷಣೆಗೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸಿ ಮಧ್ಯಂತರ ಆದೇಶಗಳನ್ನು ನೀಡಿವೆ. ಇದನ್ನು ಗ್ರಹಿಸದೆ ನ್ಯಾಯಾಲಯಗಳು ಮತ್ತು ನ್ಯಾಯಾಧೀಶರನ್ನು ಗುರಿಯಾಗಿಸಿಕೊಂಡು ಸದಾನಂದಗೌಡ ಮತ್ತು ಸಿ.ಟಿ. ರವಿ ನೀಡಿರುವ ಹೇಳಿಕೆಗಳು ಖಂಡನಾರ್ಹ.

–**ಎ.ಪಿ. ರಂಗನಾಥ**, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ

ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಹರಿಹರದಿಂದ ಆಮ್ಲಜನಕ ಸಿಲಿಂಡರ್ ತುಂಬಿಸಿಕೊಂಡು ಬಂದರು. ತಹಶೀಲ್ದಾರ್, ಸಿಪಿಐ, ಪಿಎಸ್‌ಐ ಇದ್ದರು

ಶಾಸಕರ ಸಮಯ ಪ್ರಜ್ಞೆ: 20 ರೋಗಿಗಳು ಪಾರು

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಬುಧವಾರ ತಡರಾತ್ರಿ 12 ಗಂಟೆ ಹೊತ್ತಿಗೆ ಆಮ್ಲಜನಕದ ಕೊರತೆ ಕಾಣಿಸಿಕೊಂಡಿತು. ಮಾಹಿತಿ ಪಡೆದ ಶಾಸಕ ರೇಣುಕಾಚಾರ್ಯ ತಾವೇ ಹರಿಹರಕ್ಕೆ ತೆರಳಿ ಗುರುವಾರ ಬೆಳಗಿನ ಜಾವದ ವೇಳೆಗೆ ಆಮ್ಲಜನಕದ ಸಿಲಿಂಡರ್ ವ್ಯವಸ್ಥೆ ಮಾಡಿಕೊಂಡು ಬಂದರು. 20 ರೋಗಿಗಳ ಜೀವ ಉಳಿಸಲು ನೆರವಾದರು.

ಆಸ್ಪತ್ರೆಯಲ್ಲಿ 20 ಜನ ಸೋಂಕಿತರು ಆಮ್ಲಜನಕ ಬೆಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 2 ಗಂಟೆಗೆ ಆಗುವಷ್ಟು ಆಮ್ಲಜನಕ ಇತ್ತು. ಸಿಲಿಂಡರ್ ಖಾಲಿಯಾದರೆ ಸೋಂಕಿತರ ಜೀವಕ್ಕೆ ಅಪಾಯದ ಸಾಧ್ಯತೆ ಇತ್ತು ಎಂದು ಆಸ್ಪತ್ರೆ ಆಡಳಿತಾಧಿಕಾರಿ ಡಾ.ಚಂದ್ರಪ್ಪ ತಿಳಿಸಿದರು.

ಸ್ಪಂದಿಸಿದ ಶಾಸಕರು ತಹಶೀಲ್ದಾರ್, ಸಿಪಿಐ ಜೊತೆಗೆ ಖುದ್ದು ಹರಿಹರಕ್ಕೆ ತೆರಳಿ 'ದಿ ಸದರನ್ ಗ್ಯಾಸ್ ಲಿ.' ಕಂಪನಿಯಿಂದ 22 ಜಂಬೋ ಮತ್ತು 2 ಸಣ್ಣ ಸಿಲಿಂಡರ್ ವ್ಯವಸ್ಥೆ ಮಾಡಿಕೊಂಡು ಬಂದರು.

ತೆರೆಯದ ಲಸಿಕಾ ಕೇಂದ್ರ-ಬೀಗ ಒಡೆದ ಶಾಸಕ: ನಗರದ ಅಂಬೇಡ್ಕರ್ ಭವನದಲ್ಲಿ ಗುರುವಾರ ಲಸಿಕೆ ಹಾಕಿಸಿಕೊಳ್ಳಲು ಜನಸಂದಣಿ ಇತ್ತು. ಬೆಳಿಗ್ಗೆ 10 ಗಂಟೆ ಆದರೂ ಕೇಂದ್ರ ತೆರೆಯದಿದ್ದುದಕ್ಕೆ ಆಡಳಿತಾಧಿಕಾರಿಯನ್ನು ಶಾಸಕರು ತರಾಟೆಗೆ ತೆಗೆದುಕೊಂಡರು. ಬೀಗದ ಕೈ ಕಳೆದಿದೆ ಎಂದು ಗೊತ್ತಾಗುತ್ತಿದ್ದಂತೆ ಬೀಗ ಒಡೆದು ಲಸಿಕೆ ಹಾಕಲು ನೆರವಾದರು.

ನೀರವ್ ಮೋದಿಗೆ ವಿಶೇಷ ಕೋರ್ಟ್ ನೋಟಿಸ್

ಮುಂಬೈ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿ ತಮ್ಮ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಾರದೇಕೆ ಎಂದು ಕಾರಣ ಕೇಳಿ, ದೇಶಭ್ರಷ್ಟ ವಜ್ರ ವ್ಯಾಪಾರಿ ನೀರವ್ ಮೋದಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಸಾರ್ವಜನಿಕ ನೋಟಿಸ್ ಜಾರಿ ಮಾಡಿದೆ.

ವಿಚಾರಣೆಗಾಗಿ ಜೂನ್ 11ರಂದು ಕೋರ್ಟ್‌ಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ. ಒಂದು ವೇಳೆ ನಿಗದಿತ ದಿನದಂದು ವಿಚಾರಣೆಗೆ ಹಾಜರಾಗದೇ ಇದ್ದಲ್ಲಿ 'ದೇಶಭ್ರಷ್ಟರ ಆರ್ಥಿಕ ಅಪರಾಧಗಳ ಕಾಯ್ದೆ'ಯಡಿ (ಎಫ್‌ಇಒ) ಆರೋಪಿಯ ವಿರುದ್ಧ ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ.

ಸುಪ್ರೀಂಕೋರ್ಟ್ ಕಲಾಪಗಳ ನೇರ ಪ್ರಸಾರಕ್ಕೆ ಒಲವು: ಸಿಜೆಐ

ನವದೆಹಲಿ (ಪಿಟಿಐ): 'ಸುಪ್ರೀಂಕೋರ್ಟ್‌ನಲ್ಲಿ ನಡೆಯುವ ಕಲಾಪಗಳನ್ನು ನೇರ ಪ್ರಸಾರ ಮಾಡಬೇಕು ಎಂಬ ಪ್ರಸ್ತಾವವನ್ನು ಕಾರ್ಯರೂಪಕ್ಕೆ ತರಲು ನಾನು ಒಲವು ಹೊಂದಿದ್ದೇನೆ' ಎಂದು ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಗುರುವಾರ ಹೇಳಿದರು.

ಸುಪ್ರೀಂಕೋರ್ಟ್ ವರ್ಚುವಲ್ ವಿಧಾನದ ಮೂಲಕ ನಡೆಸುವ ಕಲಾಪಗಳನ್ನು ಮಾಧ್ಯಮ ಪ್ರತಿನಿಧಿಗಳೂ ವೀಕ್ಷಿಸಲು ಸಾಧ್ಯವಾಗುವ ಸಲುವಾಗಿ ಅಭಿವೃದ್ಧಿಪಡಿಸಿರುವ ಆ್ಯಪ್‌ನ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ಇದನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವ ಮುನ್ನ, ಸುಪ್ರೀಂಕೋರ್ಟ್‌ನ ಸಹೋದ್ಯೋಗಿಗಳಲ್ಲಿ ಒಮ್ಮತ ಮೂಡಿಸಬೇಕು. ಈ ನಿಟ್ಟಿನಲ್ಲಿ ಪ್ರಯತ್ನಿಸುವೆ' ಎಂದು ಅವರು ಹೇಳಿದರು.

ತಾವು ಪತ್ರಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ದಿನಗಳನ್ನು ಮೆಲುಕು ಹಾಕಿದ ಅವರು, 'ಕೋರ್ಟ್ ಕಲಾಪಗಳ ಕುರಿತು ವರದಿ ಮಾಡುವಾಗ ಪತ್ರಕರ್ತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದು ನನ್ನ ಅರಿವಿಗೆ ಬಂದಿತ್ತು. ಮಾಹಿತಿಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಅವರು ವಕೀಲರ ಮೇಲೆಯೇ ಅವಲಂಬಿತರಾಗಿರಬೇಕಾಗುತ್ತಿತ್ತು' ಎಂದರು.

'ಪತ್ರಕರ್ತರು ಕೋರ್ಟ್ ಕಲಾಪಗಳಿಗೆ ಹಾಜರಾಗಲು ಅನುಕೂಲವಾಗುವಂಥ ವ್ಯವಸ್ಥೆಯನ್ನು ರೂಪಿಸಬೇಕು ಎಂಬ ಬೇಡಿಕೆ ಆಗಲೇ ಕೇಳಿಬಂದಿದ್ದವು' ಎಂದೂ ಹೇಳಿದರು.

ಶಾಸಕ ಸ್ಥಾನಕ್ಕೆ ಇಬ್ಬರು ಸಂಸದರ ರಾಜೀನಾಮೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ಆಯ್ಕೆಯಾಗಿದ್ದ ಬಿಜೆಪಿಯ ಲೋಕಸಭೆ ಸದಸ್ಯರಾದ ಜಗನ್ನಾಥ ಸರ್ಕಾರ್ ಮತ್ತು ನಿಶಿತ್ ಪ್ರಮಾಣಿಕ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಇಬ್ಬರು ಲೋಕಸಭೆಯಲ್ಲಿ ಕ್ರಮವಾಗಿ ರಣಘಾಟ್ ಮತ್ತು ಕೂಚ್‌ಬಿಹಾರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಇವರು ಬುಧವಾರ ವಿಧಾನಸಭೆ ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಬಿಜೆಪಿ ನಾಯಕತ್ವದ ಸೂಚನೆಯಂತೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇವೆ ಎಂದು ಪ್ರಮಾಣಿಕ್ ತಿಳಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ

Astrology

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

ಸ್ತ್ರೀ ವಶೀ ಸ್ತ್ರೀ ವಶೀಕರಣ, ಪುರುಷ ವಶೀಕರಣ, ಮಾಟ ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ. ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

ವಾಹನ

Four Wheelers Selling

Others

ಅಕ್ಷಯ ತೃತೀಯಕ್ಕೆ ಕೊಳ್ಳಿರಿ ಟಾಟಾ ಏಸ್ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿಕೊಳ್ಳಿ
ACE Gold ಪೆಟ್ರೋಲ್ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ACE GOLD BS6
Ace ಪೆಟ್ರೋಲ್, ಡೀಸಲ್ ಮತ್ತು ಸಿಎನ್‌ಜಿ ಮಾದರಿಯಲ್ಲೂ ಲಭ್ಯ
1.99%* ಬಡ್ಡಿದರ
ಎಕ್ಸ್‌ಚೇಂಜ್ ಬೋನಸ್ ₹15,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 9620955858
Bagalkot/Bijapur/Gulbarga/Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · JOB · NOTICE · NAME CHANGE · ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassifieds@deccanherald.co.in

ಶ್ರದ್ಧಾಂಜಲಿ ಮತ್ತು ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
DH DECCAN HERALD · ಪ್ರಜಾವಾಣಿ
ಸಂತೋಷ್ ಕುಮಾರ್ : 9880856233
ಜೆರ್ರಿ : 9731810277 | ರವಿಚಂದ್ರ : 9901641752
ವಿಶಾಲ್ : 9845114560 | ತನ್ವೀರ್ : 9886213331
ಇ-ಮೇಲ್ : dhclassifieds@deccanherald.co.in

ಆಗಸ್ಟ್ ಬಳಿಕ 216 ಕೋಟಿ ಡೋಸ್ ಲಸಿಕೆ ಲಭ್ಯ: ನೀತಿ ಆಯೋಗದ ಸದಸ್ಯ ಪಾಲ್ ಹೇಳಿಕೆ

ಇನ್ನೂ ಮೂರು ತಿಂಗಳು ಲಸಿಕೆ ಬಿಕ್ಕಟ್ಟು

ನವದೆಹಲಿ (ಪಿಟಿಐ): ಭಾರತವು ಈಗ ಎದುರಿಸುತ್ತಿರುವ ಕೋವಿಡ್ ಲಸಿಕೆ ಬಿಕ್ಕಟ್ಟು ಇನ್ನೂ ಮೂರು ತಿಂಗಳು ಮುಂದುವರಿಯುವ ಸಾಧ್ಯತೆ ಇದೆ. ಆಗಸ್ಟ್‌ನಿಂದ ಲಸಿಕೆ ಪೂರೈಕೆ ಹೆಚ್ಚಳವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಆಗಸ್ಟ್ ಮತ್ತು ಡಿಸೆಂಬರ್ ನಡುವಲ್ಲಿ 216 ಕೋಟಿ ಡೋಸ್ ಲಸಿಕೆಗಳು ಲಭ್ಯವಾಗಲಿದೆ. ಅದರಲ್ಲಿ 75 ಕೋಟಿ ಡೋಸ್ ಕೋವಿಶೀಲ್ಡ್, 55 ಕೋಟಿ ಡೋಸ್ ಕೋವ್ಯಾಕ್ಸಿನ್ ಇರಲಿವೆ ಎಂದು ನೀತಿ ಆಯೋಗದ ಸದಸ್ಯ ವಿನೋದ್ ಪಾಲ್ ತಿಳಿಸಿದ್ದಾರೆ

'ಮುಂದಿನ ವರ್ಷದ ಮೊದಲ ತ್ರೈಮಾಸಿಕ ವೇಳೆಗೆ ದೇಶದಲ್ಲಿ 300 ಕೋಟಿ ಡೋಸ್‌ಗಳಷ್ಟು ಲಸಿಕೆ ಲಭ್ಯವಾಗುವುದು' ಎಂದು ನೀತಿ ಆಯೋಗದ ಸದಸ್ಯ ಪಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಆಗಸ್ಟ್‌ನಿಂದ ಡಿಸೆಂಬರ್ ವರೆಗಿನ ಅವಧಿಯಲ್ಲಿ ಕೋವಿಶೀಲ್ಡ್ ಲಸಿಕೆಯ 75 ಕೋಟಿ ಡೋಸ್ ಹಾಗೂ ಕೋವ್ಯಾಕ್ಸಿನ್‌ನ 55 ಕೋಟಿ ಡೋಸ್ ಉತ್ಪಾದನೆಯಾಗುವ ನಿರೀಕ್ಷೆ ಹೊಂದಲಾಗಿದೆ' ಎಂದೂ ಅವರು ಹೇಳಿದರು.

ಕೋವಿಡ್–19 ವಿರುದ್ಧದ ಮತ್ತೊಂದು ಲಸಿಕೆಯಾದ ನೋವಾವ್ಯಾಕ್ಸ್‌ನ 30 ಕೋಟಿ ಡೋಸ್‌ಗಳನ್ನು ಬಯಾಲಾಜಿಕಲ್–ಇ ಕಂಪನಿ ಉತ್ಪಾದಿಸಲಿದೆ. ಝೈಡಸ್–ಕ್ಯಾಡಿಲಾ ಕಂಪನಿ 5 ಕೋಟಿ ಡೋಸ್, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ 20 ಡೋಸ್‌ಗಳನ್ನು ಉತ್ಪಾದಿಸಲಿವೆ.

ಕೋವ್ಯಾಕ್ಸಿನ್: ಮಕ್ಕಳ ಮೇಲಿನ ಪ್ರಯೋಗಕ್ಕೆ ಅನುಮತಿ

ನವದೆಹಲಿ (ಪಿಟಿಐ): ಕೋವಿಡ್–19ರ ಚಿಕಿತ್ಸೆಗಾಗಿ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆಯನ್ನು 2 ರಿಂದ 18 ವರ್ಷದೊಳಗಿನವರ ಮೇಲೆ ಎರಡು ಮತ್ತು ಮೂರನೇ ಹಂತದ ಕ್ಲಿನಿಕಲ್ ಪ್ರಯೋಗ ನಡೆಸಲು ಭಾರತದ ಪ್ರಧಾನ ಔಷಧ ನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಆರೋಗ್ಯವಂತ 525 ಸ್ವಯಂಸೇವಕರ ಮೇಲೆ ಈ ಪ್ರಯೋಗ ನಡೆಯಲಿದೆ. ಡಿಸಿಜಿಐ ಎಚ್ಚರಿಕೆಯಿಂದ ಪರೀಕ್ಷಿಸಿದ ನಂತರ ವಿಷಯ ತಜ್ಞರ ಸಮಿತಿಯ (ಎಸ್‌ಇಸಿ) ಶಿಫಾರಸನ್ನು ಅಂಗೀಕರಿಸಿದೆ. ಜತೆಗೆ ಕೊವ್ಯಾಕ್ಸಿನ್ ಅನ್ನು 2ರಿಂದ 18 ವರ್ಷದೊಳಗಿನವರ ಮೇಲೆ ಎರಡು ಮತ್ತು ಮೂರನೇ ಹಂತದ ಕ್ಲಿನಿಕಲ್ ಪ್ರಯೋಗ ನಡೆಸಲು ಅನುಮತಿ ನೀಡಿದೆ ಎಂದು ಸಚಿವಾಲಯ ತಿಳಿಸಿದೆ.

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ಸಹಯೋಗದೊಂದಿಗೆ ಭಾರತ್ ಬಯೋಟೆಕ್ ಸ್ಥಳೀಯವಾಗಿ ಕೋವ್ಯಾಕ್ಸಿನ್ ಅನ್ನು ಅಭಿವೃದ್ಧಿಪಡಿಸಿದೆ. ಭಾರತದಲ್ಲಿ ಪ್ರಸ್ತುತ ನಡೆಯುತ್ತಿರುವ ಕೋವಿಡ್-19ರ ಲಸಿಕಾ ಅಭಿಯಾನದಲ್ಲಿ ವಯಸ್ಕರಿಗೆ ಈ ಲಸಿಕೆಯನ್ನು ನೀಡಲಾಗುತ್ತಿದೆ.

'ಸ್ಪುಟ್ನಿಕ್-ವಿ ಮುಂದಿನ ವಾರ ಮಾರುಕಟ್ಟೆಗೆ'

ನವದೆಹಲಿ (ಪಿಟಿಐ): ರಷ್ಯಾ ಅಭಿವೃದ್ಧಿಪಡಿಸಿರುವ ಕೋವಿಡ್–19 ವಿರುದ್ಧದ ಲಸಿಕೆ 'ಸ್ಪುಟ್ನಿಕ್ ವಿ' ಮುಂದಿನ ವಾರದಿಂದ ದೇಶದ ಮಾರುಕಟ್ಟೆಯಲ್ಲಿ ಲಭ್ಯವಿರಲಿದೆ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ಈ ಕುರಿತು ಮಾಹಿತಿ ನೀಡಿರುವ ನೀತಿ ಆಯೋಗದ ಸದಸ್ಯ ಡಾ.ವಿ. ಕೆ.ಪೌಲ್, 'ಸ್ಪುಟ್ನಿಕ್ ವಿ ಮುಂದಿನ ವಾರ ಮಾರುಕಟ್ಟೆಯಲ್ಲಿ ಲಭ್ಯವಿರಲಿದೆ ಎಂದು ತಿಳಿಸಲು ನನಗೆ ಸಂತಸವೆನಿಸುತ್ತದೆ. ಈ ಲಸಿಕೆಯನ್ನು ರಷ್ಯಾ ಸೀಮಿತ ಪ್ರಮಾಣದಲ್ಲಿ ಪೂರೈಕೆ ಮಾಡುತ್ತಿದೆ' ಎಂದರು.

ರಷ್ಯಾ ತಯಾರಿಸಿರುವ ಸ್ಪುಟ್ನಿಕ್ ವಿ ಲಸಿಕೆಯ ಎರಡು ಡೋಸ್‌ಗಳು ಕೋವಿಡ್–19 ವಿರುದ್ಧ ಶೇ 91.6ರಷ್ಟು ಪರಿಣಾಮಕಾರಿ ಎಂದು ವೈಜ್ಞಾನಿಕ ನಿಯತಕಾಲಿಕೆ 'ದಿ ಲ್ಯಾನ್ಸೆಟ್' ವರದಿ ಮಾಡಿದೆ.

ದೇಶದಲ್ಲಿ ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆಗಳ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ, 'ಸ್ಪುಟ್ನಿಕ್ ವಿ' ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಕೆ ಮಾಡಲು ಡಿಸಿಜಿಐ ಕಳೆದ ತಿಂಗಳು ಅನುಮೋದನೆ ನೀಡಿದೆ. ಈ ಲಸಿಕೆಯನ್ನು ಭಾರತದಲ್ಲಿ ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ಕಂಪನಿ ಉತ್ಪಾದಿಸುತ್ತದೆ.

ಗೋವಾ: ಮತ್ತೆ 15 ಕೋವಿಡ್ ರೋಗಿಗಳ ಸಾವು

ಪಣಜಿ (ಪಿಟಿಐ): ಗೋವಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಜಿಎಂಸಿಎಚ್) ಗುರುವಾರ ನಸುಕಿನಲ್ಲಿ 15 ಜನ ಕೋವಿಡ್–19 ರೋಗಿಗಳು ಮೃತಪಟ್ಟಿದ್ದಾರೆ ಎಂದು ಗೋವಾ ರಾಜ್ಯ ಸರ್ಕಾರ ಬಾಂಬೆ ಹೈಕೋರ್ಟ್‌ನ ಪಣಜಿ ಪೀಠಕ್ಕೆ ತಿಳಿಸಿದೆ.

ಜಿಎಂಸಿಎಚ್‌ನಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಇದೆ ಎಂದು ದೂರಿ ಕೆಲವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ವೇಳೆ ಹೈಕೋರ್ಟ್ ಪೀಠಕ್ಕೆ ಸರ್ಕಾರ ಈ ಮಾಹಿತಿಯನ್ನು ಒದಗಿಸಿದೆ.

'ಆಮ್ಲಜನಕ ಪೂರೈಕೆಯಲ್ಲಿನ ವ್ಯತ್ಯಯ ಕೆಲವು ರೋಗಿಗಳ ಸಾವಿಗೆ ಕಾರಣವಾಗಿರಬಹುದು' ಎಂದೂ ಸರ್ಕಾರ ತಿಳಿಸಿದೆ.

'ಕೋವಿಡ್–19 ರೋಗಿಗಳಿಗೆ ಆಮ್ಲಜನಕವನ್ನು ಪೂರೈಕೆ ಮಾಡುವಲ್ಲಿ ಯಾವುದೇ ಸಮಸ್ಯೆಯಾಗದ ರೀತಿ ಕ್ರಮ ಕೈಗೊಳ್ಳಲು ಮೇ 12ರಂದು ಆದೇಶ ನೀಡಲಾಗಿತ್ತು. ಆದರೂ, ಜಿಎಂಸಿಎಚ್‌ನಲ್ಲಿ ಕೋವಿಡ್ ರೋಗಿಗಳು ಸಾವನ್ನಪ್ಪಿದ್ದಾರೆ' ಎಂದು ನ್ಯಾಯಮೂರ್ತಿಗಳಾದ ನಿತಿನ್ ಸಾಂಬ್ರೆ ಹಾಗೂ ಎಂ.ಎಸ್. ಸೋನಕ್ ಅವರಿರುವ ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ರೋಗಿಗಳಿಗೆ ಆಮ್ಲಜನಕ ಪೂರೈಸುವಲ್ಲಿ ಇರಬಹುದಾದ ಅಡ್ಡಿಗಳನ್ನು ಕೂಡಲೇ ನಿವಾರಿಸಲು ಕ್ರಮ ಕೈಗೊಳ್ಳಬೇಕು' ಎಂದೂ ಪೀಠ ನಿರ್ದೇಶನ ನೀಡಿತು.

ಎರಡು ದಿನಗಳ ಹಿಂದೆ ಇದೇ ಆಸ್ಪತ್ರೆಯಲ್ಲಿ 26 ರೋಗಿಗಳು ಆಮ್ಲಜನಕದ ಕೊರತೆಯಿಂದ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಸಿಡಿಲಿಗೆ 18 ಆನೆಗಳ ಸಾವು

ಗುವಾಹಟಿ : ಅಸ್ಸಾಂನ ನಾಗಾನ್ ಜಿಲ್ಲೆಯ ಅರಣ್ಯದಲ್ಲಿ ಸಿಡಿಲು ಬಡಿದು ಹದಿನೆಂಟು ಆನೆಗಳು ಮೃತಪಟ್ಟಿವೆ ಎಂದು ಅರಣ್ಯ ಇಲಾಖೆ ಅಧಿಕಾರಿ ಗುರುವಾರ ತಿಳಿಸಿದ್ದಾರೆ.

'ಕಥಿಯಾಟೋಲಿ ವಲಯದಲ್ಲಿ ಈ ಘಟನೆ ನಡೆದಿದ್ದು, ಸಿಡಿಲು ಬಡಿದು ಆನೆಗಳು ಮೃತಪಟ್ಟಿವೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಆದರೆ, ಮರಣೋತ್ತರ ಪರೀಕ್ಷೆಯ ನಂತರವೇ ನಿಖರವಾದ ಕಾರಣ ತಿಳಿಯಲಿದೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅಮಿತ್ ಸಹಾಯ್ ತಿಳಿಸಿದ್ದಾರೆ.

ಭಾರತ–ಪಾಕ್ ಸಿಹಿ ವಿತರಣೆ

ಶ್ರೀನಗರ/ ಜಮ್ಮು (ಪಿಟಿಐ): ಈದ್ ಸಂಭ್ರಮದ ಪ್ರಯುಕ್ತ ಭಾರತ–ಪಾಕ್ ಗಡಿಯಲ್ಲಿ ಎರಡೂ ರಾಷ್ಟ್ರಗಳ ಸೈನಿಕರು ಸಿಹಿಯನ್ನು ವಿನಿಮಯ ಮಾಡಿಕೊಂಡರು.

ಈದ್ ಉಲ್ ಫಿತ್ರ್ ಹಾಗೂ ದೀಪಾವಳಿ ಹಾಗೂ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳ ಸೈನಿಕರು ಸಿಹಿಯನ್ನು ವಿನಿಮಯ ಮಾಡುವ ಸಂಪ್ರದಾಯವನ್ನು ಪುನರಾರಂಭಿಸಲಾಗಿದೆ ಎಂದು ರಕ್ಷಣಾ ಇಲಾಖೆ ವಕ್ತಾರರು ತಿಳಿಸಿದ್ದಾರೆ.

ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಿಯೇ ಸಿಹಿ ವಿತರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಸಂಸತ್ ಮೇಲೆ ದಾಳಿಗೆ ಸಂಚು: ಇಬ್ಬರ ಬಂಧನ

ಢಾಕಾ(ಪಿಟಿಐ): ಸಂಸತ್ತಿನ ಮೇಲೆ ದಾಳಿ ನಡೆಸಲು ಸಂಚು ರೂಪಿಸುವ ಜೊತೆಗೆ ತಮ್ಮ ಕೃತ್ಯದಲ್ಲಿ ಇತರರು ಪಾಲ್ಗೊಳ್ಳುವಂತೆ ಪ್ರೇರೇಪಿಸಿದ ಆರೋಪದ ಮೇಲೆ ಬಾಂಗ್ಲಾದೇಶದ ಭಯೋತ್ಪಾದನಾ ನಿಗ್ರಹ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ನಿಷೇಧಿತ ಉಗ್ರ ಸಂಘಟನೆಯಾದ ಅನ್ಸಾರ್ ಅಲ್ ಇಸ್ಲಾಂನ ಸದಸ್ಯ ಅಬು ಸಕೀಬ್ (22), ಮತ್ತು ಅಲಿ ಹಸನ್ ಒಸಾಮ ಬಂಧಿತ ಆರೋಪಿಗಳು.

ಅಣುಸ್ಥಾವರ ಪುನರಾರಂಭ

ಟೋಕಿಯೊ (ರಾಯಿಟರ್ಸ್): ಫುಕುಶಿಮಾ ಅಣುವಿದ್ಯುತ್ ಸ್ಥಾವರದಲ್ಲಿ ಹತ್ತು ವರ್ಷಗಳ ಹಿಂದೆ ಸಂಭವಿಸಿದ ದುರಂತದ ಬಳಿಕ ಸ್ಥಗಿತವಾಗಿದ್ದ ಮಿಹಮಾದಲ್ಲಿನ ಅಣುವಿದ್ಯುತ್ ಸ್ಥಾವರವನ್ನು ಕನ್‌ಸೈ ಎಲೆಕ್ಟ್ರಿಕ್ ಪವರ್ ಕಂಪನಿ ಮುಂದಿನ ತಿಂಗಳು ಪುನರಾರಂಭಿಸಲಿದ್ದು, ಅಕ್ಟೋಬರ್ ವೇಳೆಗೆ ಮತ್ತೆ ಸ್ಥಗಿತಗೊಳಿಸಲಿದೆ.

ಜಪಾನ್‌ನಲ್ಲಿ ಇದೀಗ ಬಿರು ಬೇಸಿಗೆ ಇದ್ದು, ವಿದ್ಯುತ್‌ಗೆ ಭಾರಿ ಬೇಡಿಕೆ ಎದುರಾಗಿದೆ. ಇದನ್ನು ನಿಭಾಯಿಸುವ ಸಲುವಾಗಿ 40 ವರ್ಷಗಳಷ್ಟು ಹಳೆಯದಾಗಿರುವ ಮಿಹಿಮಾ ನಂ.3 ಅಣುಸ್ಥಾವರವನ್ನು ಪುನರಾರಂಭಿಸಲಾಗುತ್ತದೆ ಎಂದು ಕಂಪನಿಯ ವಕ್ತಾರರೊಬ್ಬರು ತಿಳಿಸಿದ್ದಾರೆ.

ಕಿಸಾನ್ ಸಮ್ಮಾನ್: 8ನೇ ಕಂತು ಇಂದು ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ' (ಪಿಎಂ–ಕಿಸಾನ್) ಯೋಜನೆಯಡಿ 8ನೇ ಕಂತಿನ ಹಣವನ್ನು ಶುಕ್ರವಾರ (ಮೇ 14) ಬಿಡುಗಡೆ ಮಾಡುವರು.

ವಿಡಿಯೊ ಕಾನ್ಫರೆನ್ಸ್ ವಿಧಾನದ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ 9.5 ಕೋಟಿಗೂ ಅಧಿಕ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ₹ 19,000 ಕೋಟಿಗೂ ಅಧಿಕ ಮೊತ್ತವನ್ನು ವರ್ಗಾಯಿಸಲಾಗುವುದು ಎಂದು ಪ್ರಧಾನ ಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಇದೇ ಕಾರ್ಯಕ್ರಮದಲ್ಲಿ ಮೋದಿಯವರು ಫಲಾನುಭವಿಗಳೊಂದಿಗೆ ಸಂವಾದ ನಡೆಸುವರು. ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಸಹ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

'ಮತ್ತೊಮ್ಮೆ ಕೊರೊನಾ ವೈರಸ್ ದಾಳಿ: ರಾಷ್ಟ್ರಮಟ್ಟದ ಸಿದ್ಧತೆ ಅಗತ್ಯ'

ನವದೆಹಲಿ (ಪಿಟಿಐ): 'ಕೊರೊನಾ ವೈರಸ್ ಮತ್ತೆ ದಾಳಿ ಮಾಡಲಿದೆ. ಹೀಗಾಗಿ, ಈ ವೈರಸ್ ದಾಳಿಯನ್ನು ಎದುರಿಸಲು ರಾಜ್ಯಗಳ ನಡುವಿನ ಸಮನ್ವಯದೊಂದಿಗೆ ರಾಷ್ಟ್ರ ಮಟ್ಟದಲ್ಲಿ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ' ಎಂದು ನೀತಿ ಆಯೋಗದ ಆರೋಗ್ಯ ವಿಭಾಗದ ಸದಸ್ಯ ಡಾ.ವಿ. ಕೆ.ಪಾಲ್ ಗುರುವಾರ ಹೇಳಿದರು.

'ಕೋವಿಡ್–19 ರೋಗಿಗಳ ಚಿಕಿತ್ಸೆಗಾಗಿ ಮೂಲಸೌಕರ್ಯಗಳನ್ನು ಹೆಚ್ಚಿಸಬೇಕು, ಸೋಂಕು ಪ್ರಸರಣದ ಸರಪಳಿಯನ್ನು ತುಂಡರಿಸಲು ಕಠಿಣ ನಿರ್ಬಂಧಗಳನ್ನು ಅನುಸರಿಸಬೇಕು' ಎಂದೂ ಅವರು ಹೇಳಿದ್ದಾರೆ.

ಕೋವಿಡ್‌ನ ಎರಡನೇ ಅಲೆ ಬಾಧಿಸುವುದನ್ನು ಅರಿಯುವಲ್ಲಿ ಸರ್ಕಾರ ವಿಫಲವಾಯಿತು ಎಂಬ ಆರೋಪಗಳನ್ನು ತಳ್ಳಿ ಹಾಕಿದ ಅವರು, 'ಕೋವಿಡ್–19ನ ಎರಡನೇ ಅಲೆಯ ಬಗ್ಗೆ ವಿವಿಧ ವೇದಿಕೆಗಳ ಮೂಲಕ ಸರ್ಕಾರ ಪದೇಪದೇ ಎಚ್ಚರಿಸುತ್ತಲೇ ಬಂದಿದೆ' ಎಂದರು.

'ದೇಶದ ಶೇ 80ರಷ್ಟು ಜನರ ಇನ್ನೂ ಸೋಂಕಿಗೆ ಒಳಗಾಗುವ ಅಪಾಯ ಎದುರಿಸುತ್ತಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 20ರಷ್ಟಿದೆ ಎಂದು ಈ ಹಿಂದೆಯೇ ಎಚ್ಚರಿಕೆ ನೀಡಲಾಗಿತ್ತು' ಎಂದೂ ಅವರು ಹೇಳಿದರು.

100 ಜಿಲ್ಲಾಧಿಕಾರಿಗಳ ಜೊತೆ ಚರ್ಚೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಅತ್ಯಧಿಕ ಕೋವಿಡ್ ಪ್ರಕರಣಗಳು ದಾಖಲಾಗುತ್ತಿರುವ 100 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಮೇ 18, 20ರಂದು ಸಮಾಲೋಚಿಸುವರು.

ಸರ್ಕಾರದ ಮೂಲಗಳ ಪ್ರಕಾರ, ಮೊದಲ ದಿನ 9 ರಾಜ್ಯಗಳ 46 ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಎರಡನೇ ದಿನ 10 ರಾಜ್ಯಗಳ 54 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆಗೆ ಪ್ರಧಾನಿ ಚರ್ಚಿಸಲಿದ್ದಾರೆ. ಸಂವಹನದ ವೇಳೆ ಆಯಾ ರಾಜ್ಯಗಳ ಮುಖ್ಯಮಂತ್ರಿ ಕೂಡಾ ಭಾಗವಹಿಸುವರು.

ಕೋವಿಡ್ ಪರಿಸ್ಥಿತಿ ಗಂಭೀರವಾದ ಬಳಿಕ ಪ್ರಧಾನಿ ಹೀಗೆ ಜಿಲ್ಲಾ ಹಂತದಲ್ಲಿ ಆಡಳಿತ ಅಧಿಕಾರಿಗಳ ಜೊತೆಗೆ ಚರ್ಚಿಸುತ್ತಿರುವುದು ಇದೇ ಮೊದಲು. ಇದುವರೆಗೂ ಮುಖ್ಯಮಂತ್ರಿಗಳ ಜೊತೆಗೆ ವಿವಿಧ ಸಭೆ ನಡೆಸಿದ್ದಾರೆ.

ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಾರ, ಶೇ 72ರಷ್ಟು ಹೊಸ ಸೋಂಕು ಪ್ರಕರಣಗಳು, ಶೇ 74.30ರಷ್ಟು ಸಾವಿನ ಪ್ರಕರಣಗಳು 10 ರಾಜ್ಯಗಳಲ್ಲಿ ದಾಖಲಾಗುತ್ತಿವೆ. ಈ ರಾಜ್ಯಗಳು– ಮಹಾರಾಷ್ಟ್ರ, ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ.

ಸೋಂಕಿತರ ಪ್ರಮಾಣ ಇಳಿಮುಖ

ನವದೆಹಲಿ: ಕಳೆದ ಒಂದು ತಿಂಗಳಿಂದ ಸಾರ್ವಜನಿಕರ ಆತಂಕ ಹೆಚ್ಚಿಸಿದ್ದ ಕೋವಿಡ್ ಎರಡನೇ ಅಲೆಯು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಿಯಂತ್ರಣಕ್ಕೆ ಬರುತ್ತಿದೆ. ಗುರುವಾರ ಕೊರೊನಾ ಸೋಂಕು ದೃಢಪಟ್ಟವರ ಪ್ರಮಾಣದಲ್ಲಿ ಭಾರಿ ಪ್ರಮಾಣದ ಇಳಿಕೆ ಕಂಡುಬಂದಿದೆ.

ಸತತ 4ನೇ ವಾರ ಲಾಕ್‌ಡೌನ್ ಮುಂದುವರಿದಿರುವ ಪರಿಣಾಮ ಸೋಂಕಿತರ ಶೇಕಡಾವಾರು ಪ್ರಮಾಣ ಇದೇ ಮೊದಲ ಬಾರಿಗೆ 15ಕ್ಕಿಂತ ಕಡಿಮೆ ದಾಖಲಾಗಿದೆ.

ಸತತ 6 ದಿನಗಳಿಂದ ಸೋಂಕಿತರ ಸಂಖ್ಯೆ ಕಡಿಮೆಯಾಗಿ, ಗುಣಮುಖರಾದವರ ಸಂಖ್ಯೆ ಹೆಚ್ಚುತ್ತಾ ಸಾಗಿರುವುದು ಆತಂಕವನ್ನು ಕೊಂಚ ಕಡಿಮೆ ಮಾಡಿದೆ.

ಹಬ್ಬದ ಸಡಗರ

ಕೋವಿಡ್ ಲಾಕ್‌ಡೌನ್ ಸಮಯದಲ್ಲೂ ಈದ್-ಉಲ್-ಫಿತ್ರ್ ಮುನ್ನಾದಿನದಂದು ಗುರುಗ್ರಾಮದ ಜುಮಾ ಮಸೀದಿ ಪಕ್ಕದಲ್ಲಿರುವ ಸದರ್ ಬಜಾರ್ ಮಾರುಕಟ್ಟೆಯಲ್ಲಿ ಗುರುವಾರ ಜನರು ಸಿಹಿತಿಂಡಿಗಳು ಮತ್ತು ಹೊಸ ಬಟ್ಟೆಗಳನ್ನು ಖರೀದಿಸಿದರು. (ಚಿತ್ರ: ಪಿಟಿಐ)

'ರಾಜ್ಯದಲ್ಲಿ ಹಾಸಿಗೆ ಕೊರತೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆ ಎದುರಿಸಲು ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಾಗಿದ್ದು, ಆರೋಗ್ಯ ಇಲಾಖೆ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ 24 ಸಾವಿರ ಆಮ್ಲಜನಕ ಸೌಲಭ್ಯದ ಹಾಸಿಗೆ, 1,145 ಐಸಿಯು ಹಾಸಿಗೆ, 2059 ವೆಂಟಿಲೇಟರ್ ಸಹಿತ ಹಾಸಿಗೆ, 1,248 ಎಚ್‌ಎಫ್‌ಎನ್‌ಸಿ ಹಾಸಿಗೆ ಲಭ್ಯವಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕಳೆದ ವರ್ಷ ಮಾರ್ಚ್‌ನಲ್ಲಿ ಕೇವಲ 1,970 ಆಮ್ಲಜನಕ ಸೌಲಭ್ಯದ ಹಾಸಿಗೆ, 444 ಐಸಿಯು, 610 ವೆಂಟಿಲೇಟರ್ ಸಹಿತ ಐಸಿಯು ಸೌಲಭ್ಯವಿತ್ತು' ಎಂದರು.

'ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಆಮ್ಲಜನಕ ಸೌಲಭ್ಯದ ಹಾಸಿಗೆ ,700ರಿಂದ 9,405ಕ್ಕೆ ಹೆಚ್ಚಿಸಲಾಗಿದೆ. ವೆಂಟಿಲೇಟೆಡ್ ಹಾಸಿಗೆಗಳ ಸಂಖ್ಯೆ 341ರಿಂದ 646ಕ್ಕೆ ಹೆಚ್ಚಿಸಲಾಗಿದೆ. ಎಚ್‌ಎಫ್‌ಎನ್‌ಸಿ ಹಾಸಿಗೆಗಳನ್ನು 15ರಿಂದ 570ಕ್ಕೆ ಹೆಚ್ಚಿಸಲಾಗಿದೆ' ಎಂದರು.

'ಖಾಸಗಿ ವೈದ್ಯಕೀಯ ಕಾಲೇಜುಗಳು ಆಮ್ಲಜನಕ ಹಾಸಿಗೆ ಹೆಚ್ಚಿಸಲು ಹಾಗೂ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪಿಸಲು ಸರ್ಕಾರ ಶೇ 70ರ ಸಹಾ ಧನ ನೀಡುತ್ತಿದೆ. ಸ್ಥಳೀಯವಾಗಿ ಆಮ್ಲಜನಕ ಉತ್ಪಾದನೆ ಹೆಚ್ಚಳ ಹಾಗೂ ಆಕ್ಸಿಜನ್ ಕಾನ್ಸಂಟ್ರೇಟರುಗಳು ಹಾಗೂ ಸಿಲಿಂಡರುಗಳನ್ನು ಹೆಚ್ಚಾಗಿ ಖರೀದಿಸುವ ಮೂಲಕ ಆಮ್ಲಜನಕ ಕೊರತೆ ನೀಗಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ವಿವರಿಸಿದರು.

'ಜಿಲ್ಲೆಗಳಲ್ಲಿರುವ ಆಮ್ಲಜನಕ ಬೇಡಿಕೆ ಪೂರೈಸಲು 10 ಸಾವಿರ ಆಮ್ಲಜನಕ ಸಿಲಿಂಡರ್ ಪಡೆಯಲು ತೀರ್ಮಾನಿಸಲಾಗಿದೆ. 15-20 ದಿನಗಳಲ್ಲಿ 730 ಆಮ್ಲಜನಕ ಸಿಲಿಂಡರ್ ತರಿಸಿದ್ದೇವೆ. ಕೇಂದ್ರ ಸರ್ಕಾರ 380 ಸಿಲಿಂಡರ್ ನೀಡಿದೆ. 350 ವಿದೇಶಗಳಿಂದ ಪಡೆಯಲಾಗಿದೆ' ಎಂದರು.

'ಕೋವಿಶೀಲ್ಡ್ ಲಸಿಕೆ ಪಡೆದ 14.87 ಲಕ್ಷ ಫಲಾನುಭವಿಗಳು ಆರು ವಾರ ಪೂರೈಸಿದ್ದು, ಎರಡನೇ ಡೋಸ್‌ಗೆ ಅರ್ಹತೆ ಹೊಂದಿದ್ದಾರೆ. ಕೋವ್ಯಾಕ್ಸಿನ್ ಮೊದಲ ಡೋಸ್ ಪಡೆದ 5.10 ಲಕ್ಷ ಫಲಾನುಭವಿಗಳು ನಾಲ್ಕು ವಾರ ಪೂರೈಸಿದ್ದು, ಎರಡನೇ ಡೋಸ್ ಪಡೆಯಲು ಅರ್ಹತೆ ಹೊಂದಿದ್ದಾರೆ. ಲಭ್ಯವಿರುವ ಲಸಿಕೆಯ ದಾಸ್ತಾನನ್ನು ಈ 19.97 ಲಕ್ಷ ಮಂದಿಗೆ ನೀಡಲು ನಿರ್ಧರಿಸಿದ್ದೇವೆ. ಹೀಗಾಗಿ, 18 ರಿಂದ 44 ವರ್ಷದೊಳಗಿನವರಿಗೆ ಲಸಿಕೆ ನೀಡುವ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದೇವೆ' ಎಂದರು.

'ರಾಜ್ಯದಲ್ಲಿ ರೆಮ್‌ಡಿಸಿವಿರ್‌ಗೆ ಬೇಡಿಕೆ ಹೆಚ್ಚಿರುವುದರಿಂದ ಇತರ ರಾಜ್ಯಗಳ ಕೋಟಾದಲ್ಲಿ ಬಳಕೆಯಾಗದೆ ಉಳಿದಿರುವುದನ್ನು ಪೂರೈಸುವಂತೆ ಕೇಂದ್ರಕ್ಕೆ ಮನವಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಜೀವ ಉಳಿಸುವುದು ಮೊದಲ ಆದ್ಯತೆ'

'ಸದ್ಯ ಜೀವ ಉಳಿಸುವುದು ನಮ್ಮ ಮೊದಲ ಆದ್ಯತೆ. ಪರಿಹಾರ ಕೊಡುವ ವಿಷಯದಲ್ಲಿ ಪರಿಸ್ಥಿತಿ ಅವಲೋಕಿಸಿ ತೀರ್ಮಾನಿಸಲಾಗುವುದು ಎಂದು ಯಡಿಯೂರಪ್ಪ ಹೇಳಿದರು.

ಸಂಕಷ್ಟದಲ್ಲಿರುವ ಜನರಿಗೆ ರಾಜ್ಯ ಸರ್ಕಾರ ಪ್ಯಾಕೇಜ್ ನೀಡಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಶ್ರಮಿಕ ವರ್ಗಕ್ಕೆ ತೊಂದರೆ ಆಗಿರುವುದು ಸರಿ. ಹೀಗಾಗಿ, ಇಂದಿರಾ ಕ್ಯಾಂಟೀನ್‌ನಲ್ಲಿ ಉಚಿತ ಆಹಾರ ನೀಡುತ್ತಿದ್ದೇವೆ. ಕೇಂದ್ರ ಸರ್ಕಾರ ಮೇ ಮತ್ತು ಜೂನ್ ತಿಂಗಳಿಗೆ ಬಿಪಿಎಲ್, ಅಂತ್ಯೋದಯ ಫಲಾನುಭವಿಗೆ ತಲಾ 5 ಕಿಲೋ ಅಕ್ಕಿ ಕೊಡುತ್ತಿದೆ ಎಂದರು.

'ಚಾಮರಾಜನಗರ ದುರಂತ ವಿಷಯದಲ್ಲಿ ಹೈಕೋರ್ಟ್‌ನಲ್ಲಿ ಇನ್ನೂ ವಿಚಾರಣೆ ನಡೆಯುತ್ತಿರುವುದರಿಂದ ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ಕೋವಿಡೇತರ ರೋಗಿಗಳಿಗೆ ಉಚಿತ ಚಿಕಿತ್ಸೆ

ಒಂದನೇ ಪುಟದಿಂದ

ಶಾಸಕ ದೊಡ್ಡಗೌಡರ ಸಹಾಯ: 'ಶಾಸಕ ಮಹಾಂತೇಶ ದೊಡ್ಡಗೌಡರ ಇಲ್ಲಿನ ವೈದ್ಯರಿಗೆ ಅಗತ್ಯ ನೆರವು ಒದಗಿಸಿಕೊಟ್ಟಿದ್ದಾರೆ. ಕಿತ್ತೂರು ತಾಲ್ಲೂಕಿನಲ್ಲಿ 5 ಸಾವಿರ ಔಷಧಿ ಕಿಟ್‌ಗಳ ಉಚಿತ ವಿತರಣೆಗೆ ನೆರವಾಗಿದ್ದಾರೆ' ಎಂದು ವೆಂಕಟೇಶ್ ಹೇಳಿದರು.

'ಮಹಾಂತೇಶ ಕಲ್ಮಠ, ಎ.ಎಚ್. ಲಾಡಖಾನ್, ಡಾ.ಬಸವರಾಜ ಪರವಣ್ಣವರ, ಮಹೇಶ ಹಟ್ಟಿಹೊಳಿ ಸೇರಿದಂತೆ 14 ವೈದ್ಯರು ಉಚಿತ ಚಿಕಿತ್ಸೆ ಕೇಂದ್ರಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ' ಎಂದರು.

ಬುಧವಾರ ಕಿತ್ತೂರಿಗೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಅವರು ಇಲ್ಲಿಯ ವೈದ್ಯರ ಉಚಿತ ಸೇವೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಲಾಕ್‌ಡೌನ್ ವಿಸ್ತರಣೆ

ಮುಂಬೈ/ಪಟ್ನಾ (ಪಿಟಿಐ): ಕೋವಿಡ್ ಪಿಡುಗನ್ನು ನಿಯಂತ್ರಿಸುವ ಸಲುವಾಗಿ ಮಹಾರಾಷ್ಟ್ರ ಸರ್ಕಾರವು ಲಾಕ್‌ಡೌನ್ ಮಾದರಿಯ ನಿರ್ಬಂಧಗಳನ್ನು ಜೂನ್ 1ರ ವರೆಗೆ ವಿಸ್ತರಿಸಿದೆ.ಬಿಹಾರದಲ್ಲಿ ಲಾಕ್‌ಡೌನ್ ಅವಧಿಯನ್ನು ಮೇ 25ರವರೆಗೂ ವಿಸ್ತರಿಸಲಾಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಈ ತೀರ್ಮಾನ ಪ್ರಕಟಿಸಿದರು.

ಸೆಂಟ್ರಲ್ ವಿಸ್ತಾ ಕಾಮಗಾರಿ ನಿಲ್ಲಿಸಲು ಕಾಂಗ್ರೆಸ್ ಒತ್ತಡ

ಛತ್ತೀಸಗಡ ವಿಧಾನಸಭೆ ಕಟ್ಟಡ ಕಾಮಗಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬಘೇಲ್

ನವದೆಹಲಿ: ಛತ್ತೀಸಗಡ ವಿಧಾನಸಭೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೋವಿಡ್ ಸಾಂಕ್ರಾಮಿಕವು ಉಲ್ಬಣಗೊಂಡಿರುವ ಕಾರಣ ಸ್ಥಗಿತಗೊಳಿಸಿರುವುದಾಗಿ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಗುರುವಾರ ಪ್ರಕಟಿಸಿದ್ದಾರೆ. ಕೇಂದ್ರವು ಸೆಂಟ್ರಲ್ ವಿಸ್ತಾ ಯೋಜನೆಯನ್ನು ಸ್ಥಗಿತಗೊಳಿಸಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಲು ಕಾಂಗ್ರೆಸ್ ಪಕ್ಷಕ್ಕೆ ಈ ನಿರ್ಧಾರವು ಅವಕಾಶ ಮಾಡಿಕೊಟ್ಟಿದೆ.

'ಜನರೇ ನಮ್ಮ ಆದ್ಯತೆ. ವಿಧಾನಸಭೆ, ರಾಜಭವನ, ಮುಖ್ಯಮಂತ್ರಿ ನಿವಾಸ, ಸಚಿವರ ಅಧಿಕೃತ ನಿವಾಸಗಳ ನಿರ್ಮಾಣಕ್ಕೆ ಕೋವಿಡ್–19 ಪಿಡುಗು ಉಲ್ಬಣಗೊಳ್ಳುವ ಮೊದಲೇ ಶಿಲಾನ್ಯಾಸ ಮಾಡಲಾಗಿತ್ತು. ಈ ಎಲ್ಲ ನಿವೇಶನಗಳಲ್ಲಿಯೂ ಕೆಲಸ ನಿಲ್ಲಲಿದೆ' ಎಂದು ಬಘೆಲ್ ಹೇಳಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ನೂತನ ವಿಧಾನಸಭೆ ಕಟ್ಟಡದ ಶಿಲಾನ್ಯಾಸವನ್ನು 2020ರ ಆ.30ರಂದು ನೆರವೇರಿಸಿದ್ದರು.

ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರು ಬಘೆಲ್ ಅವರ ನಿರ್ಧಾರವನ್ನು ಉಲ್ಲೇಖಿಸಿ, ಪ್ರಧಾನಿ ನರೇಂದ್ರ ಮೋದಿ ಅವರೂ ಇದನ್ನು ಅನುಸರಿಸಬೇಕು. ಸೆಂಟ್ರಲ್ ವಿಸ್ತಾ ಕಾಮಗಾರಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರೇ, ಪ್ರಜಾಪ್ರಭುತ್ವದಲ್ಲಿ ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಸರ್ಕಾರವು ಕೆಲಸ ಮಾಡುವುದು ಹೀಗೆ. ಛತ್ತೀಸಗಡ ಸರ್ಕಾರಕ್ಕೆ ಎಲ್ಲಕ್ಕಿಂತಲೂ ಜನರ ಜೀವವೇ ಮುಖ್ಯ. ಕೋವಿಡ್ ತಡೆಯ ಪ್ರಯತ್ನಗಳನ್ನು ದುಪ್ಪಟ್ಟುಗೊಳಿಸಲಾಗಿದೆ. ನೀವು ಕಲಿಯುವುದು ಮತ್ತು ಸೆಂಟ್ರಲ್ ವಿಸ್ತಾದಂತಹ ಹುಚ್ಚಾಟ ನಿಲ್ಲಿಸುವುದು ಯಾವಾಗ' ಎಂದು ರಮೇಶ್ ಪ್ರಶ್ನಿಸಿದ್ದಾರೆ.

ಸೆಂಟ್ರಲ್ ವಿಸ್ತಾ ಕಾಮಗಾರಿ ತಡೆಗೆ ಕಾಂಗ್ರೆಸ್ ಪಕ್ಷದ ಒತ್ತಡ ಹೆಚ್ಚಾಗುತ್ತಿದ್ದಂತೆಯೇ ಛತ್ತೀಸಗಡ ವಿಧಾನಸಭೆಯ ಹೊಸ ಕಟ್ಟಡ ಕಾಮಗಾರಿಯನ್ನು ಉಲ್ಲೇಖಿಸಿ ಬಿಜೆಪಿ ತಿರುಗೇಟು ನೀಡಿತ್ತು.

'ಆರ್ಥಿಕ ಸ್ಥಿತಿಯ ಶ್ವೇತಪತ್ರ ಹೊರಡಿಸಿ'

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ, 'ಬಡವರಿಗೆ ತಕ್ಷಣ ಆಹಾರ ಮತ್ತು ಆರ್ಥಿಕ ಪ್ಯಾಕೇಜ್ ಘೋಷಿಸಬೇಕು. ರಾಜ್ಯದ ಆರ್ಥಿಕ ಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ತಾವು ಮುಖ್ಯಮಂತ್ರಿಯಾಗಿದ್ದಾಗ ಮಾಡಿರುವ ಸಾಲದ ಬಗ್ಗೆ ಅಂಕಿ-ಅಂಶ ಸಮೇತ ವಿವರಿಸಿರುವ ಅವರು, 'ಸಾಲದ ವಿಚಾರದಲ್ಲಿ ಬಿಜೆಪಿ ಸುಳ್ಳು ಅಭಿಪ್ರಾಯಗಳನ್ನು ರೂಪಿಸುತ್ತಿದೆ. ಹಿಂದಿನ ಮುಖ್ಯಮಂತ್ರಿ ಹೆಚ್ಚು ಸಾಲ ಮಾಡಿಬಿಟ್ಟಿದ್ದರು ಎಂದು ಅಪಪ್ರಚಾರ ಮಾಡುತ್ತಿದೆ. ಬಿಜೆಪಿ ಎಂದರೆ ಸುಳ್ಳಿನ ಕಾರ್ಖಾನೆ ಎಂಬುದರ ಕುರಿತು ಜನರಿಗೆ ಈಗ ಯಾವ ಸಂಶಯವೂ ಉಳಿದಿಲ್ಲ' ಎಂದು ದೂರಿದ್ದಾರೆ.

'ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳಿದ್ದ ಮುಖ್ಯಮಂತ್ರಿ, ಈಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಯಾವುದೇ ಆರ್ಥಿಕ ಪ್ಯಾಕೇಜು ನೀಡಲಾಗುವುದಿಲ್ಲ ಎನ್ನುತ್ತಿದ್ದಾರೆ. ಹಾಗಿದ್ದರೆ, ರಾಜ್ಯದ ಜನ ಏನು ಮಾಡಬೇಕು, ಏನು ತಿನ್ನಬೇಕು' ಎಂದು ಪ್ರಶ್ನಿಸಿದ್ದಾರೆ.

ಎಚ್ಚೆತ್ತುಕೊಂಡಿಲ್ಲ: 'ಕೊರೊನಾ ಸೋಂಕು ತ್ವರಿತ ಗತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹರಡುತ್ತಿರುವುದು ಆಘಾತಕಾರಿ ಬೆಳವಣಿಗೆ. ಚಾಮರಾಜನಗರದಲ್ಲಿ ಸಂಭವಿಸಿದ ದುರಂತ 25 ಅಮಾಯಕರನ್ನು ಬಲಿ ತೆಗೆದುಕೊಂಡ ನಂತರವೂ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿಲ್ಲ' ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

'ರಾಜ್ಯದಲ್ಲಿ ಈಗಿನ ಶೇ 55ರಷ್ಟು ಸೋಂಕಿನ ಪ್ರಕರಣಗಳು ಗ್ರಾಮೀಣ ಪ್ರದೇಶದಿಂದ ವರದಿಯಾಗುತ್ತಿರುವುದನ್ನು ತಜ್ಞರು ಗುರುತಿಸಿದ್ದಾರೆ. ತಿಂಗಳ ಹಿಂದೆ ಈ ಪ್ರಮಾಣ ಶೇ 30ರಷ್ಟಿತ್ತು. ಬೆಂಗಳೂರು ನಗರಕ್ಕಷ್ಟೇ ಸೀಮಿತವಾಗದೆ ಜಿಲ್ಲೆ, ತಾಲ್ಲೂಕು, ಗ್ರಾಮಗಳ ಕಡೆ ಗಮನಹರಿಸಬೇಕಾಗಿದೆ. ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ, ಐಸಿಯು, ವೆಂಟಿಲೇಟರ್ ಮತ್ತು ವೈದ್ಯಕೀಯ ಸಿಬ್ಬಂದಿಯ ವ್ಯವಸ್ಥೆ ಬಲಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಕಳೆದೆರಡು ತಿಂಗಳ ಅವಧಿಯಲ್ಲಿ ಹೆಚ್ಚು ಸೋಂಕಿನ ಪ್ರಕರಣಗಳಿದ್ದ ಮಹಾರಾಷ್ಟ್ರ ಸೇರಿದಂತೆ ಬೇರೆ ರಾಜ್ಯಗಳಿಂದ ಜನ ಯಾವುದೇ ತಪಾಸಣೆಯಿಲ್ಲದೆ ಬೆಂಗಳೂರಿಗೆ ಬಂದಿದ್ದಾರೆ. ಇಲ್ಲಿನ ಸ್ಥಿತಿ ಬಿಗಡಾಯಿಸಿದ ನಂತರ ಜನ ಹಿಂಡುಗಟ್ಟಿಕೊಂಡು ಜಿಲ್ಲೆಗಳಿಗೆ ತೆರಳಿದ್ದಾರೆ. ಅಂತರರಾಜ್ಯ ಮಾತ್ರವಲ್ಲ ಅಂತರಜಿಲ್ಲಾ ಸಂಚಾರ ನಿರ್ಬಂಧಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಎಚ್‌.ಡಿ. ಕುಮಾರಸ್ವಾಮಿ- ತೇಜಸ್ವಿ ಸೂರ್ಯ ಟ್ವೀಟ್ ಜಗಳ

ರಾಜ್ಯಕ್ಕೆ ಲಭ್ಯವಾದ ಆಮ್ಲಜನಕ ಎಷ್ಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಕೇಂದ್ರ ಸರ್ಕಾರ ಎಷ್ಟು ಪ್ರಮಾಣದಲ್ಲಿ ಆಮ್ಲಜನಕ ಪೂರೈಕೆ ಮಾಡಿದೆ ಎಂಬ ಬಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮತ್ತು ಸಂಸದ ತೇಜಸ್ವಿ ಸೂರ್ಯ ಅವರ ಮಧ್ಯೆ ಟ್ವೀಟ್ ಸಮರ ನಡೆಸಿದೆ.

'ಕರ್ನಾಟಕಕ್ಕೆ ಪ್ರತಿ ನಿತ್ಯದ 1,200 ಟನ್ ಆಮ್ಲಜನಕ ಪೂರೈಸಬೇಕು ಎಂಬ ನ್ಯಾಯಾಲಯದ ಆದೇಶ ನಂತರವೂ ಕೇಂದ್ರ ಸರ್ಕಾರ ಕೇವಲ 120 ಟನ್ ಆಮ್ಲಜನಕ ಪೂರೈಕೆ ಮಾಡಿದೆ. ಆದರೆ, ಉತ್ತರ ಪ್ರದೇಶಕ್ಕೆ 1,680 ಟನ್ ಆಮ್ಲಜನಕ ಪೂರೈಕೆ ಮಾಡುವ ಮೂಲಕ ತಾರತಮ್ಯ ಮಾಡಿದೆ. ಈ ಒಕ್ಕೂಟದಲ್ಲಿ ಕನ್ನಡಿಗರೇನು ತಬ್ಬಲಿ ಮಕ್ಕಳೇ?' ಎಂದು ಕುಮಾರಸ್ವಾಮಿ ಹರಿಹಾಯ್ದಿದ್ದಾರೆ.

'ಕರ್ನಾಟಕದ ವಿಚಾರದಲ್ಲಿ ಹೇಳತೀರದ ತಾರತಮ್ಯ ಮಾಡುತ್ತಿರುವ ಕೇಂದ್ರ ಸರ್ಕಾರ ಒಂದು ವಿಷಯ ಸ್ಪಷ್ಟವಾಗಿ ಅರಿಯಬೇಕು. ಇದು ಒಕ್ಕೂಟ ವ್ಯವಸ್ಥೆ. ಒಕ್ಕೂಟ ಸರ್ಕಾರ ನಡೆಸುತ್ತಿರುವವರು ಎಲ್ಲ ರಾಜ್ಯಗಳಿಗೂ ಸಮಾನ ಆದ್ಯತೆ ನೀಡಬೇಕು. ಅನಿವಾರ್ಯದಲ್ಲಿರುವವರ ಅಗತ್ಯಗಳನ್ನು ಮೊದಲು ಪೂರೈಸಬೇಕು. ಅದನ್ನು ಬಿಟ್ಟು ತಾತ್ಸಾರ ಮಾಡಿದರೆ ಜನ ದಂಗೆ ಏಳ್ದಾರು' ಎಂದು ಎಚ್ಚರಿಕೆ ನೀಡಿದ್ದಾರೆ.

120 ಅಲ್ಲ, 1071 ಟನ್ : ಇದಕ್ಕೆ ಪ್ರತಿಕ್ರಿಯೆ ನೀಡಿರುವ ಸಂಸದ ತೇಜಸ್ವಿ ಸೂರ್ಯ, 'ರಾಜ್ಯಕ್ಕೆ 1015 ಟನ್ ಜತೆಗೆ ವಿಶೇಷವಾಗಿ 60 ಟನ್ ಸೇರಿ ಒಟ್ಟು 1071 ಟನ್ ಆಮ್ಲಜನಕ ನೀಡಿದೆ. ಕುಮಾರಸ್ವಾಮಿಯವರು ನೀಡಿರುವ ಲೆಕ್ಕ, ಆಕ್ಸಿಜನ್ ಎಕ್ಸ್‌ಪ್ರೆಸ್ ಮೂಲಕ ಬಂದಿರುವ ಆಮ್ಲಜನಕದ್ದಾಗಿದೆ' ಎಂದು ಹೇಳಿದ್ದಾರೆ.

'ಕರ್ನಾಟಕಕ್ಕೆ ಏಪ್ರಿಲ್ 15 ರ ವೇಳೆಯಲ್ಲಿ 300 ಟನ್ ಸಿಗುತ್ತಿತ್ತು. ಈಗ ಮೇ 11 ಕ್ಕೆ 1015 ಟನ್‌ಗೆ ಏರಿಕೆ ಆಗಿದೆ. ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆ ಆಮ್ಲಜನಕ ಪ್ರಮಾಣವನ್ನೂ ಹೆಚ್ಚಿಸಲಾಗಿದೆ' ಎಂದು ಹೇಳಿರುವ ಅವರು ತಮ್ಮ ಟ್ವೀಟ್‌ನಲ್ಲಿ ಕೇಂದ್ರ ಬಿಡುಗಡೆ ಮಾಡಿರುವ ಆಮ್ಲಜನಕದ ಪ್ರಮಾಣಕ್ಕೆ ಸಂಬಂಧಿಸಿದಂತೆ ಆದೇಶ ಪತ್ರಗಳ ಮಾಹಿತಿಯನ್ನೂ ಲಗತ್ತಿಸಿದ್ದಾರೆ. ತಪ್ಪು ಮಾಹಿತಿಯ ಟ್ವೀಟ್ ಅನ್ನು ತೆಗೆದುಹಾಕುವಂತೆಯೂ ಕುಮಾರಸ್ವಾಮಿಗೆ ಮನವಿ ಮಾಡಿದ್ದಾರೆ.

ನಮ್ಮಿಂದ ತಪ್ಪಾಗಿದೆ: ಡಿವಿಎಸ್

'ಆಮ್ಲಜನಕ ಕೊರತೆ ವಿಚಾರದಲ್ಲಿ ನಮ್ಮಿಂದ ತಪ್ಪಾಗಿದೆ. ಇದರಿಂದಾಗಿ ಕೆಲವು ಕಡೆಗಳಲ್ಲಿ ರೋಗಿಗಳು ಮೃತಪಟ್ಟಿದ್ದಾರೆ. ಇದರಲ್ಲಿ ರಾಜಕಾರಣ ಬೆರೆಸಬಾರದು. ರಾಜಕಾರಣದಲ್ಲೂ ಅಂತಃಕರಣ ಇದೆ ಎಂಬುದನ್ನು ತೋರಿಸಬೇಕಾಗಿದೆ' ಎಂದು ಸದಾನಂದಗೌಡ ಹೇಳಿದರು.

ಕೊರೊನಾ ಮೊದಲ ಅಲೆಯ ವೇಳೆಯಲ್ಲಿ ಆಮ್ಲಜನಕದ ಕೊರತೆ ಆಗಿರಲಿಲ್ಲ. ಎರಡನೇ ಅಲೆಯ ವೇಳೆ ಕೊರತೆ ಆಗಿದೆ. ರಾಜ್ಯಕ್ಕೆ 1015 ಟನ್ ಆಮ್ಲಜನಕವನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಅದರಲ್ಲಿ 500 ಟನ್ ಕಂಟೈನರ್ ಯಾವುದೇ ಕ್ಷಣದಲ್ಲಾದರೂ ರಾಜ್ಯಕ್ಕೆ ಬರಲಿದೆ ಎಂದರು.

ರೆಮ್‌ಡಿಸಿವಿರ್ ಫೆಬ್ರುವರಿ ಕೊನೆಯಲ್ಲಿ 23 ಲಕ್ಷ ಉತ್ಪಾದನೆ ಆಗುತ್ತಿತ್ತು. ತಯಾರಿಕಾ ಕಂಪನಿಗಳ ಜತೆ ಕೇಂದ್ರ ಸರ್ಕಾರ ಮಾತುಕತೆ ನಡೆಸಿದ ಪರಿಣಾಮ ಏಪ್ರಿಲ್ 12 ಕ್ಕೆ 35 ಲಕ್ಷಕ್ಕೆ ತಲುಪಿತು. ಮೇ 4 ರ ವೇಳೆಗೆ 1.05 ಕೋಟಿ ಉತ್ಪಾದನೆ ಆಗುತ್ತಿದೆ ಎಂದು ಹೇಳಿದರು.

1015 ಟನ್‌ಗೆ ಹೆಚ್ಚಳ: ಬಿಎಸ್‌ವೈ

'ಕೇಂದ್ರ ಸರ್ಕಾರ ರಾಜ್ಯಕ್ಕೆ ಆಮ್ಲಜನಕ ಹಂಚಿಕೆಯನ್ನು 965 ಟನ್‌ನಿಂದ 1,015 ಟನ್‌ಗೆ ಹೆಚ್ಚಿಸಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

'ಇದರಲ್ಲಿ 765 ಟನ್ ನಮ್ಮ ರಾಜ್ಯದಿಂದಲೇ ದೊರೆಯುತ್ತಿದೆ. ಉಳಿದಂತೆ, ಸಣ್ಣ ಘಟಕಗಳಿಂದ 60 ಟನ್, ಒಡಿಶಾದಿಂದ 160 ಟನ್ ಮತ್ತು ವಿಶಾಖಪಟ್ಟಣದಿಂದ 30 ಟನ್ ಸಿಗಲಿದೆ. ರಾಜ್ಯದೊಳಗೆ ಲಭ್ಯವಿರುವ ಆಮ್ಲಜನಕವನ್ನು ಸಂಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಜೊತೆಗೆ ಇತರ ರಾಜ್ಯಗಳಿಂದಲೂ ಆಮ್ಲಜನಕ ಪಡೆಯಲು ಪ್ರಯತ್ನಿಸಲಾಗುತ್ತಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾಖಲೆ ನಾಶ: ಸಮಿತಿ ಸಂಶಯ

ಒಂದನೇ ಪುಟದಿಂದ

'ಏ.29ರಿಂದ ಎಲ್‌ಎಂಒ ನಿರ್ವಹಿಸುತ್ತಿರುವ ರಿಜಿಸ್ಟರ್ ಪುಸ್ತಕ ಮತ್ತು ಬಯೋ ಮೆಡಿಕಲ್ ಎಂಜಿನಿಯರ್ ನಿರ್ವಹಿಸುತ್ತಿರುವ ಆಮ್ಲಜನಕ ಬಳಕೆ ರಿಜಿಸ್ಟರ್ ಪುಸ್ತಕಗಳನ್ನು ಗಮನಿಸಿದರೆ ದಾಖಲೆಗಳನ್ನು ನಾಶ ಮಾಡಿರುವುದು ಗಮನಕ್ಕೆ ಬರುತ್ತದೆ. ಎಲ್‌ಎಂಒ ರಿಜಿಸ್ಟರ್ ಪುಸ್ತಕದಲ್ಲಿನ ಪುಟ ಸಂಖ್ಯೆ 3 ಮತ್ತು 4 ಕಾಣೆಯಾಗಿದೆ' ಎಂದು ವರದಿ ಹೇಳಿದೆ.

'ಮೈಸೂರು ಜಿಲ್ಲಾಸ್ಪತ್ರೆಯಲ್ಲಿ 40 ಸಿಲಿಂಡರ್ ಲಭ್ಯವಿದ್ದರೂ, ಮೇ 3ರ ಬೆಳಿಗ್ಗೆ 6 ಗಂಟೆಗಷ್ಟೇ ಅವು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ತಲುಪಿವೆ. ಸಿಸಿಟಿವಿ ದೃಶ್ಯಗಳು ಮತ್ತು ಹಾರ್ಡ್‌ಡಿಸ್ಕ್‌ಗಳನ್ನು ಸಂರಕ್ಷಣೆ ಮಾಡಬೇಕು' ಎಂದು ಮುಖ್ಯ ಕಾರ್ಯದರ್ಶಿಗೆ ಸಮಿತಿ ಶಿಫಾರಸು ಮಾಡಿದೆ.

'ದುರಂತಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ವಶಕ್ಕೆ ಪಡೆದು ಸಂರಕ್ಷಣೆ ಮಾಡಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರಿದ್ದ ಪೀಠ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿದೆ.

'ಮೃತರಿಗೆ ಸಂಬಂಧಿಸಿದ ಕೇಸ್ ಶೀಟ್‌ಗಳಲ್ಲೂ ವ್ಯತ್ಯಾಸ ಆಗಿರುವುದು ಗಮನಕ್ಕೆ ಬಂದಿದೆ. 28 ಕೇಸ್ ಶೀಟ್‌ಗಳನ್ನು ಒಬ್ಬ ವೈದ್ಯರೇ ದಾಖಲಿಸಿದ್ದರೆ, ಒಂದು ಕೇಸ್ ಶೀಟ್ ಅನ್ನು ಮಾತ್ರ ಬೇರೆ ವೈದ್ಯರು ನಮೂದಿಸಿದ್ದಾರೆ. ಸಾವಿನ ಸಮಯ, ದಿನಾಂಕ ಸೇರಿ ಕೆಲ ವಾಸ್ತವ ವಿವರ ಉಲ್ಲೇಖಿಸಿಲ್ಲ. ಕೆಲ ಕಾಲಂಗಳು ಖಾಲಿ ಇದ್ದರೂ ವೈದ್ಯಾಧಿಕಾರಿ ಸಹಿ ಇದೆ' ಎಂದು ತಿಳಿಸಿದೆ.

ಲಸಿಕೆ ಜತೆಗೆ ಪ್ರಧಾನಿಯೂ ಕಾಣೆ: ರಾಹುಲ್

ನವದೆಹಲಿ (ಪಿಟಿಐ): ಕೋವಿಡ್–19ರ ಸಾಂಕ್ರಾಮಿಕ ಸಮಯದಲ್ಲಿ ಲಸಿಕೆಗಳು, ಆಮ್ಲಜನಕ, ಔಷಧಿಗಳ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರೂ ಕಾಣೆಯಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ಮಾಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಲಸಿಕೆ, ಆಮ್ಲಜನಕ, ಔಷಧಿಗಳ ಜತೆಗೆ ಪ್ರಧಾನಿಯೂ ಕಾಣೆಯಾಗಿದ್ದಾರೆ. ಉಳಿದಿರುವುದು ಸೆಂಟ್ರಲ್ ವಿಸ್ತಾ ಯೋಜನೆ, ಔಷಧಿಗಳ ಮೇಲಿನ ಜಿಎಸ್‌ಟಿ ಮತ್ತು ಅಲ್ಲಲ್ಲಿ ಪ್ರಧಾನಿ ಅವರ ಫೋಟೊಗಳು ಮಾತ್ರ ಇವೆ' ಎಂದು ವ್ಯಂಗ್ಯವಾಡಿದ್ದಾರೆ.

ಕೋವಿಡ್–19ರ ಎರಡನೇ ಅಲೆಯನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಅವರು ದೂರಿದ್ದಾರೆ.

ಸಿಎಸಿಗೆ ಸಂದರ್ಶನ ನೀಡಿದ ಎಂಟು ಅಭ್ಯರ್ಥಿಗಳು; ಡಬ್ಲ್ಯು.ವಿ. ರಾಮನ್ ಅವಧಿ ಮುಕ್ತಾಯ

ಮಹಿಳಾ ಕ್ರಿಕೆಟ್ ತಂಡಕ್ಕೆ ರಮೇಶ್ ಕೋಚ್

ನವದೆಹಲಿ (ಪಿಟಿಐ): ಮಾಜಿ ಸ್ಪಿನ್ನರ್ ರಮೇಶ್ ಪೊವಾರ್ ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಮರಳಿದ್ದಾರೆ.

ವರ್ಚುವಲ್ ಆಗಿ ಗುರುವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಅವರನ್ನು ಮದನ್ ಲಾಲ್ ನೇತೃತ್ವದ ಸಮಿತಿ ನೇಮಕ ಮಾಡಿತು. ಇದರಿಂದಾಗಿ ಹಿರಿಯ ಕೋಚ್ ಡಬ್ಲ್ಯು.ವಿ. ರಾಮನ್ ಅವರ ಕಾರ್ಯಾವಧಿಯು ಮುಕ್ತಾಯವಾದಂತಾಗಿದೆ.

ರಾಮನ್ ಸೇರಿದಂತೆ ಒಟ್ಟು ಎಂಟು ಅಭ್ಯರ್ಥಿಗಳು ಮದನ್ ಲಾಲ್ ನೇತೃತ್ವದ ಕ್ರಿಕೆಟ್ ಸಲಹಾ ಸಮಿತಿಗೆ (ಸಿಎಸಿ) ಸಂದರ್ಶನ ನೀಡಿತ್ತು. ಅವರಲ್ಲಿ 42 ವರ್ಷದ ಪೊವಾರ್ ಅವಕಾಶ ಪಡೆದರು.

'ಭಾರತ ಮಹಿಳಾ ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ರಮೇಶ್ ಪೊವಾರ್ ಅವರನ್ನು ನೇಮಕ ಮಾಡಲು ಬಿಸಿಸಿಐ ನಿರ್ಧರಿಸಿದೆ. ಈ ಹುದ್ದೆಗಾಗಿ ಕೆಲವು ದಿನಗಳ ಹಿಂದೆ ಮಂಡಳಿಯು ಅರ್ಜಿ ಆಹ್ವಾನಿಸಿತ್ತು. 35 ಮಂದಿ ಅರ್ಜಿ ಸಲ್ಲಿಸಿದ್ದರು' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಅದರಲ್ಲಿ ಭಾರತ ತಂಡದ ಮಾಜಿ ವಿಕೆಟ್‌ಕೀಪರ್ ಅಜಯ್ ರಾತ್ರಾ, ಮಹಿಳಾ ಆಯ್ಕೆ ಸಮಿತಿಯ ಮಾಜಿ ಮುಖ್ಯಸ್ಥೆ ಹೇಮಲತಾ ಕಲಾ ಅವರೂ ಅರ್ಜಿ ಸಲ್ಲಿಸಿದ್ದರು.

ಎರಡು ವರ್ಷಗಳ ಹಿಂದೆಯೂ ಪೊವಾರ್ ಅವರು ಇದೇ ತಂಡಕ್ಕೆ ಕೋಚ್ ಆಗಿದ್ದರು. ಆಗ ಮಹಿಳಾ ಏಕದಿನ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರೊಂದಿಗಿನ ಭಿನ್ನಾಭಿಪ್ರಾಯ ವಿವಾದದ ರೂಪ ಪಡೆದಿತ್ತು.

ಆಗ ಬಿಸಿಸಿಐ ಅವರನ್ನು ಪದಚ್ಯುತಗೊಳಿಸಿತ್ತು. ಆಗ ತಮ್ಮನ್ನು ಟಿ20 ತಂಡದಿಂದ ಕೈಬಿಟ್ಟದ್ದನ್ನು ಮಿಥಾಲಿ ವಿರೋಧಿಸಿದ್ದರು.

ಮಿಥಾಲಿ ರಾಜ್ ಮತ್ತು ರಮೇಶ್ ಪೊವಾರ್ –ಇನ್‌ಸ್ಟಾಗ್ರಾಮ್ ಚಿತ್ರ

ಪೊವಾರ್ ಅವರ ವಿರುದ್ಧ ಮಂಡಳಿಗೆ ಪತ್ರ ಕೂಡ ಬರೆದಿದ್ದರು. ಇದೀಗ ಮತ್ತೆ ಮಿಥಾಲಿ ನಾಯಕತ್ವದ ತಂಡಕ್ಕೂ ಪೊವಾರ್ ತರಬೇತಿ ನೀಡಬೇಕಿದೆ.

2018ರಲ್ಲಿ ಪೊವಾರ್ ಬದಲು ರಾಮನ್ ಅವರನ್ನು ತಂಡಕ್ಕೆ ನೇಮಕ ಮಾಡಲಾಗಿತ್ತು.

ಅವರ ಮಾರ್ಗದರ್ಶನದಲ್ಲಿ ತಂಡವು ಹೋದ ವರ್ಷ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಫೈನಲ್ ತಲುಪಿತ್ತು.

ಆದರೆ ಕಳೆದ ಮಾರ್ಚ್‌ನಲ್ಲಿ ತವರಿನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆದಿದ್ದ ಸರಣಿಲ್ಲಿ ಭಾರತ ತಂಡವು ಸೋತಿದ್ದು ರಾಮನ್ ಅವರಿಗೆ ಹಿನ್ನಡೆಯಾಗಿ ಪರಿಣಮಿಸಿತು. ಪೊವಾರ್ ಈಚೆಗೆ ಕೋಚ್ ಆಗಿದ್ದ ಮುಂಬೈ ತಂಡವು ವಿಜಯ್ ಹಜಾರೆ ಟ್ರೋಫಿ ಗೆದ್ದಿತ್ತು.

ಜೂನ್ 16ರಂದು ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ತಂಡವು ತೆರಳಲಿದ್ದು, ಪೊವಾರ್ ಅವರಿಗೆ ಇದು ಮೊದಲ ಸವಾಲಾಗಲಿದೆ.

ಸಾಯ್: ಅಥ್ಲೀಟ್ಸ್‌ಗೆ ಕೋವಿಡ್

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ವೇಗನಡಿಗೆ ಅಥ್ಲೀಟ್ ಕೆ.ಟಿ.ಇರ್ಫಾನ್ ಒಳಗೊಂಡಂತೆ ಐವರು ಕ್ರೀಡಾಪಟುಗಳಿಗೆ ಕೋವಿಡ್–19 ಇರುವುದು ಗುರುವಾರ ದೃಢಪಟ್ಟಿದೆ. ಇವರೆಲ್ಲರೂ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದರು.

ಕಳೆದ ಶುಕ್ರವಾರ ಕ್ರೀಡಾಪಟುಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಮರುದಿನ ವರದಿ ಬಂದಿದೆ. ನಾಲ್ವರು ಪುರುಷ ಮತ್ತು ಒಬ್ಬರು ಮಹಿಳಾ ಅಥ್ಲೀಟ್‌ಗೆ ಸೋಂಕು ಇರುವುದು ದೃಢಪಟ್ಟಿದ್ದು ಅವರನ್ನು ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ. ಮಹಿಳಾ ಅಥ್ಲೀಟ್ ಮನೆಯಿಂದ ಬಂದಿದ್ದರು. ಈ ಕ್ರೀಡಾಪಟುಗಳೆಲ್ಲರೂ ಏಪ್ರಿಲ್ 29ರಂದು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದರು ಎಂದು ಸಾಯ್ ಮೂಲಗಳು ತಿಳಿಸಿವೆ. ಇಬ್ಬರು ಅಥ್ಲೀಟ್‌ಗಳು ಲಸಿಕೆ ತೆಗೆದುಕೊಳ್ಳಲಿಲ್ಲ. ಅವರನ್ನು ಮತ್ತೊಮ್ಮೆ ಪರೀಕ್ಷೆಗೆ ಒಳಪಡಿಸಲಾಗಿದ್ದು ಶುಕ್ರವಾರ ವರದಿ ಬರಲಿದೆ ಎನ್ನಲಾಗಿದೆ.


ಕೆ.ಟಿ.ಇರ್ಫಾನ್ –ಎಎಫ್‌ಪಿ ಚಿತ್ರ

31 ವರ್ಷದ ಇರ್ಫಾನ್ 2019ರ ಆರಂಭದಲ್ಲೇ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು. ಜಪಾನ್‌ನ ನೋಮಿಯಲ್ಲಿ ನಡೆದಿದ್ದ ಏಷ್ಯನ್ ರೇಸ್ ವಾಕಿಂಗ್ ಚಾಂಪಿಯನ್‌ಷಿಪ್‌ನ 20 ಕಿಲೋಮೀಟರ್ ನಡಿಗೆಯಲ್ಲಿ ನಾಲ್ಕನೇ ಸ್ಥಾನ ಗಳಿಸುವ ಮೂಲಕ ಅವರು ಈ ಸಾಧನೆ ಮಾಡಿದ್ದರು. ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಪ್ರಿಯಾಂಕ ಗೋಸ್ವಾಮಿ, ಮಧ್ಯಮ ದೂರ ಓಟಗಾರ ಜಿನ್ಸನ್ ಜಾನ್ಸನ್, ದೂರ ಅಂತರದ ಓಟಗಾರ್ತಿ ಪಾರುಲ್ ಚೌಧರಿ, ಸ್ಟೀಪಲ್ ಚೇಸ್ ಪಟು ಚಿಂತಾ ಯಾದವ್ ಮತ್ತು ವೇಗ ನಡಿಗೆಯ ಅಥ್ಲೀಟ್ ಏಕನಾಥ್ ಅವರಿಗೆ ಕಳೆದ ತಿಂಗಳು ಸೋಂಕು ತಗುಲಿತ್ತು. ವೇಗ ನಡಿಗೆಯ ಕೋಚ್ ರಷ್ಯಾದ ಅಲೆಕ್ಸಾಂಡರ್ ಅರ್ಟ್ಸಿಬಶೆವ್ ಅವರಿಗೂ ಆಗ ಸೋಂಕು ದೃಢಪಟ್ಟಿತ್ತು.

ಜಿನ್ಸನ್ ಜಾನ್ಸನ್ ಜೊತೆ ಇದ್ದ ಕಾರಣ ಇರ್ಫಾನ್ ಅವರನ್ನು ಆಗ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆದರೆ ವರದಿ ನೆಗೆಟಿವ್ ಬಂದಿತ್ತು.

ಟೆಸ್ಟ್: ಅಗ್ರಸ್ಥಾನಕ್ಕೇರಿದ ಭಾರತ

ಕೇನ್ ವಿಲಿಯಮ್ಸನ್ ಬಳಗಕ್ಕೆ ಎರಡನೇ ಸ್ಥಾನ; ಮೂರನೇ ಸ್ಥಾನಕ್ಕೆ ಇಂಗ್ಲೆಂಡ್

ದುಬೈ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಗುರುವಾರ ಬಿಡುಗಡೆ ಮಾಡಿರುವ ವಾರ್ಷಿಕ ಟೆಸ್ಟ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದೆ. ಒಟ್ಟು 24 ಪಂದ್ಯಗಳಿಂದ 2914 ಪಾಯಿಂಟ್ಸ್ ಕಲೆ ಹಾಕಿರುವ ಭಾರತ 121 ರೇಟಿಂಗ್ ಪಾಯಿಂಟ್‌ಗಳನ್ನು ಹೊಂದಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತವನ್ನು ಎದುರಿಸಲಿರುವ ನ್ಯೂಜಿಲೆಂಡ್, ರ‍್ಯಾಂಕಿಂಗ್‌ನಲ್ಲಿ ಭಾರತಕ್ಕಿಂತ ಒಂದು ಪಾಯಿಂಟ್‌ನಿಂದ ಹಿಂದೆ ಉಳಿದಿದ್ದು 18 ಪಂದ್ಯಗಳಿಂದ 2166 ಪಾಯಿಂಟ್ಸ್ ಗಳಿಸಿದ್ದು 120 ರೇಟಿಂಗ್ ಪಾಯಿಂಟ್ಸ್ ಹೊಂದಿದೆ.

ಭಾರತ ತಂಡ ಈ ವರ್ಷ ಆಸ್ಟ್ರೇಲಿಯಾ ಎದುರಿನ ಸರಣಿಯನ್ನು 2–1ರಲ್ಲಿ ಮತ್ತು ಇಂಗ್ಲೆಂಡ್ ವಿರುದ್ಧದ ಸರಣಿಯನ್ನು 3–1ರಲ್ಲಿ ಗೆದ್ದುಕೊಂಡಿತ್ತು.

ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಜಯ ಗಳಿಸಿದ ಸಂದರ್ಭದಲ್ಲಿ ಭಾರತ ತಂಡದ ಸಂಭ್ರಮ –ಎಎಫ್‌ಪಿ ಚಿತ್ರ

ಇದು, ರೇಟಿಂಗ್ ಪಾಯಿಂಟ್ ಹೆಚ್ಚಿಸಲು ನೆರವಾಗಿತ್ತು. ವೆಸ್ಟ್ ಇಂಡೀಸ್ ಮತ್ತು ಪಾಕಿಸ್ತಾನ ಎದುರಿನ ಸರಣಿಗಳಲ್ಲಿ 2–0 ಅಂತರದ ಜಯ ಗಳಿಸಿದ್ದು ನ್ಯೂಜಿಲೆಂಡ್‌ಗೆ ಅನುಕೂಲ ಆಗಿತ್ತು.

109 ರೇಟಿಂಗ್ ಪಾಯಿಂಟ್ಸ್ ಗಳಿಸಿರುವ ಇಂಗ್ಲೆಂಡ್ ಒಂದು ಸ್ಥಾನ ಮೇಲಕ್ಕೇರಿ ಮೂರನೇ ಸ್ಥಾನ ಗಳಿಸಿದೆ. ಒಂದು ಸ್ಥಾನ ಕಳೆದುಕೊಂಡಿರುವ ಆಸ್ಟ್ರೇಲಿಯಾ ನಾಲ್ಕಕ್ಕೆ ಕುಸಿದಿದೆ.

ಪಾಕಿಸ್ತಾನ ಮೂರು ಪಾಯಿಂಟ್‌ಗಳನ್ನು ಗಳಿಸುವುದರೊಂದಿಗೆ 94 ಪಾಯಿಂಟ್ ಕಲೆ ಹಾಕಿದ್ದರೂ ಐದನೇ ಸ್ಥಾನದಿಂದ ಮೇಲೇಳಲು ಸಾಧ್ಯವಾಗಲಿಲ್ಲ. ಬಾಂಗ್ಲಾದೇಶವನ್ನು 2–0ಯಿಂದ ಮಣಿಸಿ, ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ಸಮಬಲ ಸಾಧಿಸಿರುವ ವೆಸ್ಟ್ ಇಂಡೀಸ್ (84) ಎರಡು ಸ್ಥಾನಗಳ ಪ್ರಗತಿ ಕಂಡು ಆರಕ್ಕೇರಿದೆ. ಇದು, 2013ರಿಂದ ಈಚೆಗೆ ತಂಡದ ಗರಿಷ್ಠ ಸಾಧನೆಯಾಗಿದೆ.

80 ಪಾಯಿಂಟ್ ಗಳಿಸಿರುವ ದಕ್ಷಿಣ ಆಫ್ರಿಕಾ ಮತ್ತು 78 ಪಾಯಿಂಟ್ ಗಳಿಸಿರುವ ಶ್ರೀಲಂಕಾ ಕ್ರಮವಾಗಿ ಏಳು ಮತ್ತು ಎಂಟನೇ ಸ್ಥಾನಗಳಿಗೆ ಕುಸಿದಿವೆ. ರ‍್ಯಾಂಕಿಂಗ್ ಇತಿಹಾಸದಲ್ಲಿ ದಕ್ಷಿಣ ಆಫ್ರಿಕಾದ ಅತ್ಯಂತ ಕಳಪೆ ಗಳಿಕೆಯಾಗಿದೆ ಇದು. ಬಾಂಗ್ಲಾದೇಶ (46) ಮತ್ತು ಜಿಂಬಾಬ್ವೆ (35) ಉಳಿದ ಎರಡು ಸ್ಥಾನಗಳನ್ನು ಗಳಿಸಿವೆ.

ಲಸಿಕೆ ಹಾಕಿಸಿಕೊಂಡ ಕ್ರಿಕೆಟಿಗ ರಿಷಭ್ ಪಂತ್

ನವದೆಹಲಿ: ಭಾರತ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಗುರುವಾರ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡರು.

ರಿಷಭ್ ಪಂತ್ –ಎಎಫ್‌ಪಿ ಚಿತ್ರ

'ನನ್ನ ಮೊದಲ ಡೋಸ್ ಇವತ್ತು ಪಡೆದುಕೊಂಡೆ. ಸಿಕ್ಕಿದಾಗ ನೀವೂ ಹಾಕಿಸಿಕೊಳ್ಳಿ. ಎಷ್ಟು ಬೇಗ ಲಸಿಕೆ ಹಾಸಿಕೊಳ್ಳುತ್ತೇವೆಯೋ ಅಷ್ಟು ಬೇಗ ಕೊರೊನಾ ವೈರಸ್ ದೂರ ಅಟ್ಟಬಹುದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಆಸ್ಟ್ರೇಲಿಯಾ ಆಟಗಾರರಿಗೆ ತವರಿಗೆ ಮರಳುವ ತವಕ

ಮಾಲಿ, ಮಾಲ್ಡೀವ್ಸ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಭಾಗವಹಿಸಿದ್ದ ಆಸ್ಟ್ರೇಲಿಯಾದ ಆಟಗಾರರು ಭಾನುವಾರ ಮಾಲ್ಡೀವ್ಸ್‌ನಿಂದ ತಮ್ಮ ತವರಿಗೆ ತೆರಳಲಿದ್ದಾರೆ.

ವಿವಿಧ ತಂಡಗಳಲ್ಲಿ ಆಡಿದ್ದ ಆಟಗಾರರು, ಕೋಚ್‌ಗಳು ಮತ್ತು ವೀಕ್ಷಕ ವಿವರಣೆಗಾರರು ತೆರಳಲಿದ್ದಾರೆ. ಎಲ್ಲರೂ ವಿಶೇಷ ವಿಮಾನದಲ್ಲಿ ತವ ರಿಗೆ ಮರಳಲು ಸಿದ್ಧರಾಗಿದ್ದು ಆಸ್ಟ್ರೇಲಿಯಾ ಸರ್ಕಾರದ ಅನುಮತಿಗಾಗಿ ಕಾಯುತ್ತಿದ್ದಾರೆಂದು ಮೂಲಗಳು ತಿಳಿಸಿವೆ.

ಟೂರ್ನಿಯನ್ನು ತಾತ್ಕಾಲಿಕವಾಗಿ ಮುಂದೂಡಿದ ನಂತರ ಆಸ್ಟ್ರೇಲಿಯಾ ಆಟಗಾರರರು ಮಾಲ್ಡೀವ್ಸ್‌ಗೆ ತೆರಳಿದ್ದರು. ಭಾರತದಿಂದ ತನ್ನ ದೇಶಕ್ಕೆ ಬರುವ ವಿಮಾನಗಳನ್ನು ಆಸ್ಟ್ರೇಲಿಯಾ ನಿರ್ಬಂಧಿಸಿದ್ದ ಕಾರಣದಿಂದಾಗಿ ಅವರು ಮಾಲಿ ಯಲ್ಲಿ ಒಂದು ವಾರ ಇರಲು ನಿರ್ಧರಿಸಿದ್ದರು.

'ಮೇ 16ರಂದು ಇಲ್ಲಿಂದ ಮಲೇಷ್ಯಾ ಮಾರ್ಗವಾಗಿ ಸಿಡ್ನಿಗೆ ವಿಶೇಷ ವಿಮಾನದಲ್ಲಿ ತೆರಳಲು 38 ಜನರ ಬಳಗವು ಸಿದ್ಧವಾಗಿದೆ. ಅಲ್ಲಿ ತಲುಪಿದ ನಂತರ 14 ದಿನಗಳ ಕಡ್ಡಾಯ ಕ್ವಾರಂಟೈನ್ ಪಾಲಿಸಬೇಕಿದೆ' ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೋ ವರದಿ ಮಾಡಿದೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಆಗಿರುವ ಆಸ್ಟ್ರೇಲಿಯಾದ ಮೈಕ್ ಹಸ್ಸಿ ಅವರು ಕೋವಿಡ್ ಸೋಂಕಿಗೊಳಗಾದ ಕಾರಣ ಚೆನ್ನೈನಲ್ಲಿಯೇ ಉಳಿದುಕೊಂಡಿದ್ದಾರೆ. ಈಗಲೂ ಅವರು ಕ್ವಾರಂಟೈನ್‌ನಲ್ಲಿದ್ದಾರೆ.

ಹಾಕಿ ದಿಗ್ಗಜರ ಕುಟುಂಬಕ್ಕೆ ನೆರವು

ನವದೆಹಲಿ: ಕೋವಿಡ್–19 ರಿಂದ ನಿಧನರಾದ ಮಾಜಿ ಹಾಕಿ ಆಟಗಾರರಾದ ಎಂ.ಕೆ.ಕೌಶಿಕ್ ಮತ್ತು ರವಿಂದರ್ ಪಾಲ್ ಸಿಂಗ್ ಅವರ ಕುಟುಂಬಕ್ಕೆ ತಲಾ ₹ ಐದು ಲಕ್ಷ ಮೊತ್ತವನ್ನು ಕೇಂದ್ರ ಸರ್ಕಾರ ಘೋಷಿಸಿದೆ. 1980ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಕೌಶಿಕ್ ಮತ್ತು ರವಿಂದರ್ ಪಾಲ್ ಇದ್ದರು. ಕೌಶಿಕ್ ಅವರು ಭಾರತದ ಕೋಚ್ ಕೂಡ ಆಗಿದ್ದರು.

'ಇಬ್ಬರು ಹಾಕಿ ದಿಗ್ಗಜರನ್ನು ಭಾರತ ಕಳೆದುಕೊಂಡಿದೆ. ದೇಶದ ಕ್ರೀಡೆಗೆ ಅವರ ಕೊಡುಗೆ ಮರೆಯಲು ಸಾಧ್ಯವಿಲ್ಲ' ಎಂದು ಮೊತ್ತವನ್ನು ಘೋಷಿಸಿ ಮಾಡಿರುವ ಟ್ವೀಟ್‌ನಲ್ಲಿ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1487 (1475)
ಸೂರ್ಯಕಾಂತಿ (ರಿಫೈನ್ಡ್)	₹1710 (1720)
ಪಾಮೋಲಿನ್	₹1380(1370)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹156-353
ದ್ವಿತಳಿ (ಬಿ.ವಿ)	₹341-375

ಮೂಡಿಗೆರೆ ಕಾಫಿ

ಮುದ್ರೆಮನೆ (50 ಕೆ.ಜಿಗೆ ₹ ಗಳಲ್ಲಿ)

ಎಪಿ	₹10400
ಎಸಿ	₹4200
ಆರ್‌ಪಿ	₹5100
ಆರ್‌ಸಿ	₹3000

ಭರವಸೆ ಕೈಬಿಡದ ಕಿದಂಬಿ ಶ್ರೀಕಾಂತ್

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಕೂಟಕ್ಕೆ ಅರ್ಹತೆ ಗಳಿಸಲು ಅವಕಾಶವಿದ್ದ ಮೂರು ಟೂರ್ನಿಗಳು ರದ್ದಾದ ಕಾರಣ ಟೋಕಿಯೊ ಟಿಕೆಟ್ ಕನಸಿಗೆ ಅಡ್ಡಿಯಾಗಿದ್ದರೂ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಅಂತಿಮ ನಿರ್ಧಾರಕ್ಕೆ ಕಾಯುತ್ತಿದ್ದು ಭರವಸೆ ಕಳೆದುಕೊಂಡಿಲ್ಲ ಎಂದು ಶ್ರೀಕಾಂತ್ ತಿಳಿಸಿದ್ದಾರೆ.

ಶ್ರೀಕಾಂತ್ – ಎಎಫ್‌ಪಿ ಚಿತ್ರ

ಒಲಿಂಪಿಕ್ಸ್‌ಗೂ ಮೊದಲು ನಡೆಯಬೇಕಾಗಿದ್ದ ಕೊನೆಯ ಸ್ಪರ್ಧೆಯಾದ ಸಿಂಗಪುರ ಓಪನ್ ಟೂರ್ನಿಯನ್ನು ಕೋವಿಡ್ ತಂದೊಡ್ಡಿರುವ ವಿಷಮ ಸ್ಥಿತಿಯಿಂದಾಗಿ ಬುಧವಾರ ರದ್ದುಗೊಳಿಸಲಾಗಿತ್ತು. ಇದನ್ನು ಜೂನ್ ಒಂದರಿಂದ ಆರರ ವರೆಗೆ ನಿಗದಿಪಡಿಸಲಾಗಿತ್ತು. ಇದಕ್ಕೂ ಮೊದಲು ಮಲೇಷ್ಯಾ ಓಪನ್ ಮತ್ತು ಇಂಡಿಯಾ ಓಪನ್ ಟೂರ್ನಿಗಳನ್ನು ರದ್ದುಗೊಳಿಸಲಾಗಿತ್ತು.

ರಿಟೇಲ್ ಉದ್ಯಮಕ್ಕೆ ತುರ್ತು ಬೆಂಬಲ ಅಗತ್ಯ: ಆರ್‌ಎಐ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆ ನಿಯಂತ್ರಿಸಲು ಹೇರಿರುವ ನಿರ್ಬಂಧಗಳಿಂದಾಗಿ ರಿಟೇಲ್ ಉದ್ಯಮ ಸಂಕಷ್ಟಕ್ಕೆ ಒಳಗಾಗಿದ್ದು, ತುರ್ತು ಹಣಕಾಸಿನ ಬೆಂಬಲದ ಅಗತ್ಯ ಇದೆ ಎಂದು ಭಾರತೀಯ ರಿಟೇಲ್ ವರ್ತಕರ ಸಂಘವು (ಆರ್‌ಎಐ) ಹೇಳಿದೆ.

ದೇಶದ ವಿವಿಧ ಭಾಗಗಳಲ್ಲಿ ಲಾಕ್‌ಡೌನ್ ಅವಧಿ ವಿಸ್ತರಣೆ ಆಗುತ್ತಿದೆ. ಇದರಿಂದಾಗಿ ರಿಟೇಲ್ ವರ್ತಕರಿಗೆ ಕೆಲಸಗಾರರನ್ನು ಉಳಿಸಿಕೊಳ್ಳುವುದು ಮತ್ತು ವಹಿವಾಟು ನಡೆಸುವುದು ಕಷ್ಟವಾಗುತ್ತಿದೆ. ಉದ್ಯಮಕ್ಕೆ ಬಂಡವಾಳದ ನೆರವು ನೀಡುವ ಅಗತ್ಯ ಇದೆ ಎಂದು ತಿಳಿಸಿದೆ.

ಲಾಕ್‌ಡೌನ್‌ನಿಂದ ವಹಿವಾಟು

ನಡೆಯದೇ ಇದ್ದರೂ ರಿಟೇಲ್ ವರ್ತಕರು ಕೆಲಸಗಾರರಿಗೆ ಸಂಬಳ ನೀಡಬೇಕು, ವಿದ್ಯುತ್ ಶುಲ್ಕ, ಬಾಡಿಗೆ, ಆಸ್ತಿ ತೆರಿಗೆ ಇತ್ಯಾದಿ ಪಾವತಿಸಬೇಕು. ಉದ್ಯಮದಲ್ಲಿ ನಗದು ಹರಿವು ಸರಾಗವಾಗಿ ಆಗುತ್ತಿಲ್ಲ ಎಂದು ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ.

ರಿಟೇಲ್ ವಲಯವು ಎದುರಿಸುತ್ತಿರುವ ಹಣಕಾಸಿನ ಸಮಸ್ಯೆಗಳಿಂದ ಈ ಉದ್ಯಮದಲ್ಲಿ ತೊಡಗಿಕೊಂಡವರ ಜೀವನ ನಿರ್ವಹಣೆ ಕಷ್ಟವಾಗಲಿದೆ. ರಿಟೇಲ್ ವರ್ತಕರು ಸಾಲ ಮರುಪಾವತಿಸಲು ಆಗದೇ ಇರುವ ಸ್ಥಿತಿಗೆ ಬಂದರೆ ಹಣಕಾಸು ಸಂಸ್ಥೆಗಳ ಮೇಲೆಯೂ ಪರಿಣಾಮ ಬೀರಲಿದೆ. ರಿಟೇಲ್ ವರ್ತಕರಿಂದ ಎಂಎಸ್‌ಎಂಇ ವಲಯಕ್ಕೂ ಹಣ ಪಾವತಿ ಆಗುವುದಿಲ್ಲ ಎಂದು ಅದು ಹೇಳಿದೆ.

ಕೊನೆಯ ಹಂತದ ಕೆಲಸಗಾರರಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡುವುದು ಮತ್ತು ತುರ್ತಾಗಿ ಹಣಕಾಸಿನ ಬೆಂಬಲ ಒದಗಿಸುವುದರಿಂದ ಮಾತ್ರವೇ ಈ ಉದ್ಯಮವನ್ನು ಕುಸಿಯುವುದರಿಂದ ರಕ್ಷಿಸಲು ಸಾಧ್ಯ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಕುಮಾರ್ ರಾಜಗೋಪಾನ್ ಅವರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

13-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1450 (1440)
ಪಾಮ್ ವಾರದ ಡೆಲಿವರಿ	1378 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,550 (47,700)

ಬೆಳ್ಳಿ ಕೆ.ಜಿ 70,650 (71,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನದ ಬಾಂಡ್: 2021–22ರ ಮೊದಲ ಕಂತು ಮೇ 17ರಿಂದ

ನವದೆಹಲಿ (ಪಿಟಿಐ): ಚಿನ್ನದ ಬಾಂಡ್‌ನ 2021–22ನೇ ಸಾಲಿನ ಮೊದಲ ಕಂತು ಸೋಮವಾರದಿಂದ (ಮೇ 17) ಆರಂಭವಾಗಲಿದ್ದು, 21ಕ್ಕೆ ಮುಕ್ತಾಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮೇ 25ರಂದು ಬಾಂಡ್ ವಿತರಣೆ ಆಗಲಿದೆ.

ಮೇ ತಿಂಗಳಿನಿಂದ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ಒಟ್ಟು ಆರು ಕಂತುಗಳಲ್ಲಿ ಚಿನ್ನದ ಬಾಂಡ್ ವಿತರಣೆ ನಡೆಯಲಿದೆ ಎಂದು ಹೇಳಿದೆ.

ಬ್ಯಾಂಕುಗಳು (ಕಿರು ಹಣಕಾಸು ಬ್ಯಾಂಕ್ ಮತ್ತು ಪೇಮೆಂಟ್ ಬ್ಯಾಕ್ಸ್ ಹೊರತುಪಡಿಸಿ), ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ ಎಂದು ಸಚಿವಾಲಯವು ತಿಳಿಸಿದೆ. ಪ್ರಕಟಣೆಯ ಪ್ರಕಾರ, ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ.

ಬಿಟ್‌ಕಾಯಿನ್ ಬಳಕೆಗೆ ಟೆಸ್ಲಾ ಬ್ರೇಕ್

ಸ್ಯಾನ್‌ಫ್ರಾನ್ಸಿಸ್ಕೊ (ಎಎಫ್‌ಪಿ): ಬಿಟ್‌ಕಾಯಿನ್ ಪಾವತಿಸಿ ವಿದ್ಯುತ್ ಚಾಲಿತ ಕಾರು ಖರೀದಿಸಬಹುದು ಎಂಬ ಘೋಷಣೆಗೆ ಟೆಸ್ಲಾ ಕಂಪನಿಯು ಬ್ರೇಕ್ ಹಾಕಿದೆ. ಬಿಟ್‌ಕಾಯಿನ್ ಸೃಷ್ಟಿಸುವ ಪ್ರಕ್ರಿಯೆಯು ಪರಿಸರಕ್ಕೆ ಹಾನಿ ಉಂಟುಮಾಡುವಂಥದ್ದು ಎಂಬ ಕಾರಣಕ್ಕೆ ಟೆಸ್ಲಾ ಹೀಗೆ ಮಾಡಿದೆ.

'ಬಿಟ್‌ಕಾಯಿನ್ ಸೃಷ್ಟಿಸಲು ಹಾಗೂ ಬಿಟ್‌ಕಾಯಿನ್ ಬಳಸಿ ನಡೆಸುವ ವಹಿವಾಟಿಗೆ ಪಳೆಯುಳಿಕೆ ಇಂಧನದಿಂದ ಸಿಗುವ ವಿದ್ಯುತ್ ಬಳಕೆ ಆಗುತ್ತಿರುವುದು ನಮ್ಮಲ್ಲಿ ಕಳವಳ ಮೂಡಿಸಿದೆ. ಪಳೆಯುಳಿಕೆ ಇಂಧನವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಗೆ ಉಗುಳುವಂಥದ್ದು' ಎಂದು ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಎಲಾನ್ ಮಸ್ಕ್ ಅವರು ಟ್ವೀಟ್ ಮಾಡಿದ್ದಾರೆ.

'ಕ್ರಿಪ್ಟೊಕರೆನ್ಸಿಯು ಒಳ್ಳೆಯದು, ಇದರ ಭವಿಷ್ಯ ಭರವಸೆದಾಯಕವಾಗಿದೆ ಎಂದು ನಾವು ನಂಬಿದ್ದೇವೆ. ಆದರೆ ಇದರ ಹೆಸರಿನಲ್ಲಿ ಪರಿಸರದ ಮೇಲೆ ಅಪಾರ ಪ್ರಮಾಣದ ಹಾನಿ ಆಗಬಾರದು' ಎಂದೂ ಅವರು ಹೇಳಿದ್ದಾರೆ. ಹೊಸ ಬಿಟ್‌ಕಾಯಿನ್‌ಗಳ ಸೃಷ್ಟಿಗೆ ಅಪಾರ ಪ್ರಮಾಣದಲ್ಲಿ ವಿದ್ಯುತ್ ಬೇಕಾಗುತ್ತದೆ.

ಮಸ್ಕ್ ಅವರು ಟ್ವೀಟ್ ಮಾಡಿದ ಕೆಲವು ಹೊತ್ತಿನಲ್ಲಿ ಬಿಟ್‌ಕಾಯಿನ್ ಮೌಲ್ಯದಲ್ಲಿ ಕುಸಿತ ಕಂಡು ಬಂತು. ನಂತರ ತುಸು ಚೇತರಿಕೆ ದಾಖ ಲಿಸಿತು. ವಿದ್ಯುತ್ ಚಾಲಿತ ಕಾರು ಖರೀದಿಸುವವರು ಬಿಟ್‌ಕಾಯಿನ್ ಮೂಲಕ ಹಣ ಪಾವತಿಸಬಹುದು ಎಂಬುದನ್ನು ಟೆಸ್ಲಾ ಮಾರ್ಚ್ ತಿಂಗಳಿನಿಂದ ಜಾರಿಗೆ ತಂದಿತ್ತು. ಟೆಸ್ಲಾ ಕಂಪನಿಯು ತಾನು ಹೊಂದಿರುವ ಬಿಟ್‌ಕಾಯಿನ್‌ಗಳನ್ನು ಮಾರುವುದಿಲ್ಲ ಎಂದು ಮಸ್ಕ್ ಹೇಳಿದ್ದಾರೆ. ಬಿಟ್‌ಕಾಯಿನ್ ಸೃಷ್ಟಿಸುವ ಪ್ರಕ್ರಿಯೆಯು ಇನ್ನಷ್ಟು ಪರಿಸರ ಸ್ನೇಹಿ ಆದ ನಂತರ ಅದರ ಬಳಕೆ ಮುಂದುವರಿಸಲು ಕಂಪನಿ ಆಲೋಚಿಸಿದೆ. ಟೆಸ್ಲಾ ಕಂಪನಿಯು ಭಾರತದಲ್ಲಿ ಕೂಡ ಕಾರ್ಯಾಚರಣೆ ಆರಂಭಿಸಲಿದೆ. ಬೆಂಗಳೂರಿನಲ್ಲಿ ಮಳಿಗೆ ತೆರೆಯಲು ಸೂಕ್ತ ಜಾಗ ಅರಸುತ್ತಿದೆ ಎಂಬ ವರದಿಗಳು ಇವೆ.

ಲಸಿಕೆ ಕೊರತೆಯಿಂದ ಜೀವಕ್ಕೆ ಅಪಾಯ: ಫಿಕ್ಕಿ ಆತಂಕ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆಗೆ ಬರುತ್ತಿರುವ ಬೇಡಿಕೆ ಹಾಗೂ ಆಗುತ್ತಿರುವ ಪೂರೈಕೆ ನಡುವೆ ಭಾರಿ ಅಂತರ ಇದೆ, ಲಸಿಕೆಯ ತೀವ್ರ ಕೊರತೆಯು ಜನರ ಜೀವವನ್ನು ಅಪಾಯಕ್ಕೆ ತಂದೊಡ್ಡಿದೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಫಿಕ್ಕಿ) ಆತಂಕ ವ್ಯಕ್ತಪಡಿಸಿದೆ.

'ಕೊರೊನಾ ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಲಸಿಕೆಗಳು ಲಭ್ಯವಾಗುವ ಪ್ರಮಾಣವನ್ನು ಸಮರೋಪಾದಿಯಲ್ಲಿ ಹೆಚ್ಚಿಸಬೇಕು' ಎಂದು ಅದು ಪ್ರಕಟಣೆಯಲ್ಲಿ ಸರ್ಕಾರವನ್ನು ಕೋರಿದೆ.

ಹೊಸ ಡುಕಾಟಿ ಸ್ಟ್ರೀಟ್‌ಫೈಟರ್ ವಿ4, ವಿ4 ಎಸ್ ಬಿಡುಗಡೆ

ನವದೆಹಲಿ (ಪಿಟಿಐ): ಸೂಪರ್ ಬೈಕ್ ತಯಾರಿಸುವ ಇಟಲಿಯ ಡುಕಾಟಿ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ ಸ್ಟ್ರೀಟ್‌ಫೈಟರ್ ವಿ4 ಮತ್ತು ವಿ4 ಎಸ್ ಮಾದರಿಗಳನ್ನು ಗುರುವಾರ ಬಿಡುಗಡೆ ಮಾಡಿದೆ. ಎಕ್ಸ್ ಷೋರೂಂ ಬೆಲೆ ಕ್ರಮವಾಗಿ ₹ 19.99 ಲಕ್ಷ ಮತ್ತು ₹ 22.99 ಲಕ್ಷ ಇದೆ (ದೆಹಲಿ ಎಕ್ಸ್‌ಷೋರೂಂನಂತೆ).

ಎರಡೂ ಮಾದರಿಗಳು ಬಿಎಸ್6 ಮಾನದಂಡಕ್ಕೆ ಪೂರಕವಾದ ಎಂಜಿನ್‌ಗಳನ್ನು ಹೊಂದಿವೆ. ಬೆಂಗಳೂರು, ದೆಹಲಿ–ಎನ್‌ಸಿಆರ್, ಮುಂಬೈ, ಪುಣೆ, ಅಹಮದಾಬಾದ್, ಹೈದರಾಬಾದ್, ಕೊಚ್ಚಿ, ಕೋಲ್ಕತ್ತ ಮತ್ತು ಚೆನ್ನೈನ ವಿತರಣಾ ಕೇಂದ್ರಗಳಲ್ಲಿ ಬುಕಿಂಗ್ ಆರಂಭವಾಗಿದೆ. ಲಾಕ್‌ಡೌನ್ ತೆರವಾದಾಗ ವಿತರಣೆ ಕಾರ್ಯ ಆರಂಭವಾಗಲಿದೆ ಎಂದು ಕಂಪನಿ ತಿಳಿಸಿದೆ.